# ಅನುದಿನದ ಆಹಾರ

April 2018



Tree - 19
Fruit - 4
Pages - 44

Annual Subscription Rs. 100/-
Single Copy Rs. 10/-

# 2018 - ಏಪ್ರಿಲ್ ಮತ್ತು ಮೇ ತಿಂಗಳಲ್ಲಿ

ನಿಮಗೆ ಒಂದು ಸುಸಂದರ್ಭ


**All Inclusive**

Flight Ticket,
Entrance Fees, Boat Ride,
Breakfast, Lunch, Dinner,
Guide, Superior Hotels.

# ಪವಿತ್ರ ದೇಶದ ಪ್ರವಾಸ

**ಐಗುಪ್ತ ಇಸ್ರಾಯೇಲ್ ಪಾಲೆಸ್ಟೈನ್ ಜೋರ್ಡಾನ್**

ಸತ್ಯವೇದದ ಪವಿತ್ರ ದೇಶವಾದ ಇಸ್ರಾಯೇಲ್ ವೀಕ್ಷಿಸಲು,
ಕರ್ತನಾದ ಯೇಸು ಕ್ರಿಸ್ತನ ಪವಿತ್ರ ಪಾದಗಳು ನಡೆದಾಡಿದ ಈ
ಸ್ಥಳಗಳನ್ನು ಸತ್ಯವೇದಾಧ್ಯಯನದೊಂದಿಗೆ ಸಂದರ್ಶಿಸಲು ಬನ್ನಿರಿ...



**EGYPT**
River Nile, Mt. Sinai,
Burning Bush
**BETHLEHEM**
Jesus Birth Place
Shepherd Field
**JERUSALEM**
Mt. Olives,
Gethsemane
Way of Cross
**GARDEN TOMB**
Jericho, Dead Sea
Mt. Zion, Bethany
Bethesda,
**NAZARETH**
Capernaum,
Cana, Carmel
**JORDAN**
Mt. Nebo,

**ಇತರ ಅನೇಕ ಸ್ಥಳಗಳು...**

ಪ್ರವಾಸ ಸುಕ್ಷೇಮವಾಗಿ ಕೂಡಿರಲೆಂದು ಪ್ರಾರ್ಥಿಸಿರಿ

ವಿವರಗಳಿಗಾಗಿ ಸಂಪರ್ಕಿಸಿರಿ
Ph: 080 - 25712448
e-mail: goldenbibletext@gmail.com
Website: anudhinadaahara.weebly.com
Mob: 93419 68008, 98447 80035, 9986 571 571

# ಅನುದಿನದ ಆಹಾರ
Anudhinada Ahara

ಏಪ್ರಿಲ್ 2018 APRIL

ಮರ 19 ಹಣ್ಣು 04 Tree 19 Fruit 04


## ಪ್ರಾರ್ಥನೆಯೂ, ಆಯುಧಗಳೂ!

ಕಡೇ ಮಾತೇನೆಂದರೆ ನೀವು ಕರ್ತನನ್ನೂ ಆತನ ಅತ್ಯಧಿಕವಾದ ಶಕ್ತಿಯನ್ನೂ ಆಶ್ರಯಿಸಿಕೊಂಡವರಾಗಿ ಬಲಗೊಳ್ಳಿರಿ. ಸೈತಾನನ ತಂತ್ರೋಪಾಯಗಳನ್ನು ನೀವು ಎದುರಿಸಿ ನಿಲ್ಲುವದಕ್ಕೆ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ. ನಾವು ಹೋರಾಡುವದು ಮನುಷ್ಯಮಾತ್ರದವರ ಸಂಗಡವಲ್ಲ ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ, ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶ ಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ (ಎಫೆ 6:10–12).

ನೀವು ಎಂದು ಯೇಸುಕ್ರಿಸ್ತನನ್ನು ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡು ಆತನ ಕುಟುಂಬದೊಳಗೆ ಬರುವಿರೋ ಅಂದಿನಿಂದ ಅಂಧಕಾರದ ಅಧಿಪತಿಯಾದ ಸೈತಾನನು ನಿಮಗೆ ವಿರೋಧವಾಗಿ ಎದ್ದೇಳುವನು. ನಿಮ್ಮನ್ನು ಹೇಗಾದರೂ ಪುನಃ ಪಾಪದಲ್ಲಿ ಬೀಳಿಸಿ, ಪುನಃ ತನ್ನ ಮಗುವಾಗಿಸಿಕೊಳ್ಳಲು ಅವನು ಪ್ರಯತ್ನಿಸುವನು.

ನಮಗೆ ಕಾಣಲಾಗದ ಪ್ರಪಂಚದಲ್ಲಿ ಒಂದು ಕಡೆ ಪರಿಶುದ್ಧನಾದ ದೇವರೂ, ದೇವದೂತರೂ, ಕೆರೂಬಿಗಳೂ, ಸೆರಾಫಿಯರು ಇರುವರು. ಮತ್ತೊಂದು ಕಡೆ ಸೈತಾನನೂ ಅವನ ಸಮೂಹವೂ ಇರುವರು. ಈ ಪ್ರಪಂಚದಲ್ಲಿ ದೇವರು ತನ್ನ ರಾಜ್ಯವನ್ನು ಸ್ಥಾಪಿಸಲು ಬಯಸುವನು. ಅದೇ ಸಮಯದಲ್ಲಿ ಸೈತಾನನೂ ತನ್ನ ರಾಜ್ಯವನ್ನು ಸ್ಥಾಪಿಸಲು ಪ್ರಯತ್ನಿಸುವನು. ಇದರಲ್ಲಿ ಯಾರು ಜಯಿಸುವರು? ನಿಮ್ಮ ಆತ್ಮ ಕರ್ತನನ್ನು ಆಶ್ರಯಿಸಿದ್ದರೆ, ಕರ್ತನು ಜಯಿಸುವನು. ಆದರೆ ಸೈತಾನನನ್ನು ಅವನು ತೋರಿಸುವ ಪಾಪಭೋಗಗಳನ್ನು ಆಶ್ರಯಿಸಿಕೊಂಡಿದ್ದರೆ, ಸೈತಾನನು ಜಯಿಸುವನು. ಅವನು ನಿಮ್ಮನ್ನು ನರಕಕ್ಕೆ ಎಳೆದೊಯ್ಯಲು ಪ್ರಯತ್ನಿಸುವನು.

ದೇವಮಕ್ಕಳಿಗೆ ವಿರೋಧವಾಗಿ ಸೈತಾನನು ಹೂಡುವ ಅಗ್ನಿ ಅಸ್ತ್ರಗಳನ್ನು ವಿಷದ ಬಾಣಗಳನ್ನು ಜಯಿಸಲೆಂದೇ ಕರ್ತನು ಕೆಲವು ಸರ್ವಾಯುಧಗಳನ್ನು ತನ್ನ ಮಕ್ಕಳಿಗೆ ನೀಡಿರುವನು.

### 1. ಯೇಸುಕ್ರಿಸ್ತನ ರಕ್ತ

ಸೈತಾನನನ್ನು ಬರಿಕೈಯಿಂದಲೋ, ನಿಮ್ಮ ಸ್ವಂತ ಬಲದಿಂದಲೋ, ಎದುರಿಸಿ ನಿಲ್ಲಲು ಸಾಧ್ಯವಿಲ್ಲ. ಕೆಟ್ಟ ಕನಸುಗಳು ಬರುವದಾ? ಸೈತಾನನು ನಿಮ್ಮ ಮನೆಯಲ್ಲಿ

ಸಂಚರಿಸುವನಾ? ಮಾಟಮಂತ್ರಗಳ ತೊಂದರೆಗೆ ಒಳಗಾಗಿರುವಿರಾ? ಹೆದರಬೇಡಿರಿ. ಕ್ರಿಸ್ತನ ಗಾಯಗೊಂಡ ಕರಗಳಿಂದ ಸುರಿಯುವ ರಕ್ತವನ್ನು ಕೈಗಳಲ್ಲಿ ತೆಗೆದುಕೊಂಡು, ಸೈತಾನನ ಕಾರ್ಯಗಳ ಮೇಲೆ ಚೆಲ್ಲಿ ಆಸಕ್ತಿಯಿಂದ ಪ್ರಾರ್ಥಿಸಿರಿ. ಸೈತಾನನನ್ನು ಎದುರಿಸಿ ನಿಲ್ಲಿರಿ. ಅವನು ನಿಮ್ಮನ್ನು ಬಿಟ್ಟು ಓಡಿ ಹೋಗುವನು. ಯೇಸುಕ್ರಿಸ್ತನ ರಕ್ತವೆಂದು ಹೇಳಿ ಅವನನ್ನು ಎದುರಿಸಿ ನಿಲ್ಲಿರಿ.

ನೀವೂ ನಿಮ್ಮ ಕುಟುಂಬದವರೂ ಕುರಿಮರಿಯಾದಾತನ ರಕ್ತದೊಳಗೆ ಮರೆಮಾಡಿಕೊಳ್ಳುವಾಗ ಅದುವೇ ಪರಾತ್ಪರನಾದ ಸರ್ವಶಕ್ತನಾದಾತನ ನೆರಳಾಗಿರುವದು. 'ಅವರು ಯಜ್ಞದ ಕುರಿಯಾದಾತನ ರಕ್ತದಿಂದಲೂ ತಮ್ಮ ಸಾಕ್ಷಿಯ ನುಡಿಯಿಂದಲೂ ಅವನನ್ನು ಜಯಿಸಿದರು' (ಪ್ರಕ 12:11).

## 2 .ಕರ್ತನ ನಾಮ!

ಭೂಮಿಯಲ್ಲಿರುವ ಎಲ್ಲಾ ಜನಗಳೂ ನಿಮ್ಮನ್ನು ಯೆಹೋವನ ಜನರೆಂದು ತಿಳಿದುಕೊಂಡು ನಿಮಗೆ ಭಯಪಡುವರು (ಧರ್ಮೋ28:10). ಕರ್ತನ ನಾಮವನ್ನು ಯಾವಾಗಲೂ ನೀವು,ನಿಮ್ಮ ಮುಂದೆ ಇಟ್ಟುಕೊಂಡಿರುವಿರಾದರೆ, ನಿಮ್ಮ ಜೀವಮಾನಕಾಲದಲ್ಲೆಲ್ಲಾ, ಒಬ್ಬನೂ ನಿಮ್ಮನ್ನು ಎದುರಿಸಿ ನಿಲ್ಲುವದಿಲ್ಲ.

ತನಗಿಂತ ಬಲಿಷ್ಟನಾದ ಗೊಲಿಯಾತನನ್ನು ಎದುರಿಸಿ ನಿಲ್ಲಲು, ದಾವೀದನಿಗೆ ಅಷ್ಟೊಂದು ಧೈರ್ಯ ಉಂಟಾಗಲು ಕಾರಣವೇನು? ಅವನು ಯಾವಾಗಲೂ ಕರ್ತನ ನಾಮವನ್ನು ತನ್ನ ಮುಂದಾಗಿ ಇರಿಸಿಕೊಂಡದ್ದೇ ಅಗಿದೆ. "ಆಗ ದಾವೀದನು ಅವನಿಗೆ ನೀನು ಈಟಿ ಕತ್ತಿ ಬರ್ಜಿಗಳೊಡನೆ ನನ್ನ ಬಳಿಗೆ ಬರುತ್ತೀ, ನಾನಾದರೋ ನೀನು ಹೀಯಾಳಿಸಿದಂಥ ಸೇನಾಧೀಶ್ವರನೂ, ಇಸ್ರಾಯೇಲ್ಯರ ಯುದ್ಧ ಭಟರ ದೇವರೂ ಆಗಿರುವ ಯೆಹೋವನ ನಾಮದೊಡನೆ ನಿನ್ನ ಬಳಿಗೆ ಬರುತ್ತೇನೆ (1ಸಮು 17:45).

ಅಪೊ.ಪೇತ್ರನ ಸೇವೆಯ ಜಯದ ರಹಸ್ಯವೇನು? 'ಆಗ ಪೇತ್ರನು ಬೆಳ್ಳಿ ಬಂಗಾರವಂತೂ ನನ್ನಲ್ಲಿಲ್ಲಾ, ನನ್ನಲ್ಲಿರುವದನ್ನು ನಿನಗೆ ಕೊಡುತ್ತೇನೆ.'ನಜರೇತಿನ ಯೇಸುಕ್ರಿಸ್ತನ ಹೆಸರಿನಲ್ಲಿ ಎದ್ದು ನಡೆದಾಡು' ಎಂದು ಹೇಳಿ ಅವನ ಬಲಗೈ ಹಿಡಿದು ಎತ್ತಿದನು. ಆ ಕ್ಷಣವೇ ಅವನ ಕಾಲುಗಳಿಗೂ ಹರಡುಗಳಿಗೂ ಬಲಬಂತು ಅವನು ಹಾರಿನಿಂತು ನಡೆದಾಡಿದನು' (ಅ.ಕೃ 3:6–8).

ಆದ್ದರಿಂದ ನೀವು ಏನು ಮಾಡಿದರೂ ಅದನ್ನು ಕರ್ತನಾದ ಯೇಸುವಿನ ಹೆಸರಿನಲ್ಲಿ ಮಾಡಿರಿ (ಕೊಲೊ 3:17).ಕರ್ತನ ನಾಮವನ್ನು ಸ್ತುತಿಸುವ ಸ್ತೋತ್ರ ಯಜ್ಞವು ಯಾವಾಗಲೂ ನಿಮ್ಮ ಬಾಯಲ್ಲಿ ಇರಲಿ (ಇಬ್ರಿ 13:15). ಆಗ ಯಾರೂ ನಿಮ್ಮನ್ನು ಎದುರಿಸಿ ನಿಲ್ಲಲು ಸಾಧ್ಯವಿಲ್ಲ.

## 3. ದೇವರ ವಾಕ್ಯ!

ಸೈತಾನನಿಗೆ ಇನ್ನೊಂದು ಹೆಸರು ಶೋಧಕನು ಎಂದು. ಅವನು ನಿಮ್ಮನ್ನು ಶೋಧಿಸುವ ಮುಖ್ಯಕಾರಣ, ನಿಮ್ಮನ್ನು ಶೋಧನೆಯಲ್ಲಿ ಬೀಳಿಸಿ, ನಿಮ್ಮ ನಂಬಿಕೆಯಲ್ಲಿ ಹಿಂಜಾರಿಹೋಗುವಂತೆ ಮಾಡಿ, ಇತರರ ಮುಂದೆ ನೀವು ತಲೆ ತಗ್ಗಿಸುವಂತೆ ಮಾಡಬೇಕೆಂಬುದೇ.

ಸಂಚರಿಸುವನಾ? ಮಾಟಮಂತ್ರಗಳ ತೊಂದರೆಗೆ ಒಳಗಾಗಿರುವಿರಾ? ಹೆದರಬೇಡಿರಿ. ಕ್ರಿಸ್ತನ ಗಾಯಗೊಂಡ ಕರಗಳಿಂದ ಸುರಿಯುವ ರಕ್ತವನ್ನು ಕೈಗಳಲ್ಲಿ ತೆಗೆದುಕೊಂಡು, ಸೈತಾನನ ಕಾರ್ಯಗಳ ಮೇಲೆ ಚೆಲ್ಲಿ ಆಸಕ್ತಿಯಿಂದ ಪ್ರಾರ್ಥಿಸಿರಿ. ಸೈತಾನನನ್ನು ಎದುರಿಸಿ ನಿಲ್ಲಿರಿ. ಅವನು ನಿಮ್ಮನ್ನು ಬಿಟ್ಟು ಓಡಿ ಹೋಗುವನು. ಯೇಸುಕ್ರಿಸ್ತನ ರಕ್ತವೆಂದು ಹೇಳಿ ಅವನನ್ನು ಎದುರಿಸಿ ನಿಲ್ಲಿರಿ.

ನೀವೂ ನಿಮ್ಮ ಕುಟುಂಬದವರೂ ಕುರಿಮರಿಯಾದಾತನ ರಕ್ತದೊಳಗೆ ಮರೆಮಾಡಿಕೊಳ್ಳುವಾಗ ಅದುವೇ ಪರಾತ್ಪರನಾದ ಸರ್ವಶಕ್ತನಾದಾತನ ನೆರಳಾಗಿರುವದು. 'ಅವರು ಯಜ್ಞದ ಕುರಿಯಾದಾತನ ರಕ್ತದಿಂದಲೂ ತಮ್ಮ ಸಾಕ್ಷಿಯ ನುಡಿಯಿಂದಲೂ ಅವನನ್ನು ಜಯಿಸಿದರು' (ಪ್ರಕ 12:11).

## 2 .ಕರ್ತನ ನಾಮ!

ಭೂಮಿಯಲ್ಲಿರುವ ಎಲ್ಲಾ ಜನಗಳೂ ನಿಮ್ಮನ್ನು ಯೆಹೋವನ ಜನರೆಂದು ತಿಳಿದುಕೊಂಡು ನಿಮಗೆ ಭಯಪಡುವರು (ಧರ್ಮೋ28:10). ಕರ್ತನ ನಾಮವನ್ನು ಯಾವಾಗಲೂ ನೀವು,ನಿಮ್ಮ ಮುಂದೆ ಇಟ್ಟುಕೊಂಡಿರುವಿರಾದರೆ, ನಿಮ್ಮ ಜೀವಮಾನಕಾಲದಲ್ಲೆಲ್ಲಾ, ಒಬ್ಬನೂ ನಿಮ್ಮನ್ನು ಎದುರಿಸಿ ನಿಲ್ಲುವದಿಲ್ಲ.

ತನಗಿಂತ ಬಲಿಷ್ಟನಾದ ಗೊಲಿಯಾತನನ್ನು ಎದುರಿಸಿ ನಿಲ್ಲಲು, ದಾವೀದನಿಗೆ ಅಷ್ಟೊಂದು ಧೈರ್ಯ ಉಂಟಾಗಲು ಕಾರಣವೇನು? ಅವನು ಯಾವಾಗಲೂ ಕರ್ತನ ನಾಮವನ್ನು ತನ್ನ ಮುಂದಾಗಿ ಇರಿಸಿಕೊಂಡದ್ದೇ ಅಗಿದೆ. "ಆಗ ದಾವೀದನು ಅವನಿಗೆ ನೀನು ಈಟಿ ಕತ್ತಿ ಬರ್ಜಿಗಳೊಡನೆ ನನ್ನ ಬಳಿಗೆ ಬರುತ್ತೀ, ನಾನಾದರೋ ನೀನು ಹೀಯಾಳಿಸಿದಂಥ ಸೇನಾಧೀಶ್ವರನೂ, ಇಸ್ರಾಯೇಲ್ಯರ ಯುದ್ಧ ಭಟರ ದೇವರೂ ಆಗಿರುವ ಯೆಹೋವನ ನಾಮದೊಡನೆ ನಿನ್ನ ಬಳಿಗೆ ಬರುತ್ತೇನೆ (1ಸಮು 17:45).

ಅಪೊ.ಪೇತ್ರನ ಸೇವೆಯ ಜಯದ ರಹಸ್ಯವೇನು? 'ಆಗ ಪೇತ್ರನು ಬೆಳ್ಳಿ ಬಂಗಾರವಂತೂ ನನ್ನಲ್ಲಿಲ್ಲಾ, ನನ್ನಲ್ಲಿರುವದನ್ನು ನಿನಗೆ ಕೊಡುತ್ತೇನೆ.'ನಜರೇತಿನ ಯೇಸುಕ್ರಿಸ್ತನ ಹೆಸರಿನಲ್ಲಿ ಎದ್ದು ನಡೆದಾಡು' ಎಂದು ಹೇಳಿ ಅವನ ಬಲಗೈ ಹಿಡಿದು ಎತ್ತಿದನು. ಆ ಕ್ಷಣವೇ ಅವನ ಕಾಲುಗಳಿಗೂ ಹರಡುಗಳಿಗೂ ಬಲಬಂತು ಅವನು ಹಾರಿನಿಂತು ನಡೆದಾಡಿದನು' (ಅ.ಕೃ 3:6–8).

ಆದ್ದರಿಂದ ನೀವು ಏನು ಮಾಡಿದರೂ ಅದನ್ನು ಕರ್ತನಾದ ಯೇಸುವಿನ ಹೆಸರಿನಲ್ಲಿ ಮಾಡಿರಿ (ಕೊಲೊ 3:17).ಕರ್ತನ ನಾಮವನ್ನು ಸ್ತುತಿಸುವ ಸ್ತೋತ್ರ ಯಜ್ಞವು ಯಾವಾಗಲೂ ನಿಮ್ಮ ಬಾಯಲ್ಲಿ ಇರಲಿ (ಇಬ್ರಿ 13:15). ಆಗ ಯಾರೂ ನಿಮ್ಮನ್ನು ಎದುರಿಸಿ ನಿಲ್ಲಲು ಸಾಧ್ಯವಿಲ್ಲ.

## 3. ದೇವರ ವಾಕ್ಯ!

ಸೈತಾನನಿಗೆ ಇನ್ನೊಂದು ಹೆಸರು ಶೋಧಕನು ಎಂದು. ಅವನು ನಿಮ್ಮನ್ನು ಶೋಧಿಸುವ ಮುಖ್ಯಕಾರಣ, ನಿಮ್ಮನ್ನು ಶೋಧನೆಯಲ್ಲಿ ಬೀಳಿಸಿ, ನಿಮ್ಮ ನಂಬಿಕೆಯಲ್ಲಿ ಹಿಂಜಾರಿಹೋಗುವಂತೆ ಮಾಡಿ, ಇತರರ ಮುಂದೆ ನೀವು ತಲೆ ತಗ್ಗಿಸುವಂತೆ ಮಾಡಬೇಕೆಂಬುದೇ.

ಸಂಚರಿಸುವನಾ? ಮಾಟಮಂತ್ರಗಳ ತೊಂದರೆಗೆ ಒಳಗಾಗಿರುವಿರಾ? ಹೆದರಬೇಡಿರಿ. ಕ್ರಿಸ್ತನ ಗಾಯಗೊಂಡ ಕರಗಳಿಂದ ಸುರಿಯುವ ರಕ್ತವನ್ನು ಕೈಗಳಲ್ಲಿ ತೆಗೆದುಕೊಂಡು, ಸೈತಾನನ ಕಾರ್ಯಗಳ ಮೇಲೆ ಚೆಲ್ಲಿ ಆಸಕ್ತಿಯಿಂದ ಪ್ರಾರ್ಥಿಸಿರಿ. ಸೈತಾನನನ್ನು ಎದುರಿಸಿ ನಿಲ್ಲಿರಿ. ಅವನು ನಿಮ್ಮನ್ನು ಬಿಟ್ಟು ಓಡಿ ಹೋಗುವನು. ಯೇಸುಕ್ರಿಸ್ತನ ರಕ್ತವೆಂದು ಹೇಳಿ ಅವನನ್ನು ಎದುರಿಸಿ ನಿಲ್ಲಿರಿ.

ನೀವೂ ನಿಮ್ಮ ಕುಟುಂಬದವರೂ ಕುರಿಮರಿಯಾದಾತನ ರಕ್ತದೊಳಗೆ ಮರೆಮಾಡಿಕೊಳ್ಳುವಾಗ ಅದುವೇ ಪರಾತ್ಪರನಾದ ಸರ್ವಶಕ್ತನಾದಾತನ ನೆರಳಾಗಿರುವದು. 'ಅವರು ಯಜ್ಞದ ಕುರಿಯಾದಾತನ ರಕ್ತದಿಂದಲೂ ತಮ್ಮ ಸಾಕ್ಷಿಯ ನುಡಿಯಿಂದಲೂ ಅವನನ್ನು ಜಯಿಸಿದರು' (ಪ್ರಕ 12:11).

## 2 .ಕರ್ತನ ನಾಮ!

ಭೂಮಿಯಲ್ಲಿರುವ ಎಲ್ಲಾ ಜನಗಳೂ ನಿಮ್ಮನ್ನು ಯೆಹೋವನ ಜನರೆಂದು ತಿಳಿದುಕೊಂಡು ನಿಮಗೆ ಭಯಪಡುವರು (ಧರ್ಮೋ28:10). ಕರ್ತನ ನಾಮವನ್ನು ಯಾವಾಗಲೂ ನೀವು,ನಿಮ್ಮ ಮುಂದೆ ಇಟ್ಟುಕೊಂಡಿರುವಿರಾದರೆ, ನಿಮ್ಮ ಜೀವಮಾನಕಾಲದಲ್ಲೆಲ್ಲಾ, ಒಬ್ಬನೂ ನಿಮ್ಮನ್ನು ಎದುರಿಸಿ ನಿಲ್ಲುವದಿಲ್ಲ.

ತನಗಿಂತ ಬಲಿಷ್ಟನಾದ ಗೊಲಿಯಾತನನ್ನು ಎದುರಿಸಿ ನಿಲ್ಲಲು, ದಾವೀದನಿಗೆ ಅಷ್ಟೊಂದು ಧೈರ್ಯ ಉಂಟಾಗಲು ಕಾರಣವೇನು? ಅವನು ಯಾವಾಗಲೂ ಕರ್ತನ ನಾಮವನ್ನು ತನ್ನ ಮುಂದಾಗಿ ಇರಿಸಿಕೊಂಡದ್ದೇ ಅಗಿದೆ. "ಆಗ ದಾವೀದನು ಅವನಿಗೆ ನೀನು ಈಟಿ ಕತ್ತಿ ಬರ್ಜಿಗಳೊಡನೆ ನನ್ನ ಬಳಿಗೆ ಬರುತ್ತೀ, ನಾನಾದರೋ ನೀನು ಹೀಯಾಳಿಸಿದಂಥ ಸೇನಾಧೀಶ್ವರನೂ, ಇಸ್ರಾಯೇಲ್ಯರ ಯುದ್ಧ ಭಟರ ದೇವರೂ ಆಗಿರುವ ಯೆಹೋವನ ನಾಮದೊಡನೆ ನಿನ್ನ ಬಳಿಗೆ ಬರುತ್ತೇನೆ (1ಸಮು 17:45).

ಅಪೊ.ಪೇತ್ರನ ಸೇವೆಯ ಜಯದ ರಹಸ್ಯವೇನು? 'ಆಗ ಪೇತ್ರನು ಬೆಳ್ಳಿ ಬಂಗಾರವಂತೂ ನನ್ನಲ್ಲಿಲ್ಲಾ, ನನ್ನಲ್ಲಿರುವದನ್ನು ನಿನಗೆ ಕೊಡುತ್ತೇನೆ.'ನಜರೇತಿನ ಯೇಸುಕ್ರಿಸ್ತನ ಹೆಸರಿನಲ್ಲಿ ಎದ್ದು ನಡೆದಾಡು' ಎಂದು ಹೇಳಿ ಅವನ ಬಲಗೈ ಹಿಡಿದು ಎತ್ತಿದನು. ಆ ಕ್ಷಣವೇ ಅವನ ಕಾಲುಗಳಿಗೂ ಹರಡುಗಳಿಗೂ ಬಲಬಂತು ಅವನು ಹಾರಿನಿಂತು ನಡೆದಾಡಿದನು' (ಅ.ಕೃ 3:6–8).

ಆದ್ದರಿಂದ ನೀವು ಏನು ಮಾಡಿದರೂ ಅದನ್ನು ಕರ್ತನಾದ ಯೇಸುವಿನ

**ವಾಗ್ದಾನ ವಚನ :: ಧರ್ಮೋ 28:7**

**ನಿಮ್ಮ ಮೇಲೆ ಬರುವ ಶತ್ರುಗಳು ನಿಮ್ಮಿಂದ ಸೋತು ಹೋಗುವಂತೆ ಯೆಹೋವನು ಮಾಡುವನು ಅವರು ಒಂದೇ ದಾರಿಯಿಂದ ನಿಮ್ಮ ಮೇಲೆ ಬಂದರೂ ಏಳು ದಾರಿಗಳಿಂದ ಓಡಿ ಹೋಗುವರು.**

# ಪ್ರಾರ್ಥನೆಯಲ್ಲಿ ಕಂಡ ಸಂರಕ್ಷಣೆಯ ಶಕ್ತಿ!

ಎರಡನೆಯ ಮಹಾಯುದ್ಧದಲ್ಲಿ ನಡೆದ ಸಂಭವವಿದು. ಬ್ರಿಟಿಷ್ ಸೈನ್ಯಕ್ಕೆ ಸೇರಿದ ಒಬ್ಬ ಮುಖಂಡನೂ ಸಿಪಾಯಿಗಳೂ ಜರ್ಮನಿಯವರು ಯುದ್ಧ ಮಾಡುವ ಸ್ಥಳದಲ್ಲಿ ಸಿಕ್ಕಿಕೊಂಡರು. ಜರ್ಮನ್‌ರಿಂದ ತಪ್ಪಿಸಿಕೊಳ್ಳಲು ಖಾಲಿಯಾಗಿದ್ದ ಮನೆಯೊಳಗೆ ಹೋದರು. ದಿಢೀರೆಂದು ಗುಂಡುಗಳ ಶಬ್ದವೂ ಜನರ ಕೂಗಾಟವೂ ಕೇಳಿಸಿತು. ಜರ್ಮನ್ನರು ಮನೆಯ ಬಳಿಗೇ ಬಂದುಬಿಟ್ಟರು.

ಒಳಗಿದ್ದ ಬ್ರಿಟಿಷ್ ಮುಖಂಡನು ತನ್ನಲ್ಲಿದ್ದ ಸತ್ಯವೇದವನ್ನು ತೆಗೆದು 23ನೇ ಕೀರ್ತನೆಯನ್ನು ಓದಿದನು. ನಂತರ ನಾಲ್ವರೂ ಸೇರಿ ಪ್ರಾರ್ಥಿಸಲು ಆರಂಭಿಸಿದರು. ಆಗ ಅವರಿದ್ದ ಮನೆಯ ಬಾಗಿಲು ತೆರೆಯಿತು. ಕಾಲಿನ ಹೆಜ್ಜೆ ಶಬ್ದಗಳು ಕೇಳಿಸಿದವು. ಅವರು ಪ್ರಾರ್ಥನೆಯನ್ನು ನಿಲ್ಲಿಸಲಿಲ್ಲ. ಪ್ರಾರ್ಥನೆ ಮುಗಿಸಿದಾಗ ಬಾಗಿಲು ತೆರೆದಿತ್ತು. ಆದರೆ ಅಲ್ಲಿ ಯಾರೂ ಇರಲಿಲ್ಲ. ದೇವರು ಅವರನ್ನು ಅದ್ಭುತವಾಗಿ ಕಾಪಾಡಿದನು. ಅವರು ಸುರಕ್ಷಿತವಾಗಿ ತಮ್ಮ ಸ್ಥಳಕ್ಕೆ ಸೇರಿದರು. ದೇವರು ಸರ್ವಶಕ್ತನು. ತನ್ನನ್ನು ನೋಡಿ ಕೂಗಿಕೊಳ್ಳುವಾಗ ಬಿಡುಗಡೆ ಮಾಡುತ್ತಾನೆ.

---

## ನಾವು ಯಾರನ್ನು ಪ್ರೀತಿಸಬೇಕು.

1. **ದೇವರನ್ನು :** "ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು" (ಮತ್ತಾ 22:37).
2. **ದೇವಜನರನ್ನು :** "ದೇವಜನರೆಲ್ಲರಿಗೆ ನೀವು ತೋರಿಸುವ ಪ್ರೀತಿಯನ್ನು ಕುರಿತು ಕೇಳಿ ನಾನು ನಿಮ್ಮ ನಿಮಿತ್ತವಾಗಿ ಎಡೆಬಿಡದೆ ದೇವರಿಗೆ ಸ್ತೋತ್ರ ಮಾಡುತ್ತೇನೆ" (ಎಫೆ 1:15).
3. **ನೆರೆಯವರನ್ನು :** "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು" (ಮತ್ತಾ 22:39).
4. **ಪರದೇಶಿಗಳನ್ನು :** "ಐಗುಪ್ತದೇಶದಲ್ಲಿ ನೀವೇ ಪರದೇಶಿಗಳಾಗಿದ್ದದ್ದನ್ನು ಜ್ಞಾಪಿಸಿಕೊಂಡು ಪರದೇಶದವರಲ್ಲಿ ಪ್ರೀತಿಯಿಡಿರಿ" (ಧರ್ಮೋ 10:19).
5. **ವೈರಿಗಳನ್ನು :** "ನಿಮ್ಮ ವೈರಿಗಳನ್ನು ಪ್ರೀತಿಸಿರಿ ನಿಮ್ಮನ್ನು ಹಿಂಸೆ ಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ" (ಮತ್ತಾ 5:44).

## ಕರ್ತನಿಗಾಗಿ ಉಪವಾಸ ಮಾಡುವುದು ಹೇಗೆ?

1. ಕರ್ತನನ್ನು ಮೆಚ್ಚಿಸುವಂಥ ಉಪವಾಸ ಮಾಡಿರಿ.
2. ಕರ್ತನ ಕರೆಯನ್ನು ಗಮನಿಸಿ ಉಪವಾಸಿಸಿರಿ.
3. ಕರ್ತನ ಮುಂಭಾಗದಲ್ಲಿ ನಿಮ್ಮನ್ನು ತಗ್ಗಿಸಿಕೊಂಡು ಉಪವಾಸ ಮಾಡಿರಿ.
4. ಕರ್ತನ ಮುಖವನ್ನು ಕಾಣಲು ಉಪವಾಸ ಮಾಡಿರಿ.
5. ನಿಮ್ಮ ಆತ್ಮವನ್ನು ಪರಿಶುದ್ಧತೆ ಎಂಬ ಶಿಸ್ತಿನ ಹಿಡಿತದೊಳಗೆ ಇಡಲು ಉಪವಾಸ ಮಾಡಿರಿ.

## ಮಕ್ಕಳಂತೆ ಆಗದಿದ್ದರೆ!

**"ನೀವು ತಿರುಗಿಕೊಂಡು ಚಿಕ್ಕ ಮಕ್ಕಳಂತೆ ಆಗದೆ ಹೋದರೆ ನೀವು ಪರಲೋಕ ರಾಜ್ಯದಲ್ಲಿ ಸೇರುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮತ್ತಾ 18:3).**

"ಪರಲೋಕ ರಾಜ್ಯ" ಎನ್ನುವ ಮಾತು ಮತ್ತಾಯನು ಬರೆದ ಸುವಾರ್ತೆಯಲ್ಲಿ ಮಾತ್ರ 32 ಸಾರಿ ತಿರುಗಿ ತಿರುಗಿ ಬರುತ್ತದೆ ಎಂದರೆ ಯೇಸುಕ್ರಿಸ್ತನು ಪರಲೋಕ ರಾಜ್ಯವನ್ನು ಎಷ್ಟು ಮುಖ್ಯತ್ವ ಪಡಿಸಿದ್ದಾನೆಂದು ತಿಳಿಯಬಹುದು. ಆತನ ಯೋಚನೆಯೆಲ್ಲವೂ ಪರಲೋಕದ ಮೇಲೆಯೇ ಇದ್ದಿತು. ಪರಲೋಕದಲ್ಲಿರುವ ತಂದೆಯ ಚಿತ್ತವು ಭೂಲೋಕದಲ್ಲಿ ನೆರವೇರಬೇಕೆನ್ನುವುದು ಯೇಸುಕ್ರಿಸ್ತನ ಆಶೆಯಾಗಿತ್ತು. ಪರಲೋಕ ರಾಜ್ಯಕ್ಕೆ ಒಂದು ಗುಂಪು ಜನರನ್ನು ಸಿದ್ಧಪಡಿಸಬೇಕೆಂದು ಎಡೆಬಿಡದೆ ಕೆಲಸ ಮಾಡುತ್ತಲೇ ಇದ್ದನು. ಪರಲೋಕ ರಾಜ್ಯದ ರಹಸ್ಯಗಳನ್ನು ದೃಢವಾಗಿ ತಿಳಿದುಕೊಳ್ಳಬೇಕೆನ್ನುವುದಾದರೆ ಪರಲೋಕದಲ್ಲಿ ಎಂದೆಂದಿಗೂ ನೆಲೆಯಾಗಿರಲು ಕರ್ತನು ಸಹಾಯ ಮಾಡುತ್ತಾನೆ.

ತಿರುಗಿಕೊಂಡು ಚಿಕ್ಕ ಮಕ್ಕಳಂತೆ ಆಗಬೇಕು ಎಂಬುದೆ ಕರ್ತನ ಚಿತ್ತವಾಗಿದೆ. ಮಕ್ಕಳ ಸ್ವಭಾವವು ದೊಡ್ಡವರ ಸ್ವಭಾವಕ್ಕಿಂತ ಸಂಪೂರ್ಣವಾಗಿ ವ್ಯತ್ಯಾಸವಾಗಿರುತ್ತದೆ. ಮಕ್ಕಳು ಚಿಕ್ಕ ಪ್ರಾಯದಲ್ಲಿ ನಿಷ್ಕಪಟಿಗಳಾಗಿರುತ್ತಾರೆ. ಆದರೆ ಬೆಳೆಯುತ್ತಾ ಬೆಳೆಯುತ್ತಾ ಈ ಸಮುದಾಯವು ಅವರನ್ನು ಕೆಟ್ಟ ಮಾರ್ಗದಲ್ಲಿ ನಡೆಸುವುದರಿಂದ ಅವರು ಮಾರ್ಗ ತಪ್ಪಿ ಹೋಗುವ ಅವಕಾಶಗಳಿವೆ.

ಮಕ್ಕಳು "ತಾಳ್ಮೆಯುಳ್ಳವರಾಗಿರುವರು, ಎಲ್ಲಾವನ್ನು ನಂಬುತ್ತಾರೆ, ಕಲಿತು ಕೊಳ್ಳುವುದರಲ್ಲಿ ಆಸಕ್ತಿ ತೋರಿಸುತ್ತಾರೆ, ಕಷ್ಟ ದುಃಖಗಳು ಬರುವಾಗ ಓಡಿ ಹೋಗಿ ತಂದೆ ತಾಯಿಯರನ್ನು ಅಪ್ಪಿಕೊಳ್ಳುತ್ತಾರೆ, ಸತ್ಯವಂತರಾಗಿರಬೇಕೆಂದು ಬಯಸುತ್ತಾರೆ, ಕಹಿಯಾದ ಭಾವನೆಯಾಗಲಿ ವಂಚನೆಯು ಸ್ವಭಾವವಾಗಲಿ ದ್ವೇಷ ಸಾಧಿಸಬೇಕೆಂಬುದಾಗಲಿ ಅವರಲ್ಲಿರುವುದಿಲ್ಲ. ಮಕ್ಕಳಲ್ಲಿರುವಂಥ ಈ ಎಲ್ಲಾ ಗುಣಗಳು ನಮ್ಮಲ್ಲಿ ಇಲ್ಲದಿದ್ದರೆ ಪರಲೋಕ ರಾಜ್ಯವನ್ನು ಸೇರಲು ಸಾಧ್ಯವಿಲ್ಲ.


# ಸಭೆ ಎತ್ತಲ್ಪಡುವುದರ ಉದ್ದೇಶ

- ✍ ವಾಗ್ದಾನ ಮಾಡಿದ ಭಕ್ತರನ್ನು ಕರೆದುಕೊಂಡು ಹೋಗುವುದು.
- ✍ ಕ್ರಿಸ್ತನಲ್ಲಿ ಸತ್ತವರಿಗೆ ಪುನರುತ್ಥಾನವಾಗಬೇಕೆಂಬ ಉದ್ದೇಶ.
- ✍ ತನ್ನ ಭಕ್ತರನ್ನು ಪರಲೋಕಕ್ಕೆ ಸೇರಿಸಿ ಹೊಸ ಯೆರೂಸಲೇಮ್ ಎಂಬ ಪಟ್ಟಣದಲ್ಲಿ ಸೇರಿಸಬೇಕೆಂಬ ಉದ್ದೇಶ.
- ✍ ಮಹಾ ಸಂಕಟ ಕಾಲವನ್ನು ಪಾರು ಮಾಡಬೇಕೆಂಬ ಉದ್ದೇಶ.
- ✍ ಭಕ್ತರ ದೇಹಗಳು ನಿರ್ಲಯಾವಸ್ಥೆಯನ್ನು ಹೊಂದುವ ಉದ್ದೇಶ.
- ✍ ದೇವರ ಮುಂದೆ ನಾವು ನಿಲ್ಲುವುದಕ್ಕೆ.
- ✍ ತಡೆಯಾಗಿದ್ದ ಅಧರ್ಮವನ್ನು ತೆಗೆಯುವುದಕ್ಕಾಗಿ.
- ✍ ಅಂತ್ಯ ಕ್ರಿಸ್ತನ ಆಳ್ವಿಕೆಗೆ ಅವಕಾಶ ಮಾಡಲು.

---

## ನಿಮ್ಮ ಪ್ರಾರ್ಥನಾ ವೇಳೆಗಾಗಿ ಕೆಲವು ಆಲೋಚನೆಗಳು

1. ನಿಮ್ಮ ಪ್ರಾರ್ಥನಾ ಸಮಯವನ್ನು ಸಂತೋಷವಾಗಿ ಪ್ರಾರಂಭಿಸಿರಿ.
2. ಪರಿಶುದ್ಧಾತ್ಮನನ್ನು ಗ್ರಹಿಸಿರಿ.
3. ಕರ್ತನ ವಾಕ್ಯವು ನಿಮ್ಮೊಂದಿಗೆ ಸಂಭಾಷಿಸಲು ಅನುಮತಿಸಿರಿ.
4. ಪ್ರಾರ್ಥಿಸುವಾಗ ಪಲ್ಲವಿಗಳನ್ನಾಗಲಿ ಸ್ತೋತ್ರಗೀತೆಯನ್ನಾಗಲಿ ಹಾಡಬಹುದು.
5. ನಿಮ್ಮ ನಿರ್ಧಿಷ್ಠವಾದ ಪ್ರಾರ್ಥನಾ ಮನವಿಗಳೊಂದಿಗೆ ಇತರ ಪ್ರಾರ್ಥನಾ ಮನವಿ ನೆನಪಿಗೆ ಬಂದರೆ ಅದನ್ನು ಕೂಡಲೇ ಬರೆದುಕೊಳ್ಳಿರಿ.
6. ಪ್ರೀತಿಯನ್ನು ಒಂದೇ ಮನಸ್ಸನ್ನು ಉಂಟು ಮಾಡುವ ಆಲೋಚನೆಗಳನ್ನು ಆತ್ಮನಾದಾತನು ತರುವಾಗ ಕೂಡಲೇ ಅದನ್ನು ತಿಳಿದು ವಿಧೇಯರಾಗಿರಿ.
7. ಸ್ತುತಿ ಸ್ತೋತ್ರದೊಂದಿಗೆ ನಿಮ್ಮ ಪ್ರಾರ್ಥನಾ ಸಮಯವನ್ನು ಮುಗಿಸಿರಿ.



# ನಮ್ಮ ದೇಶದ ಸುದ್ದಿಗಳು
# (INDIA NEWS)

**1. ಐಪಿಒ ಮೂಲಕ ರೂ.25,000 ಕೋಟಿ ಸಂಗ್ರಹ ಗುರಿ** : ಆರಂಭಿಕ ಸಾರ್ವಜನಿಕ ನೀಡಿಕೆ ಮೂಲಕ 24ಕ್ಕೂ ಹೆಚ್ಚು ಕಂಪನಿಗಳು ಮುಂದಿನ ದಿನಗಳಲ್ಲಿ ರೂ.25,000 ಕೋಟಿ ಸಂಗ್ರಹಿಸುವ ಗುರಿ ಇಟ್ಟುಕೊಂಡಿವೆ. ಈ ಷೇರುಗಳ ಮಾರಾಟದಿಂದ ಬರುವ ಹಣವನ್ನು ಕಂಪನಿಗಳ ವಿವಿಧ ಕಾರ್ಯಯೋಜನೆಗಳಿಗೆ ಮತ್ತು ಅಭಿವೃದ್ಧಿಗೆ ಬಳಸಲಿವೆ ಎಂದು ತಿಳಿದು ಬಂದಿದೆ.

**2. ಸಮುದ್ರಯಾನ ಸ್ವಾತಂತ್ರ್ಯ ಏಕಪಕ್ಷೀಯ ಬದಲಾವಣೆ ಸಾಧ್ಯವಿಲ್ಲ ನಿರ್ಮಲಾ** : ಸಮುದ್ರ ಮಾರ್ಗದಲ್ಲಿ ಸಂಚರಿಸುವ ಸ್ವಾತಂತ್ರ್ಯವನ್ನು ಏಕಪಕ್ಷೀಯವಾಗಿ ಬದಲಿಸುವ ಹಕ್ಕು ಯಾವುದೇ ರಾಷ್ಟ್ರಗಳಿಗಿಲ್ಲ ಎಂದು ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಭಾರತೀಯ ನೌಕಾಪಡೆಯು ರಕ್ಷಣಾ ಚಿಂತಕರ ಚಾವಡಿ ರಾಷ್ಟ್ರೀಯ ಸಾಗರೋತ್ತರ ಪ್ರತಿಷ್ಠಾನ ಜತೆ ಹಮ್ಮಿಕೊಂಡಿದ್ದ 'ಇಂಡೊ ಪೆಸಿಫಿಕ್ ಪ್ರಾಂತೀಯ ಸಮ್ಮೇಳನ'ದಲ್ಲಿ ಅವರು ಮಾತನಾಡಿದರು ಎಂದು ತಿಳಿದು ಬಂದಿದೆ.

**3. ನೌಕಾ ಸಮರಾಭ್ಯಾಸ ಭಾರತದ ಆಹ್ವಾನ ತಿರಸ್ಕರಿಸಿದ ಮಾಲ್ಡೀವ್ಸ್ :** 'ಮಿಲನ್' ನೌಕಾ ಸಮರಾಭ್ಯಾಸದಲ್ಲಿ ಪಾಲ್ಗೊಳ್ಳುವಂತೆ ಭಾರತ ನೀಡಿದ ಆಹ್ವಾನವನ್ನು ಮಾಲ್ಡೀವ್ಸ್ ತಿರಸ್ಕರಿಸುವುದಕ್ಕೆ ಮಾಲ್ಡೀವ್ಸ್ ಯಾವುದೇ ಕಾರಣ ನೀಡಿಲ್ಲ ಅಂಡಮಾನ್ ಮತ್ತು ನಿಕೋಬಾರ್ ದ್ವೀಪದಲ್ಲಿ ನಡೆಯುವ ಸಮರಾಭ್ಯಾಸದಲ್ಲಿ ಕನಿಷ್ಠ 16 ರಾಷ್ಟ್ರಗಳು ಭಾಗವಹಿಸಲಿವೆ. ಮಾಲ್ಡೀವ್ಸ್‌ನಲ್ಲಿ ಅಧ್ಯಕ್ಷ ಅಬ್ದುಲ್ಲಾಯಮೀನ್ ಅವರು ತುರ್ತು ಪರಿಸ್ಥಿತಿ ಹೇರಿದ್ದಾರೆ. ಸಮರಾಭ್ಯಾಸದಲ್ಲಿ ಪಾಲೊಳ್ಳದಿರಲು ಇದೇ ಕಾರಣ ಎನ್ನಲಾಗಿದೆ.

**4. ದೂರ ಶಿಕ್ಷಣ ಗೊಂದಲಕ್ಕೆ ತೆರೆ ಎಳೆದ ಯುಜಿಸಿ** : ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯುಜಿಸಿ) ಅಥವಾ ದೂರ ಶಿಕ್ಷಣ ಮಂಡಳಿ (ಡಿಇಸಿ) ಗುರುತಿಸಿದ ದೂರ ಶಿಕ್ಷಣ ಸಂಸ್ಥೆಗಳು ನೀಡುವ ಪ್ರಮಾಣಪತ್ರವು ಸಾಂಪ್ರದಾಯಿಕ ಶಿಕ್ಷಣ ಸಂಸ್ಥೆಗಳು ನೀಡುವ ಪ್ರಮಾಣಪತ್ರಕ್ಕೆ ಸಮ ಎಂದು ಯುಜಿಸಿ ಸೂಚನೆ ಹೊರಡಿಸಿದೆ. ಆ ಮೂಲಕ, ಉದ್ಯೋಗ ಹಾಗೂ ಇನ್ನಿತರ ಎಲ್ಲಾ ದೃಷ್ಟಿಯಿಂದ ದೂರ ಶಿಕ್ಷಣ ಕೋರ್ಸ್ ಬಗೆಗೆ ಅಭ್ಯರ್ಥಿಗಳಲ್ಲಿರುವ ಗೊಂದಲಕ್ಕೆ ತೆರೆ ಎಳೆದಿದೆ.

**5.ಐದು ಕೈಗಾರಿಕಾ ಯೋಜನೆಗೆ ಒಪ್ಪಿಗೆ :** ರಾಜ್ಯದ ಕೈಗಾರಿಕಾ ಕ್ಷೇತ್ರದಲ್ಲಿ ಒಟ್ಟು 12.16 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲಾಗಿದೆ 'ಸಣ್ಣ ಉದ್ಯಮ ಕ್ಷೇತ್ರದಲ್ಲಿ 10.28 ಲಕ್ಷ ಮತ್ತು ಬೃಹತ್ ಉದ್ಯಮ ಕ್ಷೇತ್ರದಲ್ಲಿ 1.88 ಲಕ್ಷ ಉದ್ಯೋಗ ಸೃಷ್ಟಿ ಆಗಿದೆ. ಇನ್ನೂ 6.25 ಲಕ್ಷ ಉದ್ಯೋಗಗಳು ಸೃಷ್ಟಿ ಆಗಲಿವೆ. ಇದರಿಂದಾಗಿ ರಾಜ್ಯದಲ್ಲಿ ನಿರುದ್ಯೋಗ ಪ್ರಮಾಣ ಶೇ 2 ರಷ್ಟು ಕಡಿಮೆಯಾಗಿದೆ. ರಾಷ್ಟ್ರೀಯ ಸರಾಸರಿ ಪ್ರಮಾಣ ಶೇ 3.7 ಕ್ಕಿಂತ ಕಡಿಮೆ ಇದೆ ಎಂಬುದು ಗಮನಾರ್ಹ ಸಂಗತಿ ಎಂದು ತಿಳಿದು ಬಂದಿದೆ.

# ಹೊರ ದೇಶದ ಸುದ್ದಿಗಳು
# (FOREIGN NEWS)

1. **ಡೋಕ್ಲಾಂನಿಂದ ಭಾರತ ಪಾಠ ಕಲಿತಿಲ್ಲ ಚೀನಾ** : ಸಿಕ್ಕಿಂ ಬಳಿ ಇರುವ ಡೋಕ್ಲಾಂ ಚೀನಾಕ್ಕೆ ಸೇರಿದ್ದು ಕಳೆದ ವರ್ಷ ಉಂಟಾದ 73 ದಿನಗಳ ಬಿಕ್ಕಟ್ಟಿನಿಂದ ಭಾರತ ಇನ್ನೂ ಪಾಠ ಕಲಿಯಬೇಕಾಗಿದೆ ಎಂದು ಚೀನಾದ ಸೇನಾ ವಕ್ತಾರ ಹೇಳಿದ್ದಾರೆ. ಭಾರತದ ಪ್ರತಿಕ್ರಿಯೆಯಿಂದಾಗಿ ಅವರೂ ಅಕ್ರಮವಾಗಿಯೇ ಸ್ಥಳ ಪ್ರವೇಶ ಮಾಡಿದ್ದಾರೆ ಎನ್ನುವುದು ಸ್ಪಷ್ಟ ಎಂದು ಹೇಳಿದ್ದಾರೆ.

2. **ಮಿಶೆಲ್ ಆತ್ಮಕಥೆ** : ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಪತ್ನಿ ಮಿಶೆಲ್ ಒಬಾಮ ಅವರ ಬಹುನಿರೀಕ್ಷಿತ ಆತ್ಮಕಥೆ 'ಬಿಕಮಿಂಗ್' ತಮ್ಮ ಪುಸ್ತಕ ಬಿಡುಗಡೆ ಮಾಡುವುದಾಗಿ ಅವರು ಟ್ವೀಟ್ ಮಾಡಿದ್ದಾರೆ. ಏಕಕಾಲದಲ್ಲಿ 24 ಭಾಷೆಗಳಲ್ಲಿ ಪುಸ್ತಕ ಪ್ರಕಟವಾಗಲಿದ್ದು, ಮಿಶೆಲ್ ಜೀವನದ ಅನಿರೀಕ್ಷಿತ ಬೆಳವಣಿಗೆಗಳ ಮಾಹಿತಿ ಒಳಗೊಂಡಿದೆ.

3. **ಗಾಂಧಿ ಛಾಯಾಚಿತ್ರ ರೂ.6.47 ಲಕ್ಷಕ್ಕೆ ಹರಾಜು** : ರಾಷ್ಟ್ರಪಿತ ಮಹಾತ್ಮಗಾಂಧಿ ಮತ್ತು ಮದನ್ ಮೋಹನ ಮಾಳವೀಯ ಅವರು ಜತೆಯಾಗಿ ನಡೆದುಕೊಂಡು ಹೋಗುತ್ತಿರುವ ಛಾಯಾಚಿತ್ರ, ಇಲ್ಲಿ ನಡೆಯುತ್ತಿರುವ ಹರಾಜು ಪ್ರಕ್ರಿಯೆಯಲ್ಲಿ ರೂ.6.47 ಲಕ್ಷಕ್ಕೆ ಮಾರಾಟವಾಗುವ ನಿರೀಕ್ಷೆ ಇದೆ. ಈ ಚಿತ್ರದ ಮೇಲೆ ಗಾಂಧೀಜಿ ಸಹಿ ಕೂಡ ಇದೆ ಎಂದು ತಿಳಿದು ಬಂದಿದೆ.

4. **ಕಾದು ನೋಡುವ ತಂತ್ರ ಅಮೆರಿಕ** : ಅಮೆರಿಕದ ಜತೆ ಸಂಧಾನಕ್ಕೆ ಆಸಕ್ತಿ ತೋರಿರುವ ಉತ್ತರ ಕೊರಿಯಾ, ನಿಶ್ಯಸ್ತ್ರೀಕರಣದ ಬಗ್ಗೆ ಯಾವ ನಿಲುವು ತಳೆಯಲಿದೆ ಎಂಬುದನ್ನು ಕಾದು ನೋಡುವೆವು ಎಂದು ಶ್ವೇತಭವನದ ಮಾಧ್ಯಮ ಕಾರ್ಯದರ್ಶಿಸಾರಾ ಸ್ಯಾಂಡರ್ಸ್ ತಿಳಿಸಿದ್ದಾರೆ. ಉತ್ತರ ಕೊರಿಯಾ ಸಂಪೂರ್ಣವಾಗಿ ಪರಮಾಣು ನಿಶ್ಯಸ್ತ್ರೀಕರಣಕ್ಕೆ ಒಪ್ಪಲಿ ಎಂಬುದು ಅವರ ಅಗ್ರಹವಾಗಿದೆ ಎಂದು ಅವರು ತಿಳಿಸಿದ್ದಾರೆ.

5. **ಗಗನಯಾತ್ರೆಗೆ ಉಲ್ಲಾಸದ ಉಡುಗೆ** : ಗಗನಯಾತ್ರಿಗಳಲ್ಲಿ ಖಿನ್ನತೆಯ ಲಕ್ಷಣಗಳನ್ನು ಗುರುತಿಸಿ ಅದನ್ನು ಹೋಗಲಾಡಿಸಲು ಅಗತ್ಯ ಬದಲಾವಣೆಗಳನ್ನು ಸೂಚಿಸುವ ಸಂತಸದಾಯಕ ಬಾಹ್ಯಾಕಾಶ ಉಡುಗೆ ತಂತ್ರಜ್ಞಾನವನ್ನು ವಿಜ್ಞಾನಿಗಳು ಅಭಿವೃದ್ಧಿ ಪಡಿಸಿದ್ದಾರೆ. ಫ್ಲಾರಿಡಾ ಪಾಲಿಟೆಕ್ನಿಕ್ ವಿಶ್ವವಿದ್ಯಾಲಯದ ಸಂಶೋಧಕರು ಸ್ಮಾರ್ಟ್ ಸೆನ್ಸರಿ ಸ್ಕಿನ್ (ಎಸ್3) ತಂತ್ರಜ್ಞಾನ ಬಳಸಿ ಈ ಉಡುಗೆ ಅಭಿವೃದ್ಧಿಪಡಿಸಿದ್ದಾರೆ.

## ನೀತಿಯ ಸೂರ್ಯನು

ಒಂದು ತೋಟದಲ್ಲಿ ಅನೇಕ ಮರಗಳಿದ್ದವು. ಸೂರ್ಯನ ಕಿರಣಗಳು ಅವುಗಳ ಮೇಲೆ ಬೀಳುತ್ತಿದ್ದವು. ಬೆಳಕು ಶಾಖ ಬಿದ್ದಮರವು ಚೆನ್ನಾಗಿ ಬೆಳೆಯಿತು. ಮತ್ತೊಂದು ಮರವು ಆ ಉಷ್ಣತೆಯನ್ನು ತಾಳಲಾರದೆ ಒಣಗಿ ಹೋಯಿತು. ಕಾರಣವೇನು? ಕೆಲವು ಸಸ್ಯನಾಶಕ ಕ್ರಿಮಿಗಳು ಮರದಲ್ಲಿ ಸೇರಿ, ಅದರ ಜೀವಶಕ್ತಿಯನ್ನು ಕುಂದಿಸಿ ನಾಶಗೊಳಿಸುತ್ತದೆ.

ಅದೇ ರೀತಿ ನೀತಿಯ ಸೂರ್ಯನಾದ ಕ್ರಿಸ್ತೇಸುವಿನ ಬೆಳಕು ಮಾನವ ಕುಲದ ಮಹಿಮೆಗಾಗಿ ಉದ್ಧಾರಕ್ಕಾಗಿ ಎಡೆಬಿಡದೆ ಬೀರುತ್ತಲೇ ಇದ್ದಾಗ್ಯೂ, ಸ್ವೀಕಾರ ಮಾಡುವವರ ಹೃದಯದ ಪಕ್ಷಕ್ಕೆ ತಕ್ಕ ರೀತಿಯಲ್ಲಿ ಫಲ ಕೊಡುತ್ತದೆ. ಅದು ಕೆಲವರಿಗೆ ಒಳ್ಳೆಯದಾಗಿಯೂ, ಕೆಲವರಿಗೆ ಕೆಟ್ಟದ್ದಾಗಿಯೂ ಅನುಭವವಾಗುತ್ತದೆ.

## ಚೀಯೋನ್ ಪರ್ವತ

ಅರೆಬೀಯಾ ಭಾಷೆಯಲ್ಲಿ ಚೀಯೋನ್ ಎಂದರೆ ಬೆಟ್ಟದ ತುದಿ. ಅಥವಾ ಪರ್ವತ ಸಾಲು ಎಂದು ಹೆಸರು. ಚೀಯೋನ್ ಎಂಬುದು. ಯೆರೂಸಲೇಮ್ ನಗರ ಎಂಬುದಾಗಿ ಕೂಡ ಅರ್ಥವುಳ್ಳದ್ದಾಗಿದೆ ಯೆಶಾ 51:3 ರಲ್ಲಿ ಚೀಯೋನ್ ಎಂಬುದನ್ನು ದೇವರ ಯೆರೂಸಲೇಮ್ ಎಂದು ಕರೆಯುತ್ತಾರೆ. ಈ ಸ್ಥಳವು ಪ್ರಪಂಚಕ್ಕೆ ಮುಖ್ಯವಾದ ಸ್ಥಳವಾಗಿ ಮಾಡಿ ಅಲ್ಲಿ ದೇವಾಲಯ ಕಟ್ಟಲ್ಪಟ್ಟು ದೇವರಿಗೆ ಸ್ತುತಿ ಆರಾಧನೆ ನೆಲೆಯಾಗಬೇಕೆಂದು ದೇವರ ಯೋಜನೆಯಾಗಿದೆ 1ಅರಸು 8:1–2 ದಾವೀದನು ದೇವರ ಮಂಜೂಷವನ್ನು ಚೀಯೋನ್ ಪರ್ವತದ ಮೇಲೆ ಇರಿಸಿದ್ದನು. ಅಂದಿನಿಂದ ಚೀಯೋನ್ ಪರ್ವತ ದಾವೀದ ನಗರವಾಗಿ ಮಾರ್ಪಟ್ಟಿತು. ಚೀಯೋನ್ ಪರ್ವತದಲ್ಲಿ ದೇವರು ವಾಸ ಮಾಡುತ್ತಾನೆ ಎಂದು ಇಸ್ರಾಯೇಲ್ಯರು ನಂಬಿದ್ದರು (ಕೀರ್ತ 74:2) ದೇವರು ಇಸ್ರಾಯೇಲ್ಯರನ್ನು ಚೀಯೋನ್ ಪರ್ವತದಲ್ಲಿ ಇದ್ದು ರಾಜನಾಗಿ ಆಳುತ್ತಾನೆ ಎಂದು ಭಾವಿಸಿದ್ದರು.

ಈ ಸ್ಥಳವು ದೇವರಿಗೆ ಆರಾಧನೆ ಕೇಂದ್ರ ಸ್ಥಾನವಾಗಿದೆ. ಚೀಯೋನ್ ಪರ್ವತದ ಮೇಲಿರುವ ಯೆಹೋವನ ವಾಸ ಸ್ಥಾನವು ದೇವಾಲಯದ ಅತೀ ಪರಿಶುದ್ಧ ಸ್ಥಳದಲ್ಲಿದೆ ಎಂದು ಹೇಳಲಾಗಿದೆ (ಕೀರ್ತ 78:68,69). ಪೌಲನು ಚೀಯೋನ್ ಪರ್ವತದಲ್ಲಿರುವ ಒಂದು ಕಲ್ಲನ್ನು ಯೇಸುಕ್ರಿಸ್ತನಿಗೆ ಉಲ್ಲೇಕಿಸಲಾಗಿದೆ (ರೋಮಾ 9:33) ರಲ್ಲಿ ಇಗೋ ಚೀಯೋನಿನಲ್ಲಿ ಎಡವುವ ಕಲ್ಲನ್ನು ಮುಗ್ಗರಿಸುವ ಬಂಡೆಯನ್ನು ಇಡುತ್ತೇನೆಂತಲೂ ಅದರ ಮೇಲೆ ನಂಬಿಕೆಯಿಡುವವನು ಆಶಾಭಂಗ ಪಡುವದಿಲ್ಲವೆಂತಲೂ ಶಾಸ್ತ್ರದಲ್ಲಿ ಬರೆದದೆಯಲ್ಲಾ.

# ಪುನರುತ್ಥಾನದ ಮಹಿಮೆ!

ಬೆಳಿಗ್ಗೆ: ನ್ಯಾಯ 13,14,15
ಸಂಜೆ: ಲೂಕ 6:27-49

**'ಸಮಾಧಿಗೆ ಮುಚ್ಚಿದ್ದ ಕಲ್ಲು ಬಹಳ ದೊಡ್ಡದಾಗಿದ್ದದರಿಂದ ಅವರು-ಸಮಾಧಿಯ ಬಾಗಿಲಿಂದ ಆ ಕಲ್ಲನ್ನು ನಮಗೋಸ್ಕರ ಉರುಳಿಸುವವರು ಯಾರಿದ್ದಾರೆ ಎಂದು ತಮ್ಮ ತಮ್ಮೊಳಗೆ ಮಾತಾಡಿಕೊಂಡರು' (ಮಾರ್ಕ 16:3).**

**ಅನುದಿನದ ಆಹಾರದ ವಾಚಕರೆಲ್ಲರಿಗೆ ಪುನರುತ್ಥಾನ ಹಬ್ಬದ ಶುಭಾಷಯಗಳು.**

ಯೇಸುಕ್ರಿಸ್ತನು ಮರಣ ಹೊಂದಿದ ಮೂರನೆಯ ದಿನ ಅಂದರೆ ವಾರದ ಮೊದಲನೆಯ ದಿನದಂದು, ಹೊತ್ತು ಮೂಡುವದಕ್ಕೆ ಮೊದಲೇ ಮಗ್ದಲದ ಮರಿಯಳೂ ಯಾಕೋಬನ ತಾಯಿ ಮರಿಯಳೂ, ಸಲೋಮೆಯೂ, ಯೆಹೂದ್ಯರ ಪದ್ಧತಿಯ ಪ್ರಕಾರ ಆತನ ದೇಹಕ್ಕೆ ಹಚ್ಚಲು ಸುಗಂಧ ದ್ರವ್ಯಗಳನ್ನು ತೆಗೆದುಕೊಂಡು ಹೋದರು. ಆದರೆ ಸಮಾಧಿಯ ಬಳಿಗೆ ನಡೆದು ಹೋಗುತ್ತಿರುವಾಗ, ಸಮಾಧಿಯ ಬಾಗಿಲಿಗೆ ನಿಲ್ಲಿಸಿರುವ ದೊಡ್ಡ ಬಂಡೆಯನ್ನು ಯಾರು ನಮಗಾಗಿ ಉರುಳಿಸುವರು? ಎಂಬ ಚಿಂತೆ ಅವರನ್ನು ಕಾಡಲಾರಂಭಿಸಿತು. ಏನಾಶ್ಚರ್ಯ! ಅವರು ಸಮಾಧಿಯ ಬಳಿಗೆ ಬಂದಾಗ ಆ ದೊಡ್ಡ ಬಂಡೆ ಉರುಳಿಸಲ್ಪಟ್ಟದ್ದನ್ನು ಕಂಡರು. ಒಬ್ಬ ದೇವದೂತನನ್ನು ಕಂಡು ಬೆಚ್ಚಿ ಬೆರಗಾದರು. ಆ ದೂತನು ಕರ್ತನು ಜೀವಿತನಾಗಿ ಎದ್ದಿದ್ದಾನೆಂಬ ವಿಷಯವನ್ನು ತಿಳಿಸಿದನು.

ಆದರೆ ಕ್ರಿಸ್ತನ ಹಿಂಬಾಲಕರು, ಮಾತ್ರವಲ್ಲ ಆತನ ಆಪ್ತ ಶಿಷ್ಯರೂ ಮೊದಲು ನಂಬಲಿಲ್ಲ, ಆನಂತರದ ನಾಲ್ವತ್ತು ದಿನಗಳು ಈ ಭೂಮಿಯಲ್ಲಿ ಆತನು ತನ್ನ ಶಿಷ್ಯರಿಗೆ, ಹಿಂಬಾಲಕರಿಗೆ ಕಾಣಿಸಿಕೊಳುತ್ತಾ ಬಂದು ಪರಲೋಕಕ್ಕೆ ಏರಿ ಹೋದನು. ಅದನ್ನು ಕಂಡ ಶಿಷ್ಯರು ಆತನ ಪುನರುತ್ಥಾನವನ್ನು ನಂಬುವವರಾದರು. ಇಂದೂ ಸಹ ಅನೇಕರು ಕ್ರಿಸ್ತನ ಹಿಂಬಾಲಕರೆನಿಸಿಕೊಂಡಿದ್ದಾಗ್ಯೂ, ಕ್ರಿಸ್ತನ ಜನನ, ಮರಣ, ಪುನರುತ್ಥಾನಗಳಲ್ಲಿ ಅಡಗಿರುವ ಸತ್ಯ ಮತ್ತು ಶಕ್ತಿಯನ್ನು ಅರಿಯದವರಾಗಿರುವರು. ಅಂದು ಆ ಮೂವರು ಸ್ತ್ರೀಯರು, ಸಮಾಧಿಯ ಬಾಗಿಲಿಗೆ ಮುಚ್ಚಿದ್ದ ಆ ದೊಡ್ಡ ಬಂಡೆಯನ್ನು ನಮಗಾಗಿ ಉರುಳಿಸುವವರು ಯಾರು? ಎಂದು ಚಿಂತೆಗೆ ಒಳಗಾದಂತೆ ಇಂದು ಅನೇಕ ಕ್ರೈಸ್ತರು, ಈ ಪ್ರಪಂಚದ ಜಂಜಾಟಗಳಿಗೆ, ಸಮಸ್ಯೆಗಳಿಗೆ ಸಿಲುಕಿ, ಹೊರಬರಲು, ಚಡಪಡಿಸುತ್ತಿರುವರು. ಬಿಡುಗಡೆ ನೀಡುವ ಕ್ರಿಸ್ತನ ರಕ್ತದಲ್ಲಿ ಅಡಗಿರುವ ಶಕ್ತಿ ಎಂಥದ್ದೆಂಬುದನ್ನು ತಿಳಿಯದೇ ಹೋಗಿರುವರು.

ದೇವಮಕ್ಕಳೇ, ಇಂದು ನಾವು ಕ್ರಿಸ್ತನ ಪುನರುತ್ಥಾನದ ಹಬ್ಬವನ್ನು ಸಡಗರ ದಿಂದ ಆಚರಿಸುತ್ತಿದ್ದೇವೆ. ಆದರೆ ಇದು ಬರೀ ಆಚರಣೆಯಾಗಿ ಉಳಿಯದೆ, ಕಲ್ವಾರಿ ಕ್ರೂಜೆಯಲ್ಲಿ ಸುರಿದ ಕ್ರಿಸ್ತನ ರಕ್ತದಲ್ಲಿ ಅಡಗಿರುವ ಶಕ್ತಿಯನ್ನೂ ಆತನ ಪುನರುತ್ಥಾನದ ಮಹಿಮೆಯನ್ನು ಇಂದು ಅರಿತು, ಆ ಮಹಿಮೆಯನ್ನು ನಾವು ನಮ್ಮ ಜೀವಿತಗಳಲ್ಲಿ ಅನುಭವಕ್ಕೆ ತಂದುಕೊಳ್ಳಲು, ಪ್ರಯತ್ನಿಸೋಣ. ದೇವಕುಮಾರನಾದ ಯೇಸುಕ್ರಿಸ್ತನು ನಮ್ಮ ಪಾಪ, ಶಾಪ, ವ್ಯಾಧಿಗಳಿಂದ ವಿಮೋಚಿಸಲು ಬಂದನೆಂಬುದರಲ್ಲಿ ಮಾತ್ರ ನಂಬಿಕೆ ಇಡದೆ, ಆತನ ಪುನರುತ್ಥಾನದ ಶಕ್ತಿಯಲ್ಲಿ ನಂಬಿಕೆ ಇಡುವದು ಅಷ್ಟೇ ಮುಖ್ಯ.

**ನೆನಪಿಗೆ : 'ಕರ್ತನು ಅವರ ಕೂಡ ಕೆಲಸ ಮಾಡುತ್ತಾ ಸೂಚಕಕಾರ್ಯಗಳಿಂದ ಸುವಾರ್ತೆಯ ವಾಕ್ಯವನ್ನು ಬಲಪಡಿಸುತ್ತಾ ಇದ್ದನು' (ಮಾರ್ಕ 16:20).**

# ಹೋರಾಡುವ ಪವಿತ್ರಾತ್ಮನು!



**'ಆಗ ಯೆಹೋವನು–ನನ್ನ ಆತ್ಮವು ಮನುಷ್ಯರಲ್ಲಿ ಶಾಶ್ವತವಾಗಿರುವದಿಲ್ಲ.....ಅವರ ಆಯುಷ್ಯವು ನೂರ ಇಪ್ಪತ್ತು ವರುಷವಾಗಿರಲಿ ಅಂದನು' (ಆದಿ 6:3).**

ಭೂಮಿಯಲ್ಲಿ ಮನುಷ್ಯನನ್ನು ಸೃಷ್ಟಿಸಿದ್ದಕ್ಕಾಗಿ, ಕರ್ತನು ಪಶ್ಚಾತ್ತಾಪ ಪಟ್ಟು ಹೃದಯದಲ್ಲಿ ನೊಂದುಕೊಂಡನು (ಆದಿ 6:6). ಈ ವ್ಯಾಕ್ಯವನ್ನು ಓದುವಾಗ ನಿಜವಾಗಿಯೂ ಬಹಳ ದುಃಖವಾಗುತ್ತದೆ, ಕರ್ತನು ಎಷ್ಟೊಂದು ಪ್ರೀತಿಯಿಂದ ಮನುಷ್ಯನನ್ನು ಸೃಷ್ಟಿಸಿದನು. ಅವನಿಗಾಗಿ ಎಲ್ಲವನ್ನೂ ಸೃಷ್ಟಿಸಿದಾಗ, ದೇವರು, "ಒಳ್ಳೆಯದು, ಒಳ್ಳೆಯದು" ಎಂದು ನೋಡಿದನು. ಮನುಷ್ಯನ ಮೇಲೆ ಅಪಾರ ಪ್ರೀತಿಯನ್ನು ಇಟ್ಟದ್ದರಿಂದ, ಯಾವ ಸೃಷ್ಟಿಗೂ ಸಿಗದ ಸಾರೂಪ್ಯವನ್ನು, ರೂಪವನ್ನೂ ಮನುಷ್ಯನಿಗೆ ಕೊಟ್ಟನು. ಆದರೆ ಅವನೋ, ಕರ್ತನನ್ನು ದುಃಖ ಪಡಿಸಿದನು.

ಇಸ್ರಾಯೇಲ್ಯರನ್ನು ಫರೋಹನ ದಾಸತ್ವದಿಂದಲೂ, ಐಗುಪ್ತರ, ಹಿಂಸೆಗಳಿಂದಲೂ ಕರ್ತನು ಬಿಡುಗಡೆಗೊಳಿಸಿ, ಎಷ್ಟೋ ಅದ್ಭುತಗಳನ್ನು ಮಾಡಿದನು. ಕೆಂಪು ಸಮುದ್ರವನ್ನು ಇಬ್ಭಾಗ ಮಾಡಿದನು. ಫರೋಹನನ್ನೂ, ಅವನ ಸೈನ್ಯವನ್ನೂ, ಕೆಂಪು ಸಮುದ್ರದಲ್ಲಿ ಮುಳುಗಿಸಿದನು. ಅವರಾದರೋ, ಮೋಡಗಳ ಕೆಳಗೆ, ಸಮುದ್ರದ ಮಾರ್ಗವಾಗಿ ನಡೆದು ಬಂದರು. ಅವರೆಲ್ಲರೂ ಮೋಶೆಯ ಶಿಷ್ಯರಾಗುವದಕ್ಕಾಗಿ ಮೇಘದಲ್ಲಿಯೂ, ಸಮುದ್ರದಲ್ಲಿಯೂ ದೀಕ್ಷಾಸ್ನಾನವನ್ನು ಹೊಂದಿದರು; ಅವರೆಲ್ಲರೂ ದೈವಿಕವಾದ ಒಂದೇ ಆಹಾರವನ್ನು ತಿಂದರು; ದೈವೀಕವಾದ ಒಂದೇ ನೀರನ್ನು ಕುಡಿದರು; ಆದರೂ ಅವರೊಳಗೆ ಬಹು ಮಂದಿಯ ವಿಷಯದಲ್ಲಿ ದೇವರು ಸಂತೋಷಿಸಲಿಲ್ಲ (1ಕೊರಿ 10:2–5).

ಒಬ್ಬ ಮನುಷ್ಯನು ಪಾಪ ಮಾಡಲು ಹೊರಟಾಗ ದೇವರಾತ್ಮನು ಎಷ್ಟು ತಡೆಯಲು ಸಾಧ್ಯವೋ ಅಷ್ಟರ ಮಟ್ಟಿಗೆ ತಡೆಯುವನು. ಹಿಂಜಾರುವಿಕೆಯಿಂದ ಪರಿಶುದ್ಧ ಮಾರ್ಗದಲ್ಲಿ ನಡೆಸಲು ಬಯಸುವನು. ಸರಿಪಡಿಸಿಕೊಳ್ಳಲು ಎಷ್ಟೋ ಅವಕಾಶಗಳನ್ನು ನೀಡುತ್ತಿರುವನು. ದೇವರಾತ್ಮನು, ನಿಮ್ಮ ಮೇಲೆ ಇಟ್ಟ ಪ್ರೀತಿಯಿಂದಾಗಿ, ನಿಮ್ಮೊಂದಿಗೆ ಹೋರಾಡುವನು. ಆದ್ದರಿಂದ ನೀವು ನಿಮ್ಮ ಆಂತರ್ಯವನ್ನು ಶುದ್ಧವಾಗಿಯೂ, ನೀತಿಯುಳ್ಳದ್ದಾಗಿಯೂ ಇಟ್ಟುಕೊಳ್ಳಿರಿ. ನಿಮ್ಮ ಗುರಿಯೆಲ್ಲಾ ಕರ್ತನನ್ನು ಮೆಚ್ಚಿಸುವದೇ ಆಗಿರಲಿ.

ದೇವಮಕ್ಕಳೇ, ನಿಮ್ಮನ್ನು ನೀವು ಪರೀಕ್ಷಿಸಿ ನೋಡಿರಿ. ನೋಹನ ಕಾಲದಲ್ಲಿ ನಡೆದಂತೆ, ಕರ್ತನ ಬರುವಿಕೆಯ ದಿನಗಳಲ್ಲಿಯೂ ನಡೆಯುವದು ಎಂದು ಯೇಸುಕ್ರಿಸ್ತನು ಹೇಳಿರುವನಲ್ಲವೇ? ಎಲ್ಲೆಲ್ಲಿಯೂ ದುರ್ಮಾರ್ಗತನ ಅಕ್ರಮಗಳು ತಲೆ ಎತ್ತಿ ನಿಂತಿರುವ ಈ ಕಾಲದಲ್ಲಿ, ನೀವು ಕರ್ತನನ್ನು ಪ್ರೀತಿಸುವಿರಾ? ಆತನಿಗೆ ಮೆಚ್ಚಿಕೆಯಾಗಿ ನಡೆಯುವಿರಾ? ದುಃಖದಿಂದ ನಿಂತಿರುವ, ಕರ್ತನನ್ನು ಸಂತೋಷ ಪಡಿಸುವಿರಾ?

**ನೆನಪಪಿಗೆ : 'ಎಲ್ಲಾ ದ್ವೇಷ ಕೋಪ ಕ್ರೋಧ ಕಲಹ ದೂಷಣೆ ಇವುಗಳನ್ನೂ ಸಕಲ ವಿಧವಾದ ದುಷ್ಟತನವನ್ನೂ.....ಕ್ಷಮಿಸುವವರಾಗಿಯೂ ಇರ್ರಿ' (ಎಫೆ 4:31,32).**

# ಪಾಪ ಚಿಂತನೆಗಳು!



**'ಅವರು ಹೃದಯದಲ್ಲಿ ಯೋಚಿಸುವದೆಲ್ಲವು ಯಾವಾಗಲೂ ಬರೀ ಕೆಟ್ಟದ್ದಾಗಿರುವದನ್ನೂ ಯೆಹೋವನು ನೋಡಿ...' (ಆದಿ 6:5).**

ಮನಸ್ಸಿನಲ್ಲಿ ಏಳುವ ಆಲೋಚನೆಗಳು, ನೆನಪುಗಳನ್ನು ಕುರಿತು, ಪ್ರತಿಯೊಬ್ಬ ವಿಶ್ವಾಸಿಯೂ ಜಾಗ್ರತೆಯುಳ್ಳವರಾಗಿರಬೇಕು. ಯೋಚನೆಗಳೇ, ಮಾತುಗಳಾಗಿ ಮಾರ್ಪಡುವದು, ಮಾತುಗಳು ಕಾರ್ಯರೂಪವಾಗಿ ಹೊರಬರುವದು. ಒಳ್ಳೆಯ ಕಾರ್ಯಗಳು, ಕರ್ತನನ್ನು ಸಂತೋಷಪಡಿಸುವದು. ದುಷ್ಟ ಕಾರ್ಯಗಳು, ಒಬ್ಬ ಮನುಷ್ಯನನ್ನು ಪಾತಾಳಕ್ಕೆ ತಳ್ಳುವದು. ಪಾಪಯೋಚನೆಗಳು ಅಪಾಯಕರವಾದವುಗಳು ಸೈತಾನನು ತಂದು ಹಾಕುವ ಯೋಚನೆಗಳನ್ನು, ಯೇಸುಕ್ರಿಸ್ತನ ರಕ್ತದ ಮೂಲಕ ಎದುರಿಸಿ ನಿಂತು, ಹೊಡೆದೋಡಿಸಿರಿ.

ಮನುಷ್ಯರ ಮನಸ್ಸಿನೊಳಗಿಂದ ಸೂಳೆಗಾರಿಕೆ ಕಳ್ಳತನ, ಕೊಲೆ ಹಾದರ ದ್ರವ್ಯಾಶೆ ಕೆಡುಕುತನ, ಮೋಸ, ಬಂಡತನ, ಹೊಟ್ಟೇಕಿಚ್ಚುಗಳು, ಬೈಗಳು ಸೊಕ್ಕು, ಬುದ್ಧಿಗೇಡಿತನ ಇವೇ ಮೊದಲಾದವುಗಳ ಕೆಟ್ಟ ಆಲೋಚನೆಗಳು ಹೊರಡುತ್ತವೆ (ಮಾರ್ಕ 7:21,22) ಎಂದು ದೇವರ ವಾಕ್ಯ ಹೇಳುತ್ತದೆ. ಈ ಎಲ್ಲಾ ಪಾಪಗಳಿಗೆ ನಮ್ಮ ಮನಸ್ಸಿನಲ್ಲಿನ ಯೋಚನೆಯೇ ಕಾರಣ. ಅನೇಕರು ತಮ್ಮ ಯೋಚನೆಗಳನ್ನು, ಮನಬಂದಂತೆ ಹುಚ್ಚುಕುದುರೆಯಂತೆ ಓಡಲು ಬಿಟ್ಟು ಕೊನೆಯಲ್ಲಿ ಇಕ್ಕಟ್ಟಿಗೆ ಒಳಗಾಗುವರು. ಒಬ್ಬನು ಪ್ರಪಂಚವನ್ನೇ ಆಳುವವನಾದರೂ, ತನ್ನ ಮನಸ್ಸಿನ ಯೋಚನೆಗಳನ್ನು ಆಳದೇ ಹೋದರೆ ಆತ್ಮವನ್ನು ನಾಶಪಡಿಸಿಕೊಳ್ಳುವನು.

ಒಂದು ಬಾವಿಯ ಮೇಲೆ ಸಾವಿರಾರು ಪಕ್ಷಿಗಳು ಹಾರಾಡಬಹುದು ಆ ಬಾವಿ ಸ್ಥಳಕೊಟ್ಟರೆ, ಕಟ್ಟೆಯ ಮೇಲೆ ಕುಳಿತು ಹೇಸಿಗೆ ಮಾಡುವದು, ಆ ಹೇಸಿಗೆಯಲ್ಲಿನ ಕೆಲವು ಬೀಜಗಳು ಮೊಳೆತು, ದೊಡ್ಡ ಮರವಾಗಿ ಬಿಡುವದು. ಬಾವಿ ಮುಚ್ಚಿ ಹೋಗುವದು. ಅದೇ ರೀತಿ ಒಬ್ಬನು ತನ್ನ ಮನಸ್ಸೆಂಬ ಬಾವಿಯಲ್ಲಿ ಏಳುವ ಯೋಚನೆಗಳ ಕುರಿತು ಜಾಗ್ರತೆ ಉಳ್ಳವನಾಗಿರಬೇಕು ಪಾಪವೆಂಬ ಮರ ನಿಮ್ಮ ಆತ್ಮೀಕ ಬಾವಿಯನ್ನು ಆವರಿಸಿದಂತೆ, ಎಚ್ಚರದಿಂದಿರ್ರಿ. ಆದ್ದರಿಂದ ಅಪೊ.ಪೌಲನು, ಹೀಗೆ ಹೇಳುತ್ತಾನೆ "ನಾವು ವಿತರ್ಕಗಳನ್ನೂ ದೇವಜ್ಞಾನವನ್ನು ವಿರೋಧಿಸುವದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನೂ ಕೆಡವಿಹಾಕಿ ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆಹಿಡಿಯಿರಿ" ಎಂದು (2ಕೊರಿ 10:5).

ದೇವಮಕ್ಕಳೇ, ನೋಹನ ಕಾಲದಲ್ಲಿ ಭಯಂಕರ ನ್ಯಾಯತೀರ್ಪಾದ, ಜಲಪ್ರಳಯ ಬಂದು ಜನರನ್ನು ಪ್ರಪಂಚವನ್ನು ನಾಶಕ್ಕೆ ಒಳಪಡಿಸಿತು. ಇಂದು ಕೃಪೆಯ ಕಾಲದಲ್ಲಿ ಜೀವಿಸುತ್ತಿರುವ ನೀವು ಎಷ್ಟೋ ಭಯದಿಂದಲೂ, ನಡುಕದಿಂದಲೂ ನಿಮ್ಮ ಯೋಚನೆಗಳನ್ನು ಕಾಪಾಡಿಕೊಳ್ಳಬೇಕು. ದೇವಕೃಪೆಯನ್ನು ಪಡೆಯುವ ಈ ಕಾಲದಲ್ಲಿ ನ್ಯಾಯ ತೀರ್ಪುಕಠಿಣವಾಗಿರುವದು ಅಲ್ಲವೇ? ನಿಮ್ಮ ಯೋಚನೆಗಳು ಯಾವಾಗಲೂ ಪವಿತ್ರಾತ್ಮನಿಂದ ಶುದ್ಧವಾಗಿರುವಂತೆ, ಯಾವಾಗಲೂ, ಪವಿತ್ರಾತ್ಮನಿಂದ ತುಂಬಿದವರಾಗಿರಿ.

**ನೆನಪಿಗೆ : 'ಪ್ರಿಯರೇ, ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು....ಪ್ರಯತ್ನಿಸೋಣ' (2ಕೊರಿ 7:1).**

ಏಪ್ರಿಲ್
04

# ದುಷ್ಟಯೋಚನೆಗಳು!

ಬೆಳಿಗ್ಗೆ: ರೂತಳು 1,2,3,4
ಸಂಜೆ: ಲೂಕ 8:1–25

**'ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವದನ್ನೂ ಅವರು ಹೃದಯದಲ್ಲಿ ಯೋಚಿಸುವದೆಲ್ಲವು ಯಾವಾಗಲೂ ಬರೀ ಕೆಟ್ಟದ್ದಾಗಿರುವದನ್ನೂ.....' (ಆದಿ 6:5).**

ದೇವರು ನಿಮ್ಮ ಕಾರ್ಯಗಳನ್ನು ಮಾತ್ರವಲ್ಲ, ನಿಮ್ಮ ಮನಸ್ಸನ್ನೂ ಗಮನಿಸುವನು. ಅರಿತುಕೊಳ್ಳುವನು. ನೋಹನ ಕಾಲದಲ್ಲಿ ಜಲಪ್ರಳಯವೆಂಬ ನ್ಯಾಯ ತೀರ್ಪು ಬರಲು, ಮುಖ್ಯವಾದ ಕಾರಣ, ಆ ಕಾಲದಲ್ಲಿ ಜೀವಿಸಿದ್ದ ಜನರ ಹೃದಯದಲ್ಲಿ ಯೋಚಿಸುವದು ಬರೀ ಕೆಟ್ಟದಾಗಿತ್ತು ಆತನು ಅವರ ಮನಸ್ಸಿನ ಯೋಚನೆಗಳನ್ನು ತಿಳಿದಾತನಾಗಿದ್ದನು.

ಒಂದು ದಿನ ಫರಿಸಾಯರೂ, ಶಾಸ್ತ್ರಿಗಳೂ, ದೇವದೂಷಣೆಯ ಮಾತನಾಡುವ ಇವನು ಎಷ್ಟರವನು? ಪಾಪಗಳನ್ನು ಕ್ಷಮಿಸಿ ಬಿಡುವದಕ್ಕೆ ದೇವರೊಬ್ಬನಿಂದ ಹೊರತು ಮತ್ತಾರಿಂದಾದೀತು ಎಂದು ಅಂದುಕೊಳ್ಳುತ್ತಿದ್ದರು. ಆದರೆ ಅವರು ಹಾಗಂದು ಕೊಳ್ಳುತ್ತಿದ್ದದ್ದನ್ನು ಯೇಸುಕ್ರಿಸ್ತನು ಅರಿತು ಅವರಿಗೆ ನೀವು ನಿಮ್ಮ ಮನಸ್ಸಿನಲ್ಲಿ ಅಂದುಕೊಳ್ಳುವದೇನು? (ಲೂಕ 5:21,22) ಎಂದು ಹೇಳಿದನು. ಇನ್ನೊಂದು ಸಂದರ್ಭದಲ್ಲಿ ಫರಿಸಾಯರು, ಯೇಸು ಬೆಲ್ಜೆಬೂಲನ ಸಹಾಯದಿಂದ ದೆವ್ವಗಳನ್ನು ಓಡಿಸುವನೆಂದು ಅಂದುಕೊಂಡಾಗ, ಅವರು ಆಲೋಚಿಸುವದನ್ನು ಆತನು ಅರಿತು ಅವರಿಗೆ "ತನ್ನಲ್ಲಿ ಭೇದ ಹುಟ್ಟಿದ ರಾಜ್ಯವು ಹಾಳಾಗುತ್ತದೆ, ಮತ್ತು ಭೇದಹುಟ್ಟಿದ ಮನೆ ಬೀಳುತ್ತದೆ" ಎಂದು ಹೇಳಿದನು (ಲೂಕ 11:17). ಮತ್ತಾಯ 9:4 ರಲ್ಲಿ ಕರ್ತನು ಮನುಷ್ಯರ ಆಲೋಚನೆಗಳನ್ನು ಬಲ್ಲಾತನು ಎಂಬುದನ್ನು ತಿಳಿಯಬಹುದು.

ಮನಸ್ಸಿನಲ್ಲಿ ಏಳುವ ಆಲೋಚನೆಗಳನ್ನು ಸರಿಪಡಿಸುವದಕ್ಕಾಗಿ, ಕ್ರಿಸ್ತನು ಜನರಿಗೆ ಬರಬೇಕಾದ ನ್ಯಾಯತೀರ್ಪನ್ನು ತನ್ನ ಶಿರಸ್ಸಿನ ಮೇಲೆ ಹೊತ್ತುಕೊಂಡು, ಮುಳ್ಳಿನಕಿರೀಟವನ್ನು ಶಿಲುಬೆಯಲ್ಲಿ ಧರಿಸಿದವನಾದನು. ನಮ್ಮ ಮನಸ್ಸಿನ ಆಲೋಚನೆಗಳನ್ನು ಶುದ್ಧೀಕರಿಸಲು ಕ್ರಿಸ್ತನು ಶಿಲುಬೆಯಲ್ಲಿ ಎಷ್ಟೋಂದು ಶ್ರಮೆಯನ್ನು ಅನುಭವಿಸಿ ತನ್ನ ಪ್ರಾಣವನ್ನೇ ಅರ್ಪಿಸಿದನಲ್ಲವೇ? ಸತ್ಯವೇದವು ಹೇಳುತ್ತದೆ ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳು ಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ. ಪಾಪವು ಕೊಡುವ ಸಂಬಳ ಮರಣ ಆದ್ದರಿಂದ ದುಷ್ಟಯೋಚನೆಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು. ಕರ್ತನ ಮಾರ್ಗದಲ್ಲಿ ನಡೆಯಿರಿ.

ದೇವಮಕ್ಕಳೇ, ನಿಮ್ಮ ಯೋಚನೆಗಳು ಪರಿಶುದ್ಧವಾಗಿರಬೇಕೆಂದು ಬಯಸುವಿರಾ? ಶಿಲುಬೆಯ ಬಳಿ ಬಂದು ನಿಲ್ಲಿರಿ. ಅಂದು ನೋಹನ ಕಾಲದಲ್ಲಿ ಜನರು ಯೋಚಿಸುವದೆಲ್ಲಾ ಕೆಟ್ಟದ್ದೇ ಆಗಿದ್ದದರಿಂದ, ದೇವರ ನ್ಯಾಯತೀರ್ಪು ಅವರ ಮೇಲೆ ಬಂತು. ಆದರೆ ಇಂದು ನಿಮಗೆ ಕ್ರಿಸ್ತನ ರಕ್ತದ ಮೂಲಕ ಕರುಣೆ ದೊರಕಿರುವದು. ನಿಮ್ಮ ಯೋಚನೆಗಳು ಶುದ್ಧೀಕರಿಸಲ್ಪಡಲು ಕ್ರಿಸ್ತನು ಶಿಲುಬೆಯಲ್ಲಿ ಸುರಿಸಿದ ರಕ್ತ ಅಮೂಲ್ಯವಾದ ಪರಿಹಾರವಾಗಿರುವದು. ಇಂದೇ ಆತನನ್ನು ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿ ಕೊಳ್ಳುವಿರಾದರೆ, ಮುಂದೆ ಬರಲಿರುವ ನ್ಯಾಯ ತೀರ್ಪಿಗೆ ತಪ್ಪಿಸಿಕೊಳ್ಳುವಿರಿ.

**ನೆನಪಿಗೆ : 'ಹೇಗಂದರೆ ಮನಸ್ಸಿನೊಳಗಿಂದ ಕೆಟ್ಟ ಆಲೋಚನೆ ಕೊಲೆ ಹಾದರ ಸೂಳೆಗಾರಿಕೆ ಕಳ್ಳತನ ಸುಳ್ಳುಸಾಕ್ಷಿ ಬೈಗಳು ಹೊರಟು ಬರುತ್ತವೆ' (ಮತ್ತಾ 15:19).**

# ಯೆಹೋವನ ದಯೆ!

ಬೆಳಿಗ್ಗೆ: 1ಸಮು 1,2,3
ಸಂಜೆ: ಲೂಕ 8:26-56

**'ನೋಹನಿಗೆ ಯೆಹೋವನ ದಯವು ದೊರೆಯಿತು' (ಆದಿ 6:8).**

ಕರ್ತನ ಕಣ್ಣುಗಳಲ್ಲಿ ದಯೆದೊರಕಿತು! ಆ ಕೃಪಾ ಪೂರಿತ ಕಣ್ಣುಗಳನ್ನು ಒಂದು ಸಾರಿ ದೃಷ್ಟಿಸಿ ನೋಡಿರಿ. ಆತನು ದಯೆಯೂ, ಕನಿಕರವೂ ದೀರ್ಘಶಾಂತಿಯೂ ಆಗಿದ್ದಾನೆ. ಆತನ ಕಣ್ಣುಗಳು ಪ್ರೀತಿ, ಕನಿಕರಗಳಿಂದ ತುಂಬಿದ ಕಣ್ಣುಗಳು. ಅದೇ ವೇಳೆಯಲ್ಲಿ ಕೃಪಾ ಪೂರಿತವಾದ ಕಣ್ಣುಗಳು ನೋಹನಿಗೆ ಕರ್ತನ ದೃಷ್ಟಿಯಲ್ಲಿ ಕೃಪೆ ದೊರಕಿತು.

ಕರ್ತನ ಕಣ್ಣು ಎಂಥವುಗಳೆಂಬುದನ್ನು ಪರಮ ಗೀತ 5:12 ರಲ್ಲಿ ಕಾಣುತ್ತೇವೆ "ಅವನ ಕಣ್ಣುಗಳೋ ತುಂಬಿತುಳುಕುವ ತೊರೆಗಳ ಹತ್ತಿರ ತಂಗುತ್ತಲೂ, ಕ್ಷೀರದಲ್ಲಿ ಸ್ನಾನ ಮಾಡುತ್ತಲೂ ಇರುವ ಪಾರಿವಾಳಗಳಂತೆಯೂ ಇವೆ. ಆ ಕಣ್ಣುಗಳಲ್ಲಿ ನಿಮಗೆ ಕೃಪೆ ದೊರಕುವದು, ಕೃಪೆಯ ಆತ್ಮ ದೊರಕುವದು ಕೃಪೆಯ ಅಭಿಷೇಕ ದೊರೆಯುವದು. ಯಾರಿಗೆ ಕೃಪೆ ನೀಡಲಿ ಎಂದು ಆತನ ಕಣ್ಣುಗಳು ಮನುಷ್ಯರನ್ನು ಹುಡುಕುತ್ತಿರುವದು. "ಯೆಹೋವನು ಭೂಲೋಕದ ಎಲ್ಲಾ ಕಡೆಗಳಲ್ಲಿಯೂ ದೃಷ್ಟಿಯನ್ನು ಪ್ರಸರಿಸುತ್ತಾ ತನ್ನ ಕಡೆಗೆ ಯಥಾರ್ಥಮನಸ್ಸುಳ್ಳವರ ರಕ್ಷಣೆಗಾಗಿ ತನ್ನ ಪ್ರತಾಪವನ್ನು ತೋರ್ಪಡಿಸುತ್ತಾನೆ" (2ಪೂ.ವೃ 16:9). ಕರ್ತನ ಕಣ್ಣುಗಳು ಯಥಾರ್ಥ ಮನಸ್ಸುಳ್ಳವರನ್ನು, ಆತನನ್ನು ಹಿಂಬಾಲಿಸುವವರನ್ನು ದೃಷ್ಟಿಸುವದು. "ನೋಹನು ನೀತಿವಂತನೂ ತನ್ನ ಕಾಲದವರಲ್ಲಿ ತಪ್ಪಿಲ್ಲದವನೂ ಆಗಿದ್ದನು; ಅವನು ದೇವರೊಂದಿಗೆ ಅನ್ಯೋನ್ಯವಾಗಿ ಇದ್ದನು" (ಆದಿ 6:9). ಆದುದ್ದರಿಂದಲೇ ಅವನಿಗೆ ದೇವರ ದಯೆ ದೊರಕಿತು. ನೋಹನು ತತ್ಕಾಲದಲ್ಲಿ ಕಾಣದಂಥವುಗಳ ಕುರಿತು ದೇವರಿಂದ ಎಚ್ಚರಿಕೆಯನ್ನು ಪಡೆದು ಭಯಭಕ್ತಿಯುಳ್ಳವನಾಗಿ, ತನ್ನ ಕುಟುಂಬ ರಕ್ಷಿಸಲ್ಪಡುವದಕ್ಕಾಗಿ ನಾವೆಯನ್ನು ಕಟ್ಟಿದನು; ಅದರಿಂದ ಅವನು ಲೋಕದವರನ್ನು ದಂಡನೆಗೆ ಪಾತ್ರರೆಂದು ನಿರ್ಣಯಿಸಿಕೊಂಡು ನಂಬಿಕೆಯ ಫಲವಾದ ನೀತಿಗೆ ಬಾಧ್ಯನಾದನು (ಇಬ್ರಿ 11:7). ದೇವರ ದೃಷ್ಟಿಯಲ್ಲಿ ದಯೆಯು ದೊರಕಿತು, ನೋಹನ ಇಡೀ ಕುಟುಂಬ ರಕ್ಷಣೆಯ ನಾವೆಯಲ್ಲಿ ಕಾಪಾಡಲ್ಪಟ್ಟಿತು. "ನಾನೂ ನನ್ನ ಮನೆಯವರೂ ಕರ್ತನನ್ನೇ ಸೇವಿಸುವೆವು" ಎಂದು ಯಾರ್‍ಯಾರು ಕರ್ತನಿಗೆ ಒಪ್ಪಿಸಿ ಕೊಡುತ್ತಾರೋ. ಅವರ ಮನೆಯವರೆಲ್ಲರಿಗೂ ರಕ್ಷಣೆಯ ನಾವೆಯಾಗಿರುವ ಯೇಸುಕ್ರಿಸ್ತನ ಬಳಿ ಸ್ಥಳವಿರುವದು.

ದೇವಮಕ್ಕಳೇ, ನೀವು ಕರ್ತನನ್ನು ಶುದ್ಧ ಹೃದಯದಿಂದ ಹಿಂಬಾಲಿಸಿ ಆತನಲ್ಲಿ ನೆಲೆಗೊಂಡು ಆತನ ಆಜ್ಞೆಗಳನ್ನು ಕೈಗೊಂಡು ನಡೆಯಲಿ ಹಾಗೂ ಆತನ ದೃಷ್ಟಿಯಲ್ಲಿ ಮೆಚ್ಚಿಕೆಯಾಗಿ ನಡೆದು ಕೊಳ್ಳಲು ತೀರ್ಮಾನಿಸುವಾಗ, ಎಷ್ಟೇ ದೊಡ್ಡ ಜಲ ಪ್ರಳಯ ಬಂದರೂ, ಕರ್ತನು ನಿಮ್ಮನ್ನು ಅದರಿಂದ ತಪ್ಪಿಸುವನು. ರಕ್ಷಿಸುವನು, ಆದಕಾರಣ ದೇವರ ದೃಷ್ಟಿಯಲ್ಲಿ ದಯೆ ದೊರಕುವಂತೆ ನಡೆದುಕೊಳ್ಳಿರಿ.

**ನೆನಪಿಗೆ : 'ನಿಮ್ಮ ದೇವರಾದ ಯೆಹೋವನು ದಯೆಯೂ ಕನಿಕರವೂ ಉಳ್ಳವನಾಗಿರುತ್ತಾನೆ ಆತನು ತನ್ನ ಕಡೆಗೆ ತಿರುಗಿಕೊಳ್ಳುವ ನಿಮ್ಮನ್ನು ಕಟಾಕ್ಷಿಸದೆ ಇರುವದಿಲ್ಲ' (2ಪೂ.ವೃ 30:9).**

# ಕೃಪಾಭರಿತ ಕಣ್ಣುಗಳು!

ಬೆಳಿಗ್ಗೆ: 1ಸಮು 4,5,6
ಸಂಜೆ: ಲೂಕ 9:1–17

**'ನೋಹನಿಗೆ ಯೆಹೋವನ ದಯವು ದೊರಕಿತು' (ಆದಿ 6:8).**

ಸತ್ಯವೇದದಲ್ಲಿ ಹಲವು ದೇವ ಭಕ್ತರಿಗೆ, ಕರ್ತನ ದೃಷ್ಟಿಯಲ್ಲಿ ಕೃಪೆ ದೊರಕಿರುವದೆಂಬುದನ್ನು ಕಾಣುತ್ತೇವೆ. ದಾವೀದನಿಗೆ ಕರ್ತನ ದೃಷ್ಟಿಯಲ್ಲಿ ಕೃಪೆ ದೊರಕಿತು (2ಸಮು 15:25). ಮನುಷ್ಯರಿಂದ ನಿಮಗೆ ದಯೆ ಸಿಗದೇ ಇರಬಹುದು, ಸಹಾಯ ಸಿಗದೇ ಇರಬಹುದು. ಆದರೆ ಕರ್ತನ ಕಣ್ಣುಗಳಲ್ಲಿ ನಿಮಗೆ ಕೃಪೆ ದೊರೆಯುವದು.

ಏದೆನ್ ತೋಟದಲ್ಲಿ, ಕೃಪಾಭರಿತವಾದ ಕರ್ತನ ಕಣ್ಣುಗಳು ಅಡಗಿಕೊಂಡಿದ್ದ ಆದಾಮ ಹವ್ವರನ್ನು ಹುಡುಕಿತು.ಯೋನನು ಕರ್ತನ ಕಣ್ಣುಗಳಿಗೆ ತಪ್ಪಿಸಿ ಓಡ ನೆನಸಿದನು. ಆದ್ದರಿಂದ, ಕರ್ತನ ಮಾತಿನಂತೆ, ನಿನೆವೆಗೆ, ಹೋಗದೆ, ತಾರ್ಷೀಷಿಗೆ ಹೋಗುವ ಹಡಗನ್ನು ಹತ್ತಿ ಹಡಗಿನ ಕೆಳಭಾಗದಲ್ಲಿ ಮಲಗಿದನು. ಕರ್ತನಿಗೆ ತಿಳಿಯದ್ದು ಒಂದೂ ಇಲ್ಲವೆಂಬುದನ್ನು ಆ ಪ್ರವಾದಿ ತಿಳಿದುಕೊಳ್ಳಲಿಲ್ಲ. ನೀನು ಹದ್ದಿನಂತೆ ಮೇಲಕ್ಕೆ ಏರಿದರೂ ನಿನ್ನ ಗೂಡು ನಕ್ಷತ್ರಮಂಡಲದಲ್ಲಿ ನೆಲೆಗೊಂಡಿದ್ದರೂ ಅಲ್ಲಿಂದ ನಿನ್ನನ್ನು ಇಳಿಸಿಬಿಡುವೆನು; ಇದು ಯೆಹೋವನ ನುಡಿ (ಓಬದ್ಯ 1:4).

"ಮನುಷ್ಯನ ಮಾರ್ಗಗಳು ಯೆಹೋವನಿಗೆ ಕಾಣುತ್ತಲೇ ಇವೆ, ಆತನು ಮನುಷ್ಯನ ನಡತೆಯನ್ನೆಲ್ಲಾ ಪರೀಕ್ಷಿಸುವವನಾಗಿದ್ದಾನೆ"(ಜ್ಞಾನೋ 5:21). "ಯೆಹೋವನ ದೃಷ್ಟಿಯು ಎಲ್ಲೆಲ್ಲಿಯೂ ಇರುವದು; ಆತನು ಕೆಟ್ಟವರನ್ನೂ ಒಳ್ಳೆಯವರನ್ನೂ ನೋಡುತ್ತಲೇ ಇರುವನು" (ಜ್ಞಾನೋ 15:3). ಕರ್ತನ ಕೃಪಾಭರಿತ ಕಣ್ಣುಗಳು ಕುಷ್ಠ ರೋಗಿಯನ್ನು ಕನಿಕರದಿಂದ ನೋಡಿ, ಸ್ವಸ್ಥಪಡಿಸಿತು" (ಮತ್ತಾ 8:1–3). ಕುರುಬನಿಲ್ಲದ ಕುರಿಗಳಂತೆ ಇದ್ದ ಜನರ ಗುಂಪನ್ನು ಕಂಡು ಕನಿಕರಪಟ್ಟು ಅವರಲ್ಲಿದ್ದ ರೋಗಿಗಳನ್ನು ಸ್ವಸ್ಥ ಮಾಡಿದನು (ಮತ್ತಾ 14:14).

ದೇವಮಕ್ಕಳೇ, ನಿಮ್ಮ ಕಣ್ಣುಗಳು ಕರ್ತನನ್ನೇ ದೃಷ್ಟಿಸಲಿ, ಕರ್ತನ ಕಣ್ಣುಗಳಲ್ಲಿ, ನಿಮಗೆ ಕೃಪೆ ಸಿಕ್ಕಿರುವದರಿಂದ ನಿಮ್ಮ ಜೀವಿತವನ್ನು ಪರಿಶುದ್ಧತೆಯೊಂದಿಗೆ ಕಾಪಾಡಿಕೊಳ್ಳಿರಿ. ನಿಮ್ಮ ಕಣ್ಣುಗಳು ಪರಿಶುದ್ಧತೆಯಿಂದ ಕೂಡಿರಲಿ, ನಿಮ್ಮ ಒಂದೊಂದು ಅವಯವವೂ ಪರಿಶುದ್ಧವಾಗಿರಲಿ, ಲೋಕದ ಮೇಲಿನ ಆಶೆಯನ್ನು ಇಚ್ಛೆಗಳನ್ನು ನಿಮ್ಮ ಕಣ್ಣುಗಳಿಂದ ತೊಲಗಿಸಿರಿ "ದೇವರೇ ನನ್ನ ಕಣ್ಣುಗಳು ಅಭಿಷೇಕದಿಂದ ತುಂಬಲ್ಪಟ್ಟ ಕಣ್ಣುಗಳಾಗಿರಲಿ ಕರುಣೆಯಿಂದ ತುಂಬಿದ ಕಣ್ಣುಗಳಾಗಿರಲಿ ಆತ್ಮಭಾರದಿಂದ ತುಂಬಿದ ಕಣ್ಣುಗಳಾಗಿರಲಿ. ನನ್ನ ಕಣ್ಣುಗಳು ಬಾಯಿ ಕಿವಿ ಒಂದೊಂದು ಅಂಗಗಳನ್ನು ನಿನ್ನ ಕಲ್ವಾರಿ ಬಲಿಪೀಠದಲ್ಲಿ ಇಡುತ್ತೇನೆ ಎಂದು ಪ್ರಾರ್ಥಿಸಿರಿ. ಈ ಲೋಕದ ಮಾಯೆಯನ್ನು ನೋಡದಂತೆ, ನಿಮ್ಮ ಕಣ್ಣುಗಳನ್ನು ಕರ್ತನಿಗೆಂದು ಪ್ರತಿಷ್ಟಿಸಿರಿ.

**ನೆನಪಿಗೆ : 'ಕ್ರಿಸ್ತ ಯೇಸುವಿನವರು ತಮ್ಮ ಶರೀರ ಭಾವವನ್ನು ಅದರ ವಿಷಯಾಭಿಲಾಷೆ ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದವರು' (ಗಲಾತ್ಯ 5:24).**

# ಕೃಪೆ ಕೃಪೆ!

ಬೆಳಿಗ್ಗೆ: 1ಸಮು 7,8,9
ಸಂಜೆ: ಲೂಕ 9:18–36

**'ನೋಹನಿಗೆ ಯೆಹೋವನ ಕೃಪೆ ದೊರಕಿತು' (ಆದಿ 6:8).**

ನೋಹನಿಗೂ ಅವನ ಕುಟುಂಬಕ್ಕೂ, ಕರ್ತನು ಕೊಟ್ಟ ಆಶೀರ್ವಾದಗಳನ್ನು ಸತ್ಯವೇದದಲ್ಲಿ ನೋಡುತ್ತೇವೆ. ಮೊದಲನೆಯದಾಗಿ, ಅವನ ಇಡೀ ಕುಟುಂಬಕ್ಕೆ ರಕ್ಷಣೆಯನ್ನು ನೀಡಿದನು ಎರಡನೆಯದಾಗಿ, ಅವರುಗಳಿಗೆ ಹೆದರುವಂತೆ ಎಲ್ಲಾ ಜೀವ ರಾಶಿಗಳೊಳಗೆ ಭಯವನ್ನು ಇಟ್ಟನು. ಮೂರನೆಯದಾಗಿ, ನೋಹನ ಕುಟುಂಬದ ಮೇಲೆ ಅಪರಿಮಿತವಾದ ಕೃಪೆಯನ್ನು ತೋರಿಸಿದ್ದರಿಂದ, ಆ ಕೃಪೆಯನ್ನು ಕರ್ತನು ಇಂದು ನಿಮಗೆ ವಾಗ್ದಾನಿಸಿರುವನು. ನನ್ನ ಕೃಪೆಯು ನಿನ್ನನ್ನು ಬಿಟ್ಟು ಹೋಗದು (ಯೆಶಾ 54:10). ಎಂಬುದೇ ಆತನ ವಾಗ್ದಾನ.

ಒಬ್ಬನು, ದೇವರ ಕೃಪೆಯನ್ನು ಅಲ್ಪವಾಗಿ ಎಣಿಸುವದಾದರೆ, ಮನಸ್ಸಿಗೆ ತೋಚಿದಂತೆ ಜೀವನವನ್ನು ನಡೆಸುವವನಾದರೆ. ಕರ್ತನು ತನ್ನ ಕೃಪೆಯನ್ನು ಅವನಿಂದ ತೆಗೆದು ರಕ್ಷಣೆಯೆಂಬ ಬೇಲಿಯನ್ನು ಮುರಿದು ಬಿಡುವನು. ಆಗ ಸೈತಾನನೂ, ಪ್ರಪಂಚದಿಂದುಂಟಾಗುವ ಕೇಡುಗಳು ಅವನನ್ನು ತಾಕುವದಕ್ಕೆ ಸಲೀಸಾಗುವದು. ಸೌಲನು ಅರಸನಾಗಿ ಅಭಿಷೇಕಿಸಲ್ಪಟ್ಟಿದ್ದರೂ ದೇವರ ಮಾತನ್ನು ತಿರಸ್ಕರಿಸಿದ್ದರಿಂದ, ಕರ್ತನು ತನ್ನ ಕೃಪೆಯನ್ನು ಅವನಿಂದ ತೆಗೆದು ಬಿಟ್ಟನು. ಆಗ ದುರಾತ್ಮವು ಸೌಲನನ್ನು ಹಿಡಿದು ಬಾಧಿಸಲ್ಪಟ್ಟನು (1ಸಮು 16:14).

2001 ನೇ ಇಸವಿಯಲ್ಲಿ ಅಮೆರಿಕಾದ ಹೆಮ್ಮೆಯ ಕಟ್ಟಡವೆನಿಸಿಕೊಂಡ, ಅವಳಿ ಗೋಪುರದ ವ್ಯಾಪರ ಕೇಂದ್ರ ಕಟ್ಟಡ (Twin tower centre) ಭಯೋತ್ಪಾದಕರಿಂದ ಕೆಡವಲ್ಪಟ್ಟಾಗ, "ಕರ್ತನು ಆ ದೇಶದಿಂದ ತನ್ನ ಕೃಪೆಯನ್ನು ತೆಗೆದು ಬಿಟ್ಟನೇನೋ? ಎಂದು ಭಾವಿಸಿದರು. ಈಗ ಅಮೆರಿಕಾವನ್ನು ಪುನಃ ಪುನಃ ಸಂಧಿಸುತ್ತಿರುವ ಬಿರುಗಾಳಿ ಸುಂಟರಗಾಳಿ, ಅತಿಯಾದ ಮಳೆ, ಪ್ರವಾಹಗಳು, ಆ ದೇಶದ ಜನರನ್ನು ಎಚ್ಚರಿಸುವದಕ್ಕಾಗಿಯೇ, ಕರ್ತನು ಕಳುಹಿಸುತ್ತಿರುವನು ಎಂಬುದನ್ನು ಅನೇಕ ಜನರು ಚಿಂತಿಸದೇ ಹೋಗಿರುವರು ಇಂಥಹ ಮಹಾ ಉಪದ್ರವಗಳು ಉಂಟಾಗುವಾಗೆಲ್ಲಾ ಜನರು ತಮ್ಮನ್ನು ತಗ್ಗಿಸಿಕೊಂಡು, ಪಾಪಗಳನ್ನು ಅರಿಕೆ ಮಾಡಿ, ತಮ್ಮ ದುರ್ಮಾರ್ಗಗಳನ್ನು ಬಿಟ್ಟು ದೇವರ ಕಡೆಗೆ ತಿರುಗಿದರೆ, ಕರ್ತನೂ ಕರುಣೆ ತೋರಿಸುವನು. ತಾನು ಕೊಡಬೇಕೆಂದಿರುವ ಶಿಕ್ಷೆಯಿಂದ ತಪ್ಪಿಸುವನು.

ದೇವಮಕ್ಕಳೇ, ದೇವಕೃಪೆ ಎಂಬುದು ನಿಮ್ಮನ್ನು ರಕ್ಷಿಸುವ ಬೇಲಿಂಯಂತಿರುವದು. ಕೃಪೆ ನಿಮ್ಮನ್ನು ಆವರಿಸುವಾಗ, ಅಲ್ಲಿ ನಿಮಗೆ ಆಶ್ರಯ ಉಂಟು, ರಕ್ಷಣೆ ಉಂಟು, ಅಂದು ನೋಹನಿಗೆ ತುರಾಯಿ ಮರದಿಂದ ಮಾಡಿದ ನಾವೆಯಲ್ಲಿ ಆಶ್ರಯ ರಕ್ಷಣೆ ಒದಗಿತು. ಆದರೆ ಇಂದು ಕ್ರಿಸ್ತನೆಂಬ ನಾವೆಯಲ್ಲಿ ರಕ್ಷಣೆ ಉಂಟು, ಇಂದೇ ಆತನ ಬಳಿಗೆ ಬಂದು ದೇವರ ಮಕ್ಕಳಾಗುವ ಕೃಪೆಗೆ ಪಾತ್ರರಾಗಿರಿ.

**ನೆನಪಿಗೆ : 'ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ಆತನಲ್ಲಿ ಭಯ ಭಕ್ತಿಯುಳ್ಳವರ ಮೇಲೆ ಆತನ ಕೃಪೆಯು ಅಷ್ಟು ಅಪಾರವಾಗಿದೆ' (ಕೀರ್ತನೆ 103:11).**

ಏಪ್ರಿಲ್
08

# ಸಂಚರಿಸಿದರು!

ಬೆಳಿಗ್ಗೆ: 1ಸಮು 10,11,12
ಸಂಜೆ: ಲೂಕ 9:37–62

**'ನೋಹನು ನೀತಿವಂತನೂ ತನ್ನ ಕಾಲದವರಲ್ಲಿ ತಪ್ಪಿಲ್ಲದವನೂ ಆಗಿದ್ದನು; ಅವನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು' (ಆದಿ 6:9).**

ಆದಾಮನಿಗೆ ಏಳನೇ ತಲೆಮಾರಿನವನಾದ, ಹನೋಕನೂ ದೇವರೊಂದಿಗೆ ಸಂಚರಿಸಿದನು. ಹತ್ತನೆಯ ತಲೆಮಾರಿನವನಾದ ನೋಹನೂ ದೇವರೊಂದಿಗೆ ಸಂಚರಿಸಿದನು. ಇಪ್ಪತ್ತನೇಯ ತಲೆಮಾರಿನವನಾದ ಅಬ್ರಹಾಮನೂ ದೇವರೊಂದಿಗೆ ಸಂಚರಿಸಿ ದೇವರ ಸ್ನೇಹಿತನೆನಿಸಿಕೊಂಡನು. ಈ ತಲೆಮಾರಿನಲ್ಲಿ ಹುಟ್ಟಿರುವ ನಿಮ್ಮಗಳೊಂದಿಗೂ, ಕರ್ತನು ಸಂಚರಿಸಲು ಬಯಸುವನು.

ಸಂಚರಿಸುವದು ಎಂಬ ಪದ ಅನ್ಯೋನ್ಯತೆಯನ್ನು ಸೂಚಿಸುವದು. ದೇವರೊಂದಿಗೆ ಸಂಚರಿಸುವದೆಂದರೆ, ಆತನನ್ನು ಪ್ರೀತಿಸಿ ಆತನ ಆಜ್ಞೆಗಳಿಗೆ ವಿಧೇಯರಾಗಿ, ನೀತಿ, ನ್ಯಾಯಗಳನ್ನು ಅನುಸರಿಸುವದೇ ಆಗಿದೆ. ಇದುವೇ ದೇವರೊಂದಿಗಿನ ಅನ್ಯೋನ್ಯತೆ. ಆತನೊಂದಿಗಿನ ಸಂಚಾರ. ಕೆಲವರು ದೇವರೊಂದಿಗೆ ನಡೆಯಲು, ಕುಟುಂಬ ಜೀವಿತ ತಡೆಯಾಗಿರುವದೆಂದು ಭಾವಿಸಿ ಮನೆಯನ್ನು ತ್ಯಜಿಸಿ ಸನ್ಯಾಸತ್ವವನ್ನು ಸ್ವೀಕರಿಸುವರು. ಆದರೆ, ಕುಟುಂಬ ಎಂಬುದು ಕರ್ತನಿಂದ ಏರ್ಪಡಿಸಲ್ಪಟ್ಟ ವ್ಯವಸ್ಥೆ, "ಮನುಷ್ಯನು ಒಂಟಿಯಾಗಿರುವದು ಸರಿಯಲ್ಲ ಎಂದು, ಕರ್ತನು ನೋಡಿ ಸ್ತ್ರೀಯನ್ನು ಸೃಷ್ಟಿ ಮಾಡಿದನು. ಆದಾಮನಿಗೆ ಹವ್ವಳನ್ನು ಸಹಕಾರಿಣಿಯಾಗಿ ಕೊಟ್ಟನು. ಹನೋಕ, ನೋಹಾ, ಅಬ್ರಹಾಮ, ಕುಟುಂಬ ಹೊಂದಿದವರೇ. ಇವರು ಕುಟುಂಬದಲ್ಲಿ ಜೀವಿಸಿದಾಗ್ಯೂ "ಕರ್ತನಿಗೆ ಪ್ರಿಯವಾದ ಜೀವಿತವನ್ನು ಜೀವಿಸಬಹುದುದೆಂಬುದನ್ನು ಆತನೊಂದಿಗೆ ಅನ್ಯೋನ್ಯತೆ ಉಳ್ಳವರಾಗಿ ಜೀವಿಸಬಹುದೆಂಬುದನ್ನು ನಿರೂಪಿಸಿದರು.

ನೋಹನು ಕುಟುಂಬದಲ್ಲಿ ಜೀವಿಸಿದ್ದು ಮಾತ್ರವಲ್ಲ ದೇವರೊಂದಿಗೆ ನಡೆದನು. ಇನ್ನೊಂದೆಡೆ ನಾವೆಯನ್ನು ಕಟ್ಟಿದನು ಅವನು ಸ್ನಾನಿಕನಾದ ಯೋಹಾನನಂತೆ ಸಮಾಜವನ್ನು ಬಿಟ್ಟು ಓಡಿ "ಅರಣ್ಯದಲ್ಲಿ ಕೂಗುವವನ ಶಬ್ದವಾಗಿ" ಇರಲಿಲ್ಲ. ಜನರ ಮಧ್ಯದಲ್ಲಿ ಬದುಕಿ ಜನಗಳೊಂದಿಗೆ ಉಂಡು ಮಲಗಿದರೂ, ಪರಿಶುದ್ಧನಾಗಿಯೂ ದೇವರಿಗೆ ಮೆಚ್ಚಿಕೆಯಾದವನಾಗಿಯೂ ದೇವರೊಂದಿಗೆ ನಡೆಯುವವನಾಗಿಯೂ, ಇತರರಿಗೆ ಮಾದರಿಯಾಗಿ ಕಾಣಲ್ಪಟ್ಟನು.

ದೇವಮಕ್ಕಳೇ, ತಾವರೆ ನೀರಿನಲ್ಲಿದ್ದರೂ, ಅದರ ಎಲೆಯ ಮೇಲೆ ನೀರು ನಿಲ್ಲಲು ಬಿಡುವದಿಲ್ಲ ಮೀನು ಸಮುದ್ರದಲ್ಲಿ ಜೀವಿಸಿದರೂ, ನೀರಿನ ಉಪ್ಪು ತನ್ನ ಶರೀರವನ್ನು ಪ್ರವೇಶಿಸಲು ಅವಕಾಶ ಮಾಡಿಕೊಡುವದಿಲ್ಲ. ಹಾಗೆಯೇ, ನೀವೂ ಈ ಪ್ರಪಂಚವೆಂಬ ಸಾಗರದಲ್ಲಿ ಜೀವಿಸುತ್ತಿರುವಾಗಲೂ, ಪ್ರಪಂಚದಲ್ಲಿರುವ ಲೌಕೀಕ ಭೋಗಗಳು ಇಚ್ಛೆಗಳು ಸೈತಾನನ ದುಷ್ಪ್ರೇರಣೆಗಳು, ನಿಮ್ಮ ಆತ್ಮವನ್ನು ಕೆಡಿಸದಂತೆ ಜಾಗ್ರತೆಯಿಂದ ನಡೆದು ಕರ್ತನೊಂದಿಗೆ ಸಂಚರಿಸಿರಿ.

**ನೆನಪಿಗೆ : 'ಅವನ ಸಂತಾನವು ಲೋಕದಲ್ಲಿ ಬಲಿಷ್ಠವಾಗುವದು; ನೀತಿವಂತನ ವಂಶವು ಶುಭಹೊಂದುವದು. ಅವನ ಮನೆಯಲ್ಲಿ ಧನೈಶ್ವರ್ಯಗಳಿರುವವು; ಅವನ ನೀತಿಯು ಸದಾಕಾಲವೂ ಫಲಿಸುತ್ತಿರುವದು' (ಕೀರ್ತ 112:2,3).**

ಏಪ್ರಿಲ್
09

# ತುರಾಯಿ ಮರ!

ಬೆಳಿಗ್ಗೆ: 1ಸಮು 13,14
ಸಂಜೆ: ಲೂಕ 10:1–24

**'ನೀನು ತುರಾಯಿ ಮರದಿಂದ ನಾವೆಯನ್ನು ಮಾಡಿಕೋ; ಅದರಲ್ಲಿ ತುಂಬ ಕೋಣೆಗಳು ಇರಬೇಕು; ಒಳಕ್ಕೂ ಹೊರಕ್ಕೂ ರಾಳವನ್ನು ಹಚ್ಚು' (ಆದಿ 6:14).**

ಕರ್ತನು ನೋಹನ ಬಳಿ ನಾವೆಯನ್ನು ಕಟ್ಟಲು ಹೇಳಿದಾಗ, ಅದನ್ನು ತುರಾಯಿ ಮರದಿಂದ ಕಟ್ಟುವಂತೆ ಹೇಳಿದನು. ಮಂಜೂಷದ ಪೆಟ್ಟಿಗೆಯನ್ನು ನಿರ್ಮಿಸುವಂತೆ ಮೋಶೆಯ ಬಳಿ ಹೇಳಿದಾಗ, ಅದನ್ನು ಜಾಲಿಮರದಿಂದ ನಿರ್ಮಿಸುವಂತೆ ಆಜ್ಞಾಪಿಸಿದನು. ದೇವಾಲಯವನ್ನು ಕಟ್ಟುವಂತೆ ಸೊಲೊಮೋನನ ಬಳಿ ಹೇಳಿದಾಗ, ಕರ್ತನ ಪ್ರೇರಣೆಯಂತೆ, ಅವನು ದೇವದಾರು ಮರದ ಹಲಿಗೆಗಳನ್ನು ಗೋಡೆಗೆ ಹೊದಿಸಿದನು. ಯೇಸುಕ್ರಿಸ್ತನು ಮರಣಹೊಂದಿದ ಶಿಲುಬೆ, ಯಾವ ಮರದಿಂದ ಮಾಡಿದ್ದು? ಎಂದು ಯಾರಿಗೂ ಗೊತ್ತಿಲ್ಲ. ಕೆಲವು ಕಾರ್ಯಗಳನ್ನು ಕರ್ತನು ಪ್ರಕಟಿಸುವನು ಕೆಲವನ್ನು ರಹಸ್ಯವಾಗಿಯೇ ಇಡುವನು (ಧರ್ಮೋ 29:29).

ಕರ್ತನು ಏನು ಹೇಳಿದರೂ,ಹಾಗೆಯೇ ವಿಧೇಯತೆಯಿಂದ ನಡೆದುಕೊಳ್ಳ ಬೇಕಾದದ್ದು ಅಗತ್ಯವಾದದ್ದು "ಯಾಕೆ ದೇವರೇ, ನಾನು ಮಾವಿನ ಮರದ ಹಲಗೆಗಳನ್ನು ಇಲ್ಲವೇ ಬೇವಿನ ಮರದಿಂದ ನಾವೆಯನ್ನು ಕಟ್ಟಿದರೆ ಏನಾಗುವದು? ಎಂದು ಕರ್ತನಿಗೆ ಆಲೋಚನೆ ನೀಡಬಾರದು. ನೋಹನು ಕರ್ತನ ಆಜ್ಞೆಯಂತೆಯೇ ನಾವೆಯನ್ನು ಕಟ್ಟಿ ಮುಗಿಸಿದಾಗ ಕರ್ತನು ಆಕಾಶದ ತೂಬುಗಳನ್ನು ತೆರೆದನು. ಮಳೆಸುರಿಯಿತು (ಆದಿ 7:11). ಮೋಶೆ ಕರ್ತನ ಮಾತಿನಂತೆಯೇ ದೇವ ದರ್ಶನ ಗುಡಾರವನ್ನು ನಿರ್ಮಿಸಿದಾಗ, "ಮೇಘವು ದೇವದರ್ಶನದ ಗುಡಾರದ ಮೇಲೆ ನೆಲೆಸಿತು, ಯೆಹೋವನ ತೇಜಸ್ಸು ಗುಡಾರದೊಳಗೆ ತುಂಬಿತು (ವಿಮೋ 40:34). ಕರ್ತನು ಆಜ್ಞಾಪಿಸಿದ ರೀತಿಯಲ್ಲಿಯೇ, ಸೊಲೊಮೋನನು ದೇವಾಲಯವನ್ನು ನಿರ್ಮಿಸಿದಾಗ, "ಕರ್ತನ ತೇಜಸ್ಸು ಆಲಯವನ್ನು ತುಂಬಿತು" (1ಅರ 8:11). ಆದುದರಿಂದ ಕರ್ತನು ನಿಮಗೆ ಏನು ಹೇಳಿದರೂ ಅದಕ್ಕೆ ನೂರಕ್ಕೆ ನೂರರಷ್ಟು ವಿಧೇಯರಾಗಿರಿ. ಆಗ ನಿಮ್ಮ ಶರೀರವೆಂಬ ಆಲಯವನ್ನು, ದೇವಮಹಿಮೆ ನಿಶ್ಚಯವಾಗಿ ತುಂಬುವದು. ನಾವೆಯನ್ನು ತುರಾಯಿ ಮರದಿಂದ ಮಾಡುವಂತೆ ಕರ್ತನು ಹೇಳಿದ್ದು ಮಾತ್ರವಲ್ಲ, ಅದರ ಒಳಗಿನ ಹೊರಗಿನ ಭಾಗಕ್ಕು ರಾಳವನ್ನು ಹಚ್ಚಬೇಕೆಂದು ಆಜ್ಞಾಪಿಸಿದನು. "ರಾಳ"ವೆಂಬುದು ಕ್ರಿಸ್ತನ ರಕ್ತಕ್ಕೆ ಗುರುತಾಗಿದೆ. ಒಬ್ಬ ಮನುಷ್ಯನ ಬಹಿರಂಗ ಜೀವಿತ ಮಾತ್ರವಲ್ಲ ಅಂತರಂಗ ಜೀವಿತವೂ ಕ್ರಿಸ್ತನ ರಕ್ತ ಹಚ್ಚಲ್ಪಟ್ಟಿರಬೇಕು. ತುರಾಯಿ ಮರದಿಂದ ಕಟ್ಟಿದ ನಾವೆ ನೀರಿನಿಂದ ಹಾಳಾಗದಂತೆ ರಾಳವು ಕಾಪಾಡಿದ ರೀತಿಯಲ್ಲಿ. ಕ್ರಿಸ್ತನ ರಕ್ತ ಈ ಪ್ರಪಂಚದ ಹೊಲಸಿನಿಂದ ಮನುಷ್ಯನನ್ನು ರಕ್ಷಿಸುವದು.

ದೇವಮಕ್ಕಳೇ, ನಾಶನಕ್ಕೆ ನೇರವಾಗಿ ಹೋಗುತ್ತಿರುವ ಲೋಕ ಈ ಕಾಲದಲ್ಲಿ ಕ್ರಿಸ್ತನೆಂಬ ನಾವೆ ನಿಮ್ಮನ್ನು ಪ್ರೀತಿಯಿಂದ ಕರೆಯುತ್ತಿರುವದು. ಕ್ರಿಸ್ತನೇ ಮಾರ್ಗವೂ ಬಾಗಿಲೂ ಆಗಿರುವನು.

**ನೆನಪಿಗೆ : 'ಇಸ್ರಾಯೇಲ್ಯರಿಗೆ ಕೊಟ್ಟ ವಿಧಿ ನ್ಯಾಯಗಳನ್ನು ನೀನು ಕೈಕೊಳ್ಳುವದಾದರೆ ಸಫಲನಾಗುವಿ' (1ಪೂ.ವೃ 22:13).**

# ನಾವೆಯ ಬಾಗಿಲು!



**'ಅದರ ಚಾವಣಿಯ ಕೆಳಗೆ ಸುತ್ತಲೂ ಒಂದು ಮೊಳ ಎತ್ತರದ ಬೆಳಕು ಕಂಡಿಯನ್ನು ಮಾಡಬೇಕು; ಪಕ್ಕದಲ್ಲಿ ಬಾಗಲನ್ನಿಡಬೇಕು. ನಾವೆಯಲ್ಲಿ ಒಂದರ ಮೇಲೆ ಒಂದಾಗಿ ಮೂರು ಅಂತಸ್ತುಗಳನ್ನು ಮಾಡಬೇಕು' (ಆದಿ 6:16).**

ನೋಹನ ನಾವೆಯಲ್ಲಿ ಮೂರು ಅಂತಸ್ತುಗಳಿದ್ದವು. ಈ ಮೂರು ಅಂತಸ್ತು ಮನುಷ್ಯನ ಆತ್ಮ, ಪ್ರಾಣ, ಶರೀರಗಳಿಗೆ ಗುರುತಾಗಿರುವದು. ಅದೇ ವೇಳೆ, ಅದು ನಮ್ಮನ್ನು ಕಾಯವ ಕರ್ತನ ತ್ರಯೇಕತ್ವಕ್ಕೂ ಗುರುತಾಗಿರುವದು. ಆತನು ತಂದೆಯಾದ ದೇವರಾಗಿಯೂ, ಕುಮಾರನಾದ ದೇವರಾಗಿಯೂ, ಪವಿತ್ರಾತ್ಮನಾದ ದೇವರಾಗಿಯೂ, ಪವಿತ್ರಾತ್ಮನಾದ ದೇವರಾಗಿಯೂ ಇರುವನು.

ನಾವೆಯ ಕೆಳಭಾಗದಲ್ಲಿ ಒಂದು ಬಾಗಿಲು ಇತ್ತು. ನಮಗಾಗಿ ಪರಲೋಕವನ್ನು ತ್ಯಜಿಸಿ, ಈ ಭೂಮಿಗೆ ಇಳಿದು ಬಂದ ಕ್ರಿಸ್ತನೇ ಆ ಬಾಗಿಲಾಗಿರುವನು. ಯೇಸುಕ್ರಿಸ್ತನು "ನಾನೇ ಆ ಬಾಗಿಲು; ನನ್ನ ಮುಖಾಂತರವಾಗಿ ಯಾವನಾದರೂ ಒಳಗೆ ಹೋದರೆ ಸುರಕ್ಷಿತವಾಗಿದ್ದು ಒಳಗೆ ಹೋಗುವನು, ಹೊರಗೆ ಬರುವನು, ಮೇವನ್ನು ಕಂಡುಕೊಳ್ಳುವನು" (ಯೋಹಾ 10:9) ಎಂದು ಹೇಳುವನು. ಆತನು ಬಾಗಿಲು ಮಾತ್ರವಲ್ಲ, ಮಾರ್ಗವಾಗಿಯೂ ಇರುವನು. "ನಾನೇ ಮಾರ್ಗವೂ ಸತ್ಯವೂ, ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" (ಯೋಹಾ 14:6) ಎಂದೂ ಆತನು ಹೇಳಿರುವನು. ಈ ಪ್ರಪಂಚದಲ್ಲಿ ಅನೇಕ ಮತಗಳು, ಮಾರ್ಗಗಳು ಇರಬಹುದು. ತತ್ವಜ್ಞಾನಿಗಳಾಗಿರಬಹುದು. ಆದರೆ ಕ್ರಿಸ್ತನೊಬ್ಬನೇ ಪರಲೋಕಕ್ಕೆ ಏಣಿಯಾಗಿರುವನು.

ನೋಹನ ನಾವೆಯ ಮೂರನೆಯ ಅಂತಸ್ತಿನಲ್ಲಿ ಒಂದು ಕಿಟಕಿ ಇತ್ತು. ಆ ಕಿಟಕಿ ನಾವೆಗೆ ಬೆಳಕನ್ನು ಗಾಳಿಯನ್ನೂ ಒದಗಿಸುತ್ತಿತ್ತು. ಆ ಕಿಟಕಿ, ದೇವರೊಂದಿಗೆ ಸಂಭಾಷಿಸಿ ಅನ್ಯೋನ್ಯತೆಯನ್ನು ಪಡೆಯುವ, ಪ್ರಾರ್ಥನೆಗೆ ಗುರುತಾಗಿರುವದು. ನಮ್ಮೊಬ್ಬೊಬ್ಬರಿಗೂ, ದೇವರೊಂದಿಗೆ ಪ್ರೀತಿ, ಅನ್ಯೋನ್ಯತೆ ಅಗತ್ಯ. ಪ್ರಾರ್ಥನಾ ಜೀವಿತ ಒಂದೇ ಆ ಒಂದು ಅನ್ಯೋನ್ಯತೆಯನ್ನು ನಮಗೆ ನೀಡುವಂಥದ್ದು. ಪ್ರಾರ್ಥನಾ ವೇಳೆಯಲ್ಲಿ ನಾವು ಕರ್ತನೊಂದಿಗೆ ಸಂಭಾಷಿಸುವೆವು ಆತನು ನಮ್ಮೊಂದಿಗೆ ಸಂಭಾಷಿಸುವನು.

ದೇವಮಕ್ಕಳೇ, ನಿಮಗೆ ಸಹಾಯ ಬರುವ ಪರ್ವತವಾಗಿರುವ ಕಲ್ವಾರಿಗೆ ನೇರವಾಗಿ ನಿಮ್ಮ ಆಂತರ್ಯವನ್ನು ತೆರೆದಿಡಿರಿ. ಪರಲೋಕಕ್ಕೆ ನೇರವಾಗಿ ತೆರೆದಿಡಿರಿ. ಆಗ ಭೂಮ್ಯಾಕಾಶಗಳನ್ನು ಉಂಟು ಮಾಡಿದ ಕರ್ತನ ಬಳಿಯಿಂದ ನಿಮಗೆ ಸಹಾಯ ಒದಗುವದು (ಕೀರ್ತ 121:2).

**ನೆನಪಿಗೆ : 'ದಾನಿಯೇಲನಿಗೆ ತಿಳಿದಾಗ ಅವನು ತನ್ನ ಮನೆಗೆ ಹೋಗಿ ಯೆರೂಸಲೇಮಿನ ಕಡೆಗೆ ಕದವಿಲ್ಲದ ಕಿಟಕಿಗಳುಳ್ಳ ತನ್ನ ಮಹಡಿಯ ಕೋಣೆಯಲ್ಲಿ.... ದೇವರಿಗೆ ಪ್ರಾರ್ಥನೆಮಾಡಿ ಸ್ತೋತ್ರಸಲ್ಲಿಸಿದನು' (ದಾನಿ 6:10).**

# ದೊಡ್ಡ ನಂಬಿಕೆ!

ಬೆಳಿಗ್ಗೆ: 1ಸಮು 17,18
ಸಂಜೆ: ಲೂಕ 11:1–28

**'ನಿನಗೂ ಅವುಗಳಿಗೂ ಪೋಷಣೆಯಾಗುವಂತೆ ಸಕಲವಿಧವಾದ ಆಹಾರ ಪದಾರ್ಥಗಳನ್ನು ನಿನ್ನ ಬಳಿಯಲ್ಲಿ ಕೂಡಿಸಿಡಬೇಕು ಎಂದು ಹೇಳಿದನು' (ಆದಿ 6:21).**

ನೋಹನಿಗೆ ಕರ್ತನ ದಯೆ ದೊರಕಿದ್ದರಿಂದ, ಅವನನ್ನೂ ಅವನ ಕುಟುಂಬವನ್ನೂ, ಕಾಪಾಡಲು ನಾವೆಯನ್ನು ಕಟ್ಟುವಂತೆ, ಕರ್ತನು ಹೇಳಿದನು. ಯಾವ ಒಬ್ಬ ಮನುಷ್ಯನು ತನಗೆ ಸಹಾಯ ಒದಗಿಸುವ ಪರ್ವತವಾದ ಕ್ರಿಸ್ತನನ್ನು ಬಿಟ್ಟು ಬಿಟ್ಟು, ಪ್ರಪಂಚದ ಮನುಷ್ಯರನ್ನು, ಅಧಿಕಾರಗಳನ್ನೂ ನಂಬಿಹೋಗುವರೋ, ಅವನಿಗೆ ದಯೆಗೆ ಬದಲಾಗಿ ಅವಮಾನವೇ ದೊರಕುವದು.

ಅಂದು ನೋಹನಿಗೆ, ಮಾತ್ರವಲ್ಲ, ಮೃಗ ಜೀವಿಗಳಿಗೂ, ಪಕ್ಷಿಗಳಿಗೂ, ಸಹಾ ಕೃಪೆ ದೊರೆಯಿತು. ಇದರಿಂದ ಅವುಗಳಿಗೂ, ನಾವೆಯಲ್ಲಿ ಸ್ಥಳ ದೊರೆಯಿತು. ಆಹಾರವೂ ದೊರಕಿತು (ಆದಿ 6:21). ಹೌದು, ಪ್ರತಿಯೊಂದು ಜೀವರಾಶಿಯೂ, ರಕ್ಷಿಸಲ್ಪಡಬೇಕು ಎಂಬ ಭಾರವನ್ನು ಕರ್ತನು ನೋಹನೊಳಗೆ ಇಟ್ಟನು. ಆತ್ಮಗಳನ್ನು ರಕ್ಷಿಸಲ್ಪಡಬೇಕೆಂಬ ಭಾರ, ಪ್ರತಿಯೊಬ್ಬ ವಿಶ್ವಾಸಿಗೂ ಇರುವದಾದರೆ, ಎಷ್ಟು ಒಳ್ಳೆಯದು! ಈ ಭಾರವಿರುವಾಗ, ಜನರಿಗಾಗಿ, ಪರಿತಪಿಸಿ, ಬೇಡುವೆವಲ್ಲವೆ? ನೋಹನು ಮೃಗ ಪಕ್ಷಿಗಳಿಗಾಗಿ, ಆಹಾರವನ್ನು ಕೂಡಿಸಿಟ್ಟನು. ಹಾಗೆಯೇ ಆತ್ಮಗಳಿಗೆ ದೇವರ ವಾಕ್ಯವೆಂಬ ಆಹಾರವನ್ನೂ ಜೀವಜಲವನ್ನೂ ನೀಡಬೇಕಾದದ್ದು ನಿಮ್ಮ ಕರ್ತವ್ಯವಲ್ಲವೇ? ಇಸ್ರಾಯೇಲ್ಯರನ್ನು ಕರ್ತನು ಅರಣ್ಯದಲ್ಲಿ ನಡೆಸಿಕೊಂಡು ಬಂದಾಗ, ಸುಮಾರು ಇಪ್ಪತ್ತು ಲಕ್ಷ ಇಸ್ರಾಯೇಲ್ಯರಿಗೆ, ಅನುದಿನವೂ ಆಹಾರವನ್ನು ನೀಡಿದನು. ಸಾಧಾರಣವಾದ ಆಹಾರವಲ್ಲ, ದೇವದೂತರ ಆಹಾರ ಅವರಿಗೆ ಅದು ಘೇಂಡಾಮೃಗಕ್ಕೆ ಇದ್ದಂಥ ಬಲವನ್ನು ತಂದಿತು.

ನೋಹನು ದೊಡ್ಡ ಶ್ರೀಮಂತನಾಗಿದ್ದನೆಂದು, ಸತ್ಯವೇದದಲ್ಲಿ ಎಲ್ಲಿಯೂ ನಾವು ನೋಡುವದಿಲ್ಲ. ಅಬ್ರಹಾಮನಂತೆಯೋ ಇಲ್ಲವೇ ಯೋಬನಂತೆಯೋ, ದನಕುರಿಗಳಾಗಲಿ, ಆಸ್ತಿಯಾಗಲಿ ನೋಹನ ಬಳಿ ಇರಲಿಲ್ಲ. ಆದರೂ ಕರ್ತನ ಮಾತುಗಳಿಗೆ ವಿಧೇಯನಾಗಿ ಪ್ರತಿಯೊಂದು ಮೃಗಜೀವಿಗಳಿಗೆ, ಪಕ್ಷಿಸಂಕುಲಗಳಿಗಾಗಿ ಆಹಾರ ಪದಾರ್ಥಗಳನ್ನು ಶೇಖರಿಸಿದನು. ನೀತಿವಂತನು ನಂಬಿಕೆಯಿಂದಲೇ ಬದುಕುವನು ಎಂಬ ನಂಬಿಕೆಯನ್ನು ಕಾರ್ಯರೂಪಕ್ಕೆ ತಂದ ಮೊದಲ ವ್ಯಕ್ತಿಯೆನಿಸಿಕೊಂಡನು.

ದೇವಮಕ್ಕಳೇ, ನಿಮ್ಮ ಆತ್ಮೀಕ ಅಗತ್ಯತೆಗಳಿಗಾಗಿಯೂ, ಲೌಕೀಕವಾದ ಅಗತ್ಯತೆಗಳಿಗಾಗಿಯೂ, ನಿಮ್ಮಲ್ಲಿ ನಂಬಿಕೆ ಇರಬೇಕು. "ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯವಾದ ಕಾರ್ಯ " (ಇಬ್ರಿ 11:6).

**ನೆನಪಿಗೆ : 'ನಂಬಿಕೆಯಿಂದಲೇ ನೋಹನು ಅದುವರೆಗೆ ಕಾಣದಿದ್ದ ಸಂಗತಿಗಳ ವಿಷಯವಾಗಿ ದೈವೋಕ್ತಿಯನ್ನು ಹೊಂದಿ ಭಯಭಕ್ತಿಯುಳ್ಳವನಾಗಿ ತನ್ನ ಮನೆಯವರ ಸಂರಕ್ಷಣೆಗೋಸ್ಕರ ನಾವೆಯನ್ನು ಕಟ್ಟಿ ಸಿದ್ಧ ಮಾಡಿದನು' (ಇಬ್ರಿ 11:7).**

ಏಪ್ರಿಲ್
12

# ನೀತಿವಂತನಾದ ನೋಹ!

ಬೆಳಿಗ್ಗೆ: 1ಸಮು 19,20,21
ಸಂಜೆ: ಲೂಕ 11:29-54

**'ಆಗ ಯೆಹೋವನು ನೋಹನಿಗೆ – ನೀನೂ ನಿನ್ನ ಮನೆಯವರೆಲ್ಲರೂ ನಾವೆಯಲ್ಲಿ ಸೇರಿರಿ; ಈಗಿನವರಲ್ಲಿ ನೀನೊಬ್ಬನೇ ನನ್ನ ಮುಂದೆ ನೀತಿವಂತನಾಗಿ ನಡೆಯುವದನ್ನು ನೋಡಿದ್ದೇನೆ' (ಆದಿ 7:1).**

ಅನೇಕ ನೀತಿವಂತರನ್ನು ಕುರಿತು ನೀವು ಸತ್ಯವೇದದಲ್ಲಿ ಓದಬಹುದು. ಆದರೆ ಹಳೆಯ ಒಡಂಬಡಿಕೆಯಲ್ಲಿ ಐದು ಜನರನ್ನು, ಹೊಸ ಒಡಂಬಡಿಕೆಯಲ್ಲಿ ಐದು ಜನರನ್ನು ಪರಲೋಕ ನಮಗೆ ತೋರಿಸಿ, ಅವರನ್ನು ನೀತಿವಂತರೆಂದು ಹೇಳುವದು. ಮಾತ್ರವಲ್ಲ, ನೀತಿವಂತರಿಗೆ ದೊರಕುವ ಎಪ್ಪತ್ತೊಂದು ಆಶೀರ್ವಾದಗಳನ್ನು, ಜ್ಞಾನೋಕ್ತಿಗಳಲ್ಲೂ, ಪ್ರಸಂಗಿಯಲ್ಲೂ ಓದಿ ತಿಳಿಯಬಹುದು.

ನೀತಿ ನ್ಯಾಯಗಳನ್ನು ಅನುಸರಿಸಿ, ಮನಸ್ಸಾಕ್ಷಿಯನ್ನು ಕಾಯುಕೊಳ್ಳುವವರೇ, ನೀತಿವಂತರು. ನಮ್ಮ ದೇವರು ಸರ್ವಲೋಕ ನ್ಯಾಯಾಧಿಪತಿ (ಆದಿ 18:25). ಈ ಪ್ರಪಂಚದಲ್ಲಿ ಉತ್ತಮರಿರುವರು, ಸನ್ಮಾರ್ಗಿಗಳಿರುವರು. ಪ್ರಪಂಚದ ದೃಷ್ಟಿಯಲ್ಲಿ ಒಳ್ಳೆಯವರು ಇರುವರು. ಆದರೆ ನೀತಿವಂತನು ಎಂಬ ಮಾತು ಬಹಳ ಗಂಭೀರವಾದದ್ದು, ಆಳವಾದ ಅರ್ಥದಿಂದ ಕೂಡಿದ್ದಾಗಿರುವದು. ಹಲವು ನೀತಿವಾಕ್ಯಗಳನ್ನೂ, ಜ್ಞಾನೋಪದೇಶಗಳನ್ನು ಸೊಲೊಮೋನನು ಬರೆದಿದ್ದಾಗ್ಯೂ ಕರ್ತನು ಅವನನ್ನು ನೀತಿವಂತನೆಂದು ಕರೆಯಲಿಲ್ಲ. ಅನೇಕ ಸ್ತ್ರೀಯರು ಅವನನ್ನು ಕರ್ತನಿಂದ ಅಗಲಿಸಿದರು. ಯಾವ ಕೈಗಳು ಕರ್ತನಿಗೆಂದು ದೇವಾಲಯವನ್ನು ನಿರ್ಮಿಸಿದವೋ, ಅದೇ ಕೈಗಳು ಅನ್ಯದೇವರುಗಳಿಗೆ ಯಜ್ಞಪೀಠವನ್ನು ಕಟ್ಟಿ ಎಬ್ಬಿಸಿದವು.

ಒಂದು ಪಟ್ಟಣವೋ, ದೇಶವೋ, ನಾಶವಾಗುವದು, ನಾಶವಾಗದೇ ಇರುವದು. ಅಲ್ಲಿರುವ ನೀತಿವಂತರ ಕೈಗಳಲ್ಲಿರುವದು. ಸೊದೋಮ್ ಪಟ್ಟಣವನ್ನು ನಾಶಮಾಡಲು ಬಂದ ಕರ್ತನು, ಅಬ್ರಹಾಮನನ್ನು ನೋಡಿ "ಅಲ್ಲಿ ಐವತ್ತು ಮಂದಿ ನೀತಿವಂತರಿರುವದಾದರೆ, ಆ ಪಟ್ಟಣ ನಾಶನದಿಂದ ತಪ್ಪಿಸಿಕೊಳ್ಳುವದೆಂದು ಹೇಳಿದನು. ಒಬ್ಬನೇ ಇರುವದಾದರೆ, ಅವನನ್ನು ತಪ್ಪಿಸಿ ರಕ್ಷಿಸುವನು ಅದರಂತೆಯೇ ಆ ಪಟ್ಟಣದಲ್ಲಿ ಇದ್ದ ಒಬ್ಬನೇ ನೀತಿವಂತನಾಗಿದ್ದ ಲೋಟನನ್ನು, ಅವನ ಕುಟುಂಬದವರನ್ನು ಕರ್ತನು ಊರಿಂದ ಹೊರಕ್ಕೆ ಕರತಂದು ಪಟ್ಟಣವನ್ನು ಬೆಂಕಿ ಗಂಧಕಗಳನ್ನು ಆಕಾಶದಿಂದಸುರಿಸಿ ನಾಶ ಮಾಡಿದನು. ಆದರೆ ನೋಹನ ಕಾಲದಲ್ಲಿ ಇಡೀ ಪ್ರಪಂಚದಲ್ಲಿ ಹತ್ತು ಮಂದಿ ನೀತಿವಂತರೂ ಇರಲಿಲ್ಲ ನೋಹನೊಬ್ಬನು ಮಾತ್ರ ನೀತಿವಂತನಾಗಿದ್ದನು. ಅವನ ನಿಮಿತ್ತ ಅವನ ಕುಟುಂಬದವರೆಲ್ಲರಿಗೂ ಕರ್ತನ ದಯೆ ದೊರಕಿತು.

ದೇವಮಕ್ಕಳೇ, ನೀವು ನೀತಿವಂತರಾಗಿ ಜೀವಿಸಿದರೆ ಮಾತ್ರ, ನೀತಿವಂತರಾಗಿ ಮರಣ ಹೊಂದಲು ಸಾಧ್ಯ. ಅಕ್ರಮ, ಸುಳ್ಳು, ಮೋಸ, ಮುಂತಾದ ಪಾಪಗಳಲ್ಲಿ ಜೀವಿಸಿ ಹೇಗೆ ನೀತಿವಂತರಾಗಿ ಸಾಯಲು ಪರಲೋಕ ಸೇರಲು ಸಾಧ್ಯ.

**ನೆನಪಿಗೆ : 'ಕೆಟ್ಟದ್ದಕ್ಕೆ ಹೋಗದೆ ಒಳ್ಳೆಯದನ್ನೇ ಮಾಡು; ಆಗ ನೀನು ಯಾವಾಗಲೂ [ದೇಶದಲ್ಲಿ] ವಾಸವಾಗಿರುವಿ' (ಕೀರ್ತ 37:27).**

## ಆಕಾಶದ ದ್ವಾರಗಳು!

ಬೆಳಿಗ್ಗೆ: 1ಸಮು 22,23,24
ಸಂಜೆ: ಲೂಕ 12:1–34

**'ಭೂಮಿಯ ಕೆಳಗಿರುವ ಸಾಗರದ ಸೆಲೆಗಳು ಒಡೆದವು; ಆಕಾಶದ ತೂಬುಗಳು ತೆರೆದವು' (ಆದಿ 7:11).**

ನದಿಗಳ, ಕೆರೆಗಳ ನೀರು ವ್ಯರ್ಥವಾಗಬಾರದಂತೆ. ಅಣೆಕಟ್ಟುಗಳನ್ನು ಕಟ್ಟುತ್ತೇವೆ ನಂತರ ಅಣೆಕಟ್ಟಿನ ತೂಬುಗಳನ್ನು ತೆರೆದು ನೀರನ್ನು ಹೊಲಗದ್ದೆಗಳಿಗೆ ಹಾಯಿಸುತ್ತಾರೆ. ಅದೇ ರೀತಿ ಆಕಾಶಕ್ಕೂ ದ್ವಾರಗಳಿರುವವು. "ಆಕಾಶದ ದ್ವಾರಗಳನ್ನು ತೆರೆದು, ಸ್ಥಳ ಹಿಡಿಸಲಾರದಷ್ಟು ನಿಮ್ಮ ಮೇಲೆ ಆಶೀರ್ವಾದದ ಮಳೆ ಸುರಿಸುವೆನು" ಎಂದು ವಾಗ್ದಾನ ಮಾಡಿದ ದೇವರು, ಆಕಾಶದ ದ್ವಾರಗಳನ್ನು ತೆರೆಯುವನು.

ನೋಹನ ಕಾಲದಲ್ಲಿ, ಕರ್ತನು ಆಕಾಶದ ದ್ವಾರಗಳನ್ನು ತೆರೆದಾಗ, ನಾಲ್ವತ್ತು ದಿನಗಳು, ರಾತ್ರಿ, ಹಗಲು ಭೂಮಿಯ ಮೇಲೆ ಮಳೆಸುರಿಯಿತು. ಹಾಗೆ ಸುರಿದ ಮಳೆ ನೀರು ಮೊದಲನೆಯದಾಗಿ, ಪಾಪಿಗಳನ್ನು ನಾಶಪಡಿಸಿತು. ಎರಡನೆಯದು, ನಾವೆಯಲ್ಲಿದ್ದ ದೇವಜನರನ್ನು ಮೇಲಕ್ಕೆ ಎತ್ತಿತು. ಇದು ಕ್ರಿಸ್ತನ ಬರುವಿಕೆಯಲ್ಲಿ, ದೇವಜನರು ಯಾವ ರೀತಿಯಲ್ಲಿ ಮೇಲಕ್ಕೆ ಎತ್ತಲ್ಪಡುವರು ಎಂಬುದಕ್ಕೆ ಗುರುತಾಗಿರುವದು. ನೋಹನ ಕಾಲದಲ್ಲಿ, ಆಕಾಶದ ದ್ವಾರಗಳು ತೆರೆಯಲ್ಪಟ್ಟು ದೊಡ್ಡ ಮಳೆ ಹೇಗೆ ಸುರಿಯಿತೋ, ಅದರಂತೆಯೇ ಪವಿತ್ರಾತ್ಮನೆಂಬ ಮಳೆಯನ್ನು ನಾವು ನಿರೀಕ್ಷಿಸುತ್ತಿರುವೆವು. ಪ್ರವಾದಿಯಾವ ಜೆಕರ್ಯನು, "ಮಳೆಯಾಗುವಂತೆ ಹಿಂಗಾರಿನಲ್ಲಿ ಯೆಹೋವನನ್ನು ಬೇಡಿಕೊಳ್ಳಿರಿ" ಎಂದು ಹೇಳುತ್ತಾನೆ (ಜೆಕ 10:1).

"ದೇವರೇ, ಅಭಿಷೇಕದ ಹಿಂಗಾರು ನಮಗೆ ಬೇಕು, ಆಕಾಶದ ದ್ವಾರಗಳನ್ನು ತೆರೆದುಕೊಡು" ಎಂದು ಬೇಡಿಕೊಳ್ಳೋಣ! ಮೊದಲು ಸುರಿದ ಮಳೆಯಿಂದ ಪಾಪಿಗಳು ನಾಶವಾದರು. ಆದರೆ ಅಭಿಷೇಕ ಮಳೆ ಸುರಿಯುವಾಗ, ಪಾಪಗಳು, ಅಕ್ರಮಗಳು ಅಳಿದು ಹೋಗುವವು ದೇವ ಸಮಾಧಾನವೂ, ಕಲ್ವಾರಿ ಪ್ರೀತಿಯೂ ಸುರಿಯಲ್ಪಡುವದು. ದೇವಜನರು ಮೇಲೆ ಮೇಲೆ ಎತ್ತಲ್ಪಡುವರು. ಪರಿಶುದ್ಧರಾಗುವರು, ಪವಿತ್ರಾತ್ಮನೆಂಬ ಮಳೆ ಸುರಿಯುವಾಗ ಸಭೆಯೆಂಬ ನಾವೆ ಮೇಲಕ್ಕೆ ಎತ್ತಲ್ಪಡುವದು.

ಯೇಸು ಎಂಬ ರಕ್ಷಣೆಯ ನಾವೆಯಲ್ಲಿ ಲಕ್ಷಾಂತರ ದೇವಮಕ್ಕಳು, ಕುಳಿತಿರುತ್ತೇವೆ. ಪವಿತ್ರಾತ್ಮನೆಂಬ ಮಳೆಸುರಿದು, ತುತೂರಿ ಶಬ್ದ ಕೇಳಿಸುವಾಗ, ನಾವು ಮೇಲಕ್ಕೆ ಎತ್ತಲ್ಪಡುವೆವು. "ಕರ್ತನು ತಾನೇ ಆಜ್ಞಾಘೋಷದೊಡನೆಯೂ ಪ್ರಧಾನದೂತನ ಶಬ್ದದೊಡನೆಯೂ ದೇವರ ತುತೂರಿಧ್ವನಿಯೊಡನೆಯೂ ಆಕಾಶದಿಂದ ಇಳಿದು ಬರುವನು; ಆ ಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅವರ ಸಂಗಡಲೇ ಮೇಘವಾಹನರಾಗಿ ಪಕ್ಕನೆ ಒಯ್ಯಲ್ಪಡುವೆವು; ಹೀಗಾಗಿ ನಾವು ಸದಾಕಾಲವೂ ಕರ್ತನ ಜೊತೆಯಲ್ಲಿರುವೆವು" (1ಥೆಸ 4:16,17).

**ನೆನಪಪಿಗೆ : 'ಆಗ ಯೆಹೋವನೇ, ನಿನ್ನ ಗದರಿಕೆಯಿಂದಲೂ ನಿನ್ನ ಶ್ವಾಸಭರದಿಂದಲೂ ಸಮುದ್ರದ ತಳವು ಕಾಣಿಸಿತು. ಭೂಮಂಡಲದ ಅಸ್ತಿವಾರಗಳು ತೋರಿಬಂದವು' (ಕೀರ್ತ 18:15).**

# ನೋಹನ ನಾವೆ!



**'ನೋಹನೂ ಶೇಮ್, ಹಾಮ್, ಯೆಫೆತರೆಂಬ ಅವನ ಮಕ್ಕಳೂ ಅವನ ಹೆಂಡತಿಯೂ ಮೂರು ಮಂದಿ ಸೊಸೆಯರೂ ನಾವೆಯಲ್ಲಿ ಸೇರಿದರು' (ಆದಿ 7:13).**

ನೋಹನೂ, ಅವನ ಹೆಂಡತಿಯೂ, ಮೂವರು ಮಕ್ಕಳೂ, ಸೊಸೆಯರೂ ನಾವೆಯೊಳಗೆ ಪ್ರವೇಶಿಸಿದರು. ಆದರೆ ನೀವಾದರೋ ಯೇಸುಕ್ರಿಸ್ತನಲ್ಲಿ ಪ್ರವೇಶಿಸಿರುವಿರಿ. ಆತನ ಕೃಪೆಯೊಳಗೆ ಪ್ರವೇಶಿಸಿರುವಿರಿ. ಕರ್ತನ ಅಪರಿಮಿತವಾದ ಪ್ರೀತಿ ದಯೆ, ಕಾರುಣ್ಯದೊಳಗೆ ಪ್ರವೇಶಿಸಿರುವಿರಿ. ಕ್ರಿಸ್ತನಲ್ಲಿ ಜೀವಿಸುವ ನಿಮ್ಮನ್ನು ಕರ್ತನು ನಿಶ್ಚಯವಾಗಿಯೇ, ಕಣ್ಣು ಗುಡ್ಡೆಯನ್ನು ರೆಪ್ಪೆಯು ಕಾಯುವ ರೀತಿಯಲ್ಲಿ ಕಾಪಾಡಿ ಮೇಲಕ್ಕೆ ಎತ್ತುವನು. ಆತನು ತೂಕಡಿಸದ ನಿದ್ರಿಸದ ದೇವರಾಗಿದ್ದಾನೆ.

ಐಗುಪ್ತದ ಫರೋಹನನ ಕಠೋರವಾದ ಆಜ್ಞೆಗೆ ತನ್ನ ಮಗನನ್ನು ತಪ್ಪಿಸುವಂತೆ, ಮೋಶೆಯ ತಾಯಿ ಜಂಬು ಹುಲ್ಲಿನ ಆಪಿನ ಪೆಟ್ಟಿಗೆಯನ್ನು ಮಾಡಿದಳು. ಅದರಲ್ಲಿ ಮೋಶೆಯೊಬ್ಬನಿಗೆ ಸ್ಥಳವಿತ್ತು. ನೋಹನು ಮಾಡಿದ ನಾವೆಯಲ್ಲಿ, ಅವನಿಗೂ, ಅವನ ಕುಟುಂಬದವರಿಗೂ ಸ್ಥಳವಿತ್ತು. ಇಂದು ನಮ್ಮ ಮುಂದೆ ಒಂದು ನಾವೆ ಇರುವದು. ಅದು "ಯೇಸುಕ್ರಿಸ್ತ"ನೆಂಬ ಜೀವವುಳ್ಳ ನಾವೆ. ಅದರಲ್ಲಿ ಒಬ್ಬನಿಗೆ, ಎಂಟು ಜನರಿಗೆ ಮಾತ್ರವಲ್ಲ, ಆತನ ಹೆಸರಿನಲ್ಲಿ ನಂಬಿಕೆಇಟ್ಟು ಆತನನ್ನು ಅಂಗೀಕರಿಸಿ ಕೊಂಡವರೆಲ್ಲರಿಗೂ ಅಲ್ಲಿ ಸ್ಥಳವಿರುವದು. ಇಂದು ಆ ನಾವೆಯ ಬಾಗಿಲು ತೆರೆದಿರುವದು. ನಿಮ್ಮನ್ನು ಸೇರಿಸಿಕೊಳ್ಳಲು ಕ್ರಿಸ್ತನು ಕಾತರದಿಂದಿರುವನು.

ಅಂದು ನೋಹನ ಕುಟುಂಬದವರು ನಾವೆಯನ್ನು ಪ್ರವೇಶಿಸಿದರು. ಇಂದು ನಿಮ್ಮ ಕುಟುಂಬದವರು ಎಲ್ಲಿರುವರು? ನಾವೆಯೊಳಗೆ ಇರುವರೋ? ಇಲ್ಲವೇ ನಾವೆಯ ಹೊರಗೆ ನಿಂತಿರುವರೋ? ಪರಾತ್ಪರನ ನೆರಳಿನಲ್ಲಿ ತಂಗಿರುವರೋ, ಇಲ್ಲವೇ ಮಾಯೆಯಾದ ಪ್ರಪಂಚದ ಪಾಪಭೋಗಗಳು ನೆರಳಿನಲ್ಲಿ ತಂಗಿರುವರಾ? ಪ್ರಪಂಚದ ಅಂತ್ಯಕಾಲಕ್ಕೆ ಬಂದು ತಲುಪಿದ್ದೇವೆ. ನಾವೆಯಲ್ಲಿ ರಕ್ಷಿಸಲ್ಪಡಬೇಕಾದ ಕಾಲ. ನೀವು ಕುಟುಂಬವಾಗಿ ನಾವೆಯಲ್ಲಿ ಪ್ರವೇಶಿಸ ಬೇಕೆಂದು ಕರ್ತನು ಬಯಸುವನು. ಯಾಕೆಂದರೆ ಅಂದು ಪ್ರಪಂಚವು ಜಲಪ್ರಳಯಕ್ಕೆ ಆಹುತಿಯಾದಂತೆ, ಇಂದು ಅಗ್ನಿಗೆ ಆಹುತಿಯಾಗಲು ಇಡಲ್ಪಟ್ಟಿರುವದು.

ದೇವಮಕ್ಕಳೇ, ಕ್ರಿಸ್ತನೆಂಬ ನಾವೆಯೊಳಗೆ, ನೀವೂ ನಿಮ್ಮ ಕುಟುಂಬದವರು ಇರುವಿರಾ? ಎಂಬುದನ್ನು ಒಂದು ಸಾರಿ ಖಾತರಿಪಡಿಸಿಕೊಳ್ಳಿರಿ. ಆತನೇ ಸತ್ಯವೂ ಜೀವವೂ ಮಾರ್ಗವೂ ಆಗಿದ್ದಾನೆ. ಆತನ ಮೂಲಕವಾಗಿಯೇ ಪರಲೋಕ ರಾಜ್ಯವನ್ನು ಸೇರಲು ಸಾಧ್ಯ. ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ. ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ. ಇಂದೇ ತಿರ್ಮಾನಿಸಿಕೆ ನಿಮ್ಮ ಕುಟುಂಬದ ರಕ್ಷಣೆಗಾಗಿ ಪ್ರಾರ್ಥಿಸಿರಿ. ಆಗ ನೀವು ನಿಮ್ಮ ಕುಟುಂಬವು ಪರಲೋಕದಲ್ಲಿ ಆತನೊಂದಿಗೆ ಇರುವಿರಿ.

**ನೆನಪಿಗೆ : 'ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ; ಆದದರಿಂದ ನೀವು ಜಿತೇಂದ್ರಿಯರಾಗಿಯೂ.....ಸ್ವಸ್ಥಚಿತ್ತರಾಗಿಯೂ ಇರ್ರಿ' (1ಪೇತ್ರ 4:7).**

# ಮೇಲೆ! ಮೇಲೆ!



**'ಜಲಪ್ರಳಯವು ನಾಲ್ವತ್ತು ದಿನ ಭೂಮಿಯ ಮೇಲೆ ಇದ್ದು ನೀರು ಹೆಚ್ಚುತ್ತಾ ನಾವೆಯನ್ನು ಎತ್ತಲು ಅದು ನೀರಿನ ಮೇಲೆ ತೇಲಾಡಿತು' (ಆದಿ 7:17).**

ನೋಹನ ಕಾಲದಲ್ಲಿ, ಪ್ರಾರಂಭದಲ್ಲಿ ತುಂತುರು ತುಂತುರಾಗಿ ಶುರುವಾದ ಮಳೆ, ದಿನಕಳೆದಂತೆಲ್ಲಾ ದೊಡ್ಡ ಮಳೆಯಾಗಿ ಕೊನೆಯಲ್ಲಿ ಜಲಪ್ರಳಯದ ಮಳೆಯಾಗಿ ಮಾರ್ಪಟ್ಟಿತು. ಪ್ರೀತಿಸ್ವರೂಪನಾದ ದೇವರು, ನ್ಯಾಯತೀರ್ಪಿನ ದೇವರಾದನು. ಜನರನ್ನು ಪೂರ್ಣವಾಗಿ ನಾಶಗೊಳಿಸಿದನು.

ನೋಹನ ಕಾಲದ ಮಳೆ, ಮೊದಲನೆಯದಾಗಿ, ಎಲ್ಲಾ ಪಾಪಿಗಳನ್ನು ನಾಶಗೊಳಿಸಿತು. ಎರಡನೆಯದಾಗಿ, ನಾವೆಯನ್ನು ಮೇಲಕ್ಕೆ ಎತ್ತುತ್ತಲೇ ಹೋಯಿತು. ನಾವೆಯು ಕ್ರಿಸ್ತನಿಗೆ ಗುರುತಾಗಿರುವದು. ನೋಹನ ನಾವೆಯೊಳಗೆ ನೀರು ಹೋಗದಂತೆ ಹೊರಗೂ ಒಳಗೂ ರಾಳವು ಹಚ್ಚಲ್ಪಟ್ಟಿತ್ತು. ಇದು ಕ್ರಿಸ್ತನ ರಕ್ತಕ್ಕೆ ಗುರುತಾಗಿರುವದು. ಲೌಕೀಕವಾಗಿಯೂ, ಆತ್ಮೀಕವಾಗಿಯೂ ಪಾಪವು ಆವರಿಸಿಕೊಳ್ಳದ ಜಯದ ಜೀವಿತ ಮಾಡಬೇಕು ಎಂಬುದನ್ನು ಇದು ತೋರಿಸುವದು. ಆ ನಾವೆಯಲ್ಲಿ ನೀವು ಇರುವದಾದರೆ, ಜಲಪ್ರಳಯ ನಿಮ್ಮನ್ನು ಜಯಿಸಲಾರದು. ಯಾವ ಕೇಡೂ ನಿನಗೆ ಸಂಭವಿಸದು ಉಪದ್ರವವು ನಿನ್ನ ಗುಡಾರದ ಸಮೀಪಕ್ಕೂ ಬರಲಾರದು (ಕೀರ್ತ 91:10).

ನಾವೆ ಜಲಪ್ರವಾಹದ ಮೇಲೆ ಸಾಗಿ ಹೋದಾಗ ಈ ಪ್ರಪಂಚದ ಯಾವದೇ ತೊಡಕುಗಳು ಆತಂಕಗಳು, ನೋಹನನ್ನೂ, ಅವನ ಕುಟುಂಬದವರನ್ನೂ ಆವರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅದರಂತೆಯೇ, ನೀವು ಪರಲೋಕದ ದರ್ಶನದಿಂದ ತುಂಬಿ, ಆತ್ಮೀಕ ಜೀವಿತದಲ್ಲಿ ಮುಂದೆ ಸಾಗುವಾಗ, ಪ್ರಾಪಂಚವೂ ಅದರ ಆಶೆ ಇಚ್ಛೆಗಳು, ಎಂದಿಗೂ ನಿಮ್ಮನ್ನು ವಶಪಡಿಸಿಕೊಳ್ಳಲಾಗದು. ಕಾರಣ ನಿಮ್ಮ ಆಶೆಯೆಲ್ಲಾ ಕ್ರಿಸ್ತನ ಮೇಲೆಯೇ ಇರುವದು. ನೋಹನ ಕಾಲದಲ್ಲಿ ಪ್ರಪಂಚಿಕ ರೀತಿಯ ಮಳೆ, ನಾವೆಯನ್ನು ಮೇಲಕ್ಕೆ ಎತ್ತಿತು. ಈಗ ಪವಿತ್ರಾತ್ಮನೆಂಬ ಹಿಂಗಾರು ಮಳೆ, ದೇವ ಜನರನ್ನು ಉನ್ನತಕ್ಕೆ ಎತ್ತುವದು. ಆತ್ಮೀಕ ಜೀವಿತವನ್ನು ವೃದ್ಧಿಗೊಳಿಸುವದು. ನಿಮ್ಮ ಆತ್ಮೀಕ ಜೀವಿತದ ಏಳಿಗೆಗೆ ತಡೆಯಾಗಿರುವವುಗಳೆಲ್ಲವೂ ಮುಳುಗಿ ಹೋಗುವವು.

ದೇವಮಕ್ಕಳೇ, ಕ್ರಿಸ್ತನೆಂಬ ನಾವೆ, ಇಂದು ನಿಮಗಾಗಿ ತೆರೆದಿರುವದು ನಾವೆಗೆ ಒಂದೇ ಒಂದು ಬಾಗಿಲು ಇರುವದು. ಅದು ಒಂದು ಇಕ್ಕಟ್ಟಾದ ಬಾಗಿಲೇ ಹೌದು. ಕೆಲವರು ಮಾತ್ರ ಅದನ್ನು ಕಂಡುಕೊಳ್ಳುವರು (ಮತ್ತಾ 7:14). ಅದು ಪರಿಶುದ್ಧ ಮಾರ್ಗವೆಂದು ಕರೆಯಲ್ಪಡುವದು (ಯೆಶಾ 35:8). ಪ್ರಿಯರೇ, ಯಾವಾಗ ನೀವು ರಕ್ಷಿಸಲ್ಪಟ್ಟಿರೋ ಅಂದು ಕ್ರಿಸ್ತನೆಂಬ ನಾವೆಯೊಳಗೆ ಹತ್ತಿರುವಿರಿ. ಆತ್ಮನ ಅಭಿಷೇಕ ನಿಮ್ಮನ್ನು ಮೇಲಕ್ಕೆ ಒಯ್ಯಲಿ.

**ನೆನಪಿಗೆ : 'ಆದದರಿಂದ ಭೂಮಿಯು ಮಾರ್ಪಟ್ಟರೂ ಬೆಟ್ಟಗಳು ಸಮುದ್ರದಲ್ಲಿ ಮುಣುಗಿಹೋದರೂ ನನಗೇನೂ ಭಯವಿಲ್ಲ' (ಕೀರ್ತ 46:2).**

ಏಪ್ರಿಲ್ 16

# ದೊಡ್ಡ ವ್ಯತ್ಯಾಸ!

ಬೆಳಿಗ್ಗೆ: 1ಸಮು 30,31
ಸಂಜೆ: ಲೂಕ 13:22-35

**'ಮನುಷ್ಯರು ಮೊದಲುಗೊಂಡು ಪಶುಪಕ್ಷಿಕ್ರಿಮಿಗಳವರೆಗೂ ಭೂಮಿಯ ಮೇಲಿದ್ದದ್ದೆಲ್ಲಾ ನಾಶವಾಯಿತು.....ಜೀವಿಗಳೂ ಮಾತ್ರ ಉಳಿದರು' (ಆದಿ 7:23).**

ನಾವೆಯ ಹೊರಗೆ ಇದ್ದ ಎಲ್ಲಾ ಜೀವಿಗಳನ್ನು ಜಲಪ್ರಳಯವು ನಾಶಪಡಿಸಿತು. ಆದರೆ ನಾವೆಯ ಒಳಗೆ ಇದ್ದ ನೋಹ ಹಾಗೂ ಅವನ ಕುಟುಂಬವನ್ನು ನೀರಿನಿಂದ ಮೇಲ ಮೇಲಕ್ಕೆ ಎತ್ತಿತ್ತು. ಅದರಂತೆಯೇ ಕ್ರಿಸ್ತನಲ್ಲಿ ಇರುವವರು ಪ್ರಪಂಚವೆಂಬ ಸಾಗರದಲ್ಲಿ ಮುಳುಗಿ ಹೋಗದೆ ಭದ್ರವಾಗಿರುವರು ಆದರೆ ಕ್ರಿಸ್ತನನ್ನು ಬಿಟ್ಟವರು ತಮ್ಮನ್ನು ಸಂಧಿಸುವ ಶೋಧನೆಗಳಲ್ಲಿ ನಾಶವಾಗಿ ಹೋಗುವರು ಪ್ರೀತಿಯ ದೇವರು, ನ್ಯಾಯ ತೀರ್ಪಿನ ದೇವರಾಗಿ, ಭಕ್ಷಿಸುವ ಅಗ್ನಿಯಾಗಿ ಮಾರ್ಪಡುವನು. ಆದ್ದರಿಂದ ಕ್ರಿಸ್ತನಲ್ಲಿ ನಿಮ್ಮನ್ನು ಮರೆಮಾಡಿಕೊಳ್ಳಿರಿ.

ಸತ್ಯವೇದ ಹೇಳುತ್ತದೆ 'ನೀತಿವಂತನಿಗೆ ಸಂಭವಿಸುವ ಕಷ್ಟಗಳು ಅನೇಕವಿದ್ದರೂ, ಯೆಹೋವನು ಅವೆಲ್ಲವುಗಳಿಂದ ಅವನನ್ನು ಬಿಡಿಸುತ್ತಾನೆ' ಎಂದು (ಕೀರ್ತ 34:19). ಸಮಸ್ಯೆಗಳು ಬರುವಾಗ, ಭಯಪಡದಿರಿ, ಕಳವಳಗೊಳ್ಳದಿರಿ. "ದೇವರೇ, ಕರುಣಿಸು, ನನ್ನನ್ನು ಕರುಣಿಸು. ನೀನೇ ನನ್ನ ಆಶ್ರಯಸ್ಥಾನವಲ್ಲವೇ! ಆಪತ್ತುಗಳು ಕಳೆದು ಹೋಗುವ ತನಕ ನಿನ್ನ ರೆಕ್ಕೆಗಳ ಮರೆಯನ್ನು ಆಶ್ರಯಿಸಿಕೊಳ್ಳುವೆನು' (ಕೀರ್ತ 57:1) ಎಂದು ಪ್ರಾರ್ಥಿಸಿರಿ. ಕರ್ತನ ರೆಕ್ಕೆಗಳಲ್ಲಿ ಯಾವಾಗಲೂ ನಿಮಗೆ ಆಶ್ರಯವಿರುವದು (ಕೀರ್ತ 91:1). ಇಕ್ಕಟ್ಟಾದ ಮಾರ್ಗವನ್ನು ಕಂಡುಕೊಳ್ಳಿರಿ (ಮತ್ತಾ 7:14). ಅದು ಪರಿಶುದ್ಧ ಮಾರ್ಗ ಎಂದು ಕರೆಯಲ್ಪಡುವದು (ಯೆಶಾ 35:8).

ಜಲ ಎಂಬುದು ಉಪದ್ರವಗಳನ್ನು ಕಷ್ಟಗಳನ್ನು ಸೂಚಿಸುವದು. ಕೀರ್ತನೆಗಾರನು ಹೇಳುತ್ತಾನೆ ದೇವರೇ, ರಕ್ಷಿಸು, ಪ್ರಾಣಾಪಾಯವಾಗುವಷ್ಟು ಜಲವು ಏರಿಬಂದದೆ ಆಳವಾದ ಕಳ್ಳುಸುಬಿನಲ್ಲಿ ಮುಳುಗುತ್ತಿದ್ದೇನೆ ನೆಲೆ ಸಿಕ್ಕುವದಿಲ್ಲ ದೊಡ್ಡ ಮಡುವಿನೊಳಕ್ಕೆ ಬಂದಿದ್ದೇನೆ ಪ್ರವಾಹವು ನನ್ನನ್ನು ಬಡಕೊಂಡು ಹೋಗುತ್ತದೆ. ಎಂದು (ಕೀರ್ತ 69:1,2). ಆದರೆ ಕರ್ತನು ಹೀಗೆ ವಾಗ್ದಾನ ಮಾಡಿರುವನು 'ನೀನು ಜಲರಾಶಿಯನ್ನು ದಾಟುವಾಗಲೂ ನಾನು ನಿನ್ನೊಂದಿಗೆ ಇರುವೆನು. ನದಿಗಳನ್ನು ದಾಟುವಾಗ ಅವು ನಿನ್ನನ್ನು ಮುಣುಗಿಸವು; ಎಂದು (ಯೆಶಾ 43:2).

ದೇವಮಕ್ಕಳೇ, ಕ್ರಿಸ್ತನಲ್ಲಿರುವವರಿಗೂ, ಕ್ರಿಸ್ತನಿಂದ ಹೊರಗಿರುವವರಿಗೂ ದೊಡ್ಡ ವ್ಯತ್ಯಾಸ ಉಂಟು. ಕ್ರಿಸ್ತನಲ್ಲಿರುವವರು ಶೋಧನೆಗಳು, ಉಪದ್ರವಗಳು ಬರುವಾಗ, ಕರ್ತನು ಅವರನ್ನು ತನ್ನ ರೆಕ್ಕೆಗಳ ಮರೆಯಲ್ಲಿ ಹೊದಗಿಸಿಕೊಳ್ಳುವನು ರಕ್ಷಿಸಿ ಕಾಪಾಡುವನು. ಆದರೆ ಕ್ರಿಸ್ತನಿಂದ ಹೊರಗಿರುವವರು, ಶೋಧನೆ ಸಂಕಷ್ಟಗಳೆಂಬ ಜಲರಾಶಿಯಲ್ಲಿ ಮುಳುಗಿ, ನಾಶವಾಗುವರು. ಇಂದು ನೀವು ಕ್ರಿಸ್ತನಲ್ಲಿರುವಿರಾ? ಅಥವ ಕ್ರಿಸ್ತನಿಂದ ಹೊರಗಿರುವಿರಾ? ಪರೀಕ್ಷಿಸಿಕೊಳ್ಳಿ.

**ನೆನಪಿಗೆ : 'ಕ್ರಿಸ್ತ ಯೇಸುವಿನವರು, ತಮ್ಮ ಶರೀರಭಾವವನ್ನು ಅದರ ವಿಷಯಾಭಿಲಾಷೆ ಸೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದವರು' (ಗಲಾತ್ಯ 5:24).**

# ನೆನಪಿಗೆ ತಂದುಕೊಂಡನು!



**'ತರುವಾಯ ದೇವರು ನೋಹನನ್ನೂ ಅವನ ಸಂಗಡ ನಾವೆಯಲ್ಲಿದ್ದ ಎಲ್ಲಾ ಮೃಗ ಪಶುಗಳನ್ನೂ ನೆನಪಿಗೆ ತಂದುಕೊಂಡು.....ಮಾಡಲಾಗಿ ನೀರು ತಗ್ಗಿತು' (ಆದಿ 8:1).**

ನೋಹನು ದೇವರ ಅಪ್ಪಣೆಯ ಮೇರೆಗೆ ಬಹು ದೊಡ್ಡ ನಾವೆಯನ್ನು ಕಟ್ಟಿದನು. ನೋಹನ ಈ ಕಾರ್ಯ ಅವನಿಗೆ ಕರ್ತನಲ್ಲಿದ್ದಮಹತ್ತರವಾದ ನಂಬಿಕೆಯನ್ನು ಪ್ರಕಟಿಸುವದು. ನೋಹನ ನಾವೆಯಲ್ಲಿ ಎಷ್ಟೋ ಸಾವಿರಾರು ಜನರಿಗೆ, ಸ್ಥಳವಿದ್ದರೂ, ಮನುಷ್ಯರು ಕರ್ತನ ಸ್ವರಕ್ಕೆ ಕಿವಿಗೊಡಲೂ ಇಲ್ಲ. ನಾವೆಯೊಳಗೆ ಬಂದು ಸೇರಲೂ ಇಲ್ಲ. ಆದರೆ ಮನುಷ್ಯರಿಗಿಲ್ಲದ ಒಂದು ಆಂತರಿಕ ಜ್ಞಾನ ಮೃಗಪಕ್ಷಿಗಳಿಗಿತ್ತು. ಗಂಡು ಹೆಣ್ಣು ಜೋಡಿ ಜೋಡಿಯಾಗಿ ಬಂದು ನಾವೆಯೊಳಗೆ ಸೇರಿದವು.

ನೋಹನ ನಾವೆ ಕೆಲವರಿಗೆ ಮೃಗಾಲಯದಂತೆ ಕಂಡಿರಬಹುದು. ಆದರೆ ಅದು ಸಾವಿರ ವರುಷಗಳ ಕ್ರಿಸ್ತನ ಆಳ್ವಿಕೆ ಹೇಗಿರವುದು ಎಂಬುದಕ್ಕೆ ಮಾದರಿಯಾಗಿರುವದು. ನಾವೆಯಲ್ಲಿದ್ದ ಮೃಗ ಜೀವಿಗಳು ಒಂದರೊಡನೊಂದು ಕಾದಾಡದೆ, ತಮ್ಮ ದುಷ್ಟತನವನ್ನು ಮರೆತು, ಸಹೋದರ ಪ್ರೀತಿಯಿಂದ ಜೀವಿಸಿದವು. ನಾಲ್ವತ್ತು ದಿನಗಳು ಹಗಲು ರಾತ್ರಿ ಮಳೆಸುರಿದು ಬೆಟ್ಟಗುಡ್ಡಗಳೆಲ್ಲಾ ಮುಳುಗಿ ಹೋದವು. ಜಲವು ಭೂಮಿಯ ಮೇಲೆ 150 ದಿನಗಳು ಹರಿಯುತ್ತಿತ್ತು. ಆಗ ಕರ್ತನು ನೋಹನನ್ನು ಮಾತ್ರವಲ್ಲ ಅವನೊಂದಿಗಿದ್ದ ಸಕಲ ಜೀವರಾಶಿಯನ್ನು ನೆನಪು ಮಾಡಿಕೊಂಡು ಭೂಲೋಕದ ಮೇಲೆ ಗಾಳಿ ಬೀಸುವಂತೆ ಮಾಡಲಾಗಿ ನೀರು ಇಳಿಯಿತು (ಆದಿ 8:1). ಈಗಲೂ ಕರ್ತನು ನಿಮ್ಮನ್ನು ಮರೆತು ಹೋಗಿಲ್ಲ. ಒಂದು ಅದ್ಭುತವನ್ನು ಮಾಡಿ ನಿಮ್ಮ ಸಮಸ್ಯೆಗಳನ್ನು ಮಾರ್ಪಡಿಸುವನು. ಅಂದು ಭೂಮಿಯ ಮೇಲೆ ಗಾಳಿ ಬೀಸುವಂತೆ ಮಾಡಿದ ಕರ್ತನು, ಇಂದು ಪವಿತ್ರಾತ್ಮನೆಂಬ ಗಾಳಿಯನ್ನು ನಿಮ್ಮ ಮೇಲೆ ಬೀಸುವಂತೆ ಮಾಡಿ, ನಿಮ್ಮ ಆಂತರ್ಯದಲ್ಲಿ ಸಮಾಧಾನವನ್ನು ವಿಶ್ರಾಂತಿಯನ್ನು ನೀಡುವನು.

ದೇವಮಕ್ಕಳೇ, ಸೃಷ್ಟಿ ಕರ್ತನಾದ ದೇವರು ತನ್ನ ಸಾರೂಪ್ಯದಲ್ಲಿ ಉಂಟು ಮಾಡಿದ ನಿಮ್ಮನ್ನು ಎಂದಿಗೂ ಮರೆಯುವದಿಲ್ಲ, ಯಾರ್‍ಯಾರು ಆತನ ಸ್ವರಕ್ಕೆ ಕಿವಿಗೊಟ್ಟು ಆತನ ಆಜ್ಞೆಗಳನ್ನು ಪಾಲಿಸುವರೋ, ಅಂಥವರನ್ನು ಕೈ ಹಿಡಿದು, ಕಾಪಾಡುವಾತನಾಗಿರುವನು. ಹಾಗೂ ಆತನಿಗೆ ಮೊರೆಯಿಟ್ಟಾಗ ಸದುತ್ತರವನ್ನು ದಯಪಾಲಿಸಿ ಅವರನ್ನು ಎಲ್ಲಾ ಕಷ್ಟಗಳಿಂದ ಬಿಡಿಸಿ ಮಾರ್ಗವನ್ನು ತೋರಿಸುವನು. ಪ್ರಾಯದ ಸಿಂಹಗಳಾದರೋ ಹೊಟ್ಟೆಗಿಲ್ಲದೆ ಹಸಿದಾವು ಯೆಹೋವನ ಸನ್ನಿದಿಯಲ್ಲಿ ಬೇಡಿಕೊಳ್ಳುವವರಿಗೆ ಯಾವ ಮೇಲಿಗೂ ಕಡಿಮೆಯಿಲ್ಲ. ಆತನಲ್ಲಿ ಭಯಭಕ್ತಿಯುಳ್ಳವರಿಗೆ ಯಾವ ಕೊರತೆಯೂ ಇರುವದಿಲ್ಲ (ಕೀರ್ತ 34:9,10).

**ನೆನಪಿಗೆ : 'ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು. ಆ ಸಹಾಯಕನು ಯಾರಂದರೆ ಸತ್ಯದ ಆತ್ಮನೇ....ಮತ್ತು ನಿಮ್ಮೊಳಗೆ ಇರುವನು' (ಯೋಹಾ 14:16,17).**

# ನೋಹನನ್ನು ಜ್ಞಾಪಿಸಿಕೊಂಡನು!



**'ತರುವಾಯ ದೇವರು ನೋಹನನ್ನೂ ಅವನ ಸಂಗಡ ನಾವೆಯಲ್ಲಿದ್ದ ಎಲ್ಲಾ ಮೃಗಪಶುಗಳನ್ನೂ ನೆನಪಿಗೆ ತಂದುಕೊಂಡನು' (ಆದಿ 8:1).**

ತನಗೆ ವಿಧೇಯತೆಯನ್ನು ತೋರಿಸುವ ಮಕ್ಕಳನ್ನು, ಕರ್ತನು, ಯಾವಾಗಲೂ ಜ್ಞಾಪಿಸಿಕೊಳ್ಳುವನು, ನೋಹನನ್ನು ಜ್ಞಾಪಕಕ್ಕೆ ತಂದುಕೊಂಡದ್ದರಿಂದ, ನಾವೆ ಅರಾರಾಟ್ ಸೀಮೆಯ ಬೆಟ್ಟಗಳಲ್ಲಿ ನಿಂತಿತು. ಮಾತ್ರವಲ್ಲ ಜಲವು ಸ್ವಲ್ಪ ಸ್ವಲ್ಪವಾಗಿ ಕಡಿಮೆಯಾಗುತ್ತಾ ಬಂತು.

ಜಲಪ್ರಳಯದಿಂದ ತನ್ನ ಕುಟುಂಬವನ್ನು ರಕ್ಷಿಸಲು, ನೋಹನು ಮಾಡಿದ ಎಲ್ಲಾ ತ್ಯಾಗಗಳಿಗೆ, ಒಳ್ಳೆಯ ಫಲ ದೊರಕಿತು. ಒಂದು ವೇಳೆ ನಾವೆಯನ್ನು ನಿರ್ಮಿಸಲು, ಅವನು ಮನೆ ಮಾರುಗಳನ್ನು ಮಾರಾಟ ಮಾಡಿರಬಹುದು. ಆದರೆ ಈಗಲಾದರೋ, ಪ್ರಪಂಚದಲ್ಲಿರುವ, ಎಲ್ಲಾ ಭೂಮಿಯೂ, ನೋಹನಿಗೆ ಸ್ವಂತವಾಗಿ ಬಿಟ್ಟಿತು. ಕರ್ತನಿಗಾಗಿ ನೀವು ಏನನ್ನು ಕಳೆದುಕೊಂಡರೂ, ದೇವರು ಅದಕ್ಕೆ ನೂರರಷ್ಟು ನಿಮಗೆ ಹಿಂದಕ್ಕೆ ಕೊಡುವನು. ಒಂದು ದಿನ ಬರುವದು, ಭಕ್ತಜನರೆಲ್ಲರೂ ಇಡೀ ಪ್ರಪಂಚವನ್ನು, ಕ್ರಿಸ್ತನೊಂದಿಗೆ ಆಳುವರು (ದಾನಿ 7:27).

ಕರ್ತನು ಪ್ರೀತಿಸ್ವರೂಪನು, ದಯಾ ಸಾಗರನು, ಕರುಣಾಮಯಿ ಮಾತ್ರವಲ್ಲ, ಅತಿ ಕನಿಕರ ಉಳ್ಳವನೂ ಆಗಿರುವನು. ಆತನು ನಿಮ್ಮನ್ನು ನೆನಪಿನಲ್ಲಿ ಇಟ್ಟುಕೊಂಡಿರುವನು "ಚೀಯೋನ್ ನಗರಿಯಾದರೋ ಯೆಹೋವನು ನನ್ನನ್ನು ಮರೆತಿದ್ದಾನಲ್ಲಾ ಅಂದು ಕೊಂಡಳು ಒಬ್ಬ ಹೆಂಗಸು ತಾನು ಹೆತ್ತ ಮಗುವಿನ ಮೇಲೆ ಮಮತೆಯಿಡದೆ ತನ್ನ ಮೊಲೆಕೂಸನ್ನು ಮರೆತಾಳೇ? ಒಂದು ವೇಳೆ ಮರೆತಾಳು ನಾನಾದರೆ ನಿನ್ನನ್ನು ಮರೆಯೆ. ಇಗೋ, ನನ್ನ ಅಂಗೈಯಲ್ಲಿ ಚಿತ್ರಿಸಿಕೊಂಡಿದ್ದೇನೆ; ನಿನ್ನ ಪೌಳಿಗೋಡೆಗಳು ಸದಾ ನನ್ನ ಕಣ್ಣೆದುರಿನಲ್ಲಿವೆ" ಎಂಬುದು ಕರ್ತನ ವಾಗ್ದಾನ ವಾಗಿರುವದು (ಯೆಶಾ 49:14–16). ಗಂಡ, ಹೆಂಡತಿಯನ್ನು ಮರೆಯ ಬಹುದು ಹೆಂಡತಿ ಗಂಡನನ್ನು ಮರೆಯಬಹುದು. ಹೆತ್ತವರು, ಮಕ್ಕಳನ್ನು ಮಕ್ಕಳು, ಹೆತ್ತವರನ್ನು ಮರೆಯಬಹುದು. ಆದರೆ ಕರ್ತನು ತನ್ನ ಮಕ್ಕಳನ್ನು ಎಂದಿಗೂ ಮರೆಯುವಾತನಲ್ಲ. ದಾವೀದನ ಜೀವಿತದಲ್ಲೂ ಅಂಥಹ ಸಂದರ್ಭ ಒದಗಿತು. "ನಾನು ಸತ್ತವನಂತೆ ಯಾರ ಜ್ಞಾಪಕಕ್ಕೂ ಬಾರದವನಾಗಿರುತ್ತೇನೆ" ಎಂದು ಹಲುಬಿದನು (ಕೀರ್ತ 31:12). ಆದರೆ ಕರ್ತನು ಅವನ ಮೊರೆಯನ್ನು ಕೇಳಿ ಸಹಾಯಕ್ಕೆ ನಿಂತಾಗ, ದಾವೀದನು "ಭಕ್ತರೇ, ನೀವೆಲ್ಲರೂ ಯೆಹೋವನನ್ನು ಪ್ರೀತಿಸಿರಿ. ಆತನು ನಂಬಿಗಸ್ತರನ್ನು ಕಾಪಾಡುತ್ತಾನೆ" ಎಂದು ಹೇಳುತ್ತಾನೆ (ಕೀರ್ತ 31:23).

ದೇವಮಕ್ಕಳೇ, ಕರ್ತನು ನಿಮ್ಮನ್ನು ತನ್ನ ನೆನಪಿನಲ್ಲಿ ಇಟ್ಟುಕೊಂಡಿರುವನು. ಆತನು ನಿಮ್ಮನ್ನು ಆಶೀರ್ವದಿಸುವನು. ಇಂದು ನೀವು ಆತನಿಗೆ ನಂಬಿಗಸ್ತರಾಗಿರುವಿರಾ?

**ನೆನಪಪಿಗೆ : 'ನಾನಾದರೋ ಕುಗ್ಗಿದವನೂ ದಿಕ್ಕಿಲ್ಲದವನೂ ಆಗಿದ್ದೇನೆ; ಕರ್ತನೇ ನನ್ನ ಹಿತಚಿಂತಕನು' (ಕೀರ್ತ 40:17).**

# ವಾಗ್ದಾನದ ಒಡಂಬಡಿಕೆ!

ಬೆಳಿಗ್ಗೆ: 2ಸಮು 6,7,8
ಸಂಜೆ: ಲೂಕ 15:1–10

**'ನಿನ್ನ ಕೂಡ ನನ್ನ ನಿಬಂಧನೆಯನ್ನು ಮಾಡುತ್ತೇನೆ' (ಆದಿ 6:18).**

ಸತ್ಯವೇದದಲ್ಲಿ ಒಡಂಬಡಿಕೆ ನಿಬಂಧನೆ ಎಂಬ ಪದ 288 ಬಾರಿ ಬರುವದು. ರಾಜರುರಾಜರೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆ ಉಂಟು. ಸಾಧಾರಣ ಮನುಷ್ಯರು ಒಬ್ಬರೊಂದಿಗೆ ಒಬ್ಬರು ಮಾಡಿಕೊಳ್ಳುವ ಒಡಂಬಡಿಕೆ ಉಂಟು. ಅದೇ ವೇಳೆಯಲ್ಲಿ ಕರ್ತನು ನಮ್ಮೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆಯೂ ಉಂಟು. ಒಡಂಬಡಿಕೆ ಅಥವಾ ನಿಬಂಧನೆ ಎಂಬ ಮಾತು ಸತ್ಯವೇದದಲ್ಲಿ ಪ್ರಪ್ರಥಮವಾಗಿ ಆದಿ 6:18 ರಲ್ಲಿ ಓದುತ್ತೇವೆ.

ಜಲಪ್ರಳಯವು ಮುಗಿದು, ನೋಹನು ಅವನ ಕುಟುಂಬದವರೂ, ನಾವೆಯನ್ನು ಬಿಟ್ಟು ಹೊರಗೆ ಬಂದಾಗ, ಕರ್ತನು "ಕೇಳಿರಿ, ನಾನು ನಿಮ್ಮನ್ನೂ ನಿಮ್ಮ ಸಂತತಿಯವರನ್ನೂ, ನಿಮ್ಮ ಕೂಡ ನಾವೆಯಿಂದ ಹೊರಟುಬಂದ ಪಶುಪಕ್ಷಿ ಮೃಗಾದಿ ಸಕಲ ಭೂಜಂತುಗಳನ್ನೂ ಕುರಿತು ಸ್ಥಿರಪ್ರತಿಜ್ಞೆ ಮಾಡುತ್ತೇನೆ; ಆ ಪ್ರತಿಜ್ಞೆ ಯಾವದೆಂದರೆ ಇನ್ನು ಮೇಲೆ ಎಲ್ಲಾ ಪ್ರಾಣಿಗಳು ಜಲಪ್ರಳಯದಿಂದ ನಾಶವಾಗುವದಿಲ್ಲ; ಇನ್ನು ಮುಂದೆ ಭೂಮಿಯನ್ನೂ ಹಾಳು ಮಾಡುವ ಪ್ರಳಯವು ಬರುವದೇ ಇಲ್ಲ ಎಂದು ಹೇಳಿದನು" (ಆದಿ 9:9,10). ಆ ಒಡಂಬಡಿಕೆಗೆ ಗುರುತಾಗಿ ಕರ್ತನು ಒಂದು ಗುರುತನ್ನು ಆಕಾಶದಲ್ಲಿ ಇಟ್ಟನು. ಅದುವೇ ಮುಗಿಲುಬಿಲ್ಲು "ನನಗೂ ಭೂಪ್ರಾಣಿಗಳಿಗೂ ಆದ ಒಡಂಬಡಿಕೆಗೆ ಇದೇ ಗುರುತಾಗಿರುವದು, ನಾನು ಭೂಲೋಕದ ಮೇಲೆ ಮೇಘಗಳನ್ನು ಕವಿಸುವಾಗ ಆ ಮೇಘಗಳಲ್ಲಿ ಬಿಲ್ಲು ಕಂಡು ಬರುವದು.... ನಾನು ಅದನ್ನು ನೋಡಿ ದೇವರಾದ ನನಗೂ ಭೂಮಿಯ ಮೇಲಿರುವ ಎಲ್ಲಾ ಜೀವಜಂತುಗಳಿಗೂ ಆದ ಶಾಶ್ವತವಾದ ಒಡಂಬಡಿಕೆಯನ್ನು ಜ್ಞಾಪಕ ಮಾಡಿಕೊಳ್ಳುವೆನು ಅಂದನು (ಆದಿ 9:13–16).

ನಮ್ಮ ದೇವರು ಒಡಂಬಡಿಕೆಯ ದೇವರು. ಆತನು ತಾನು ಮಾಡಿಕೊಂಡ ಒಡಂಬಡಿಕೆಯನ್ನು ರದ್ದು ಪಡಿಸುವವನೂ ಅಲ್ಲ ಆತನು ಹೇಳಿದ್ದನ್ನು ನೆರವೇರಿಸುವನು. ಅಂದು ನೋಹನೊಂದಿಗೆ ಒಡಂಬಡಿಕೆ ಮಾಡಿಕೊಂಡ ದೇವರು ಇಂದು ನಮ್ಮೊಂದಿಗೆ ನಿತ್ಯವಾದ ಒಡಂಬಡಿಕೆ ಮಾಡಿಕೊಳ್ಳುವನು, ಆ ಒಡಂಬಡಿಕೆಯಾವುದು? ನಾನು ಅವರೊಂದಿಗೆ ಸಮಾಧಾನ ಒಡಂಬಡಿಕೆಯನ್ನು ಮಾಡಿಕೊಳ್ಳುವೆನು. ಅದು ಶಾಶ್ವತವಾಗಿರುವದು. ನನ್ನ ವಾಸಸ್ಥಾನ ಅವರ ಮಧ್ಯದಲ್ಲಿರುವದು. ನಾನು ಅವರಿಗೆ ದೇವರಾಗಿರುವೆನು ಅವರು ನನಗೆ ಪ್ರಜೆಯಾಗಿರುವರು ಎಂಬುದೇ (ಯೆಹೆ 37:26,27).

ದೇವಮಕ್ಕಳೇ, ಕರ್ತನು ಮಾಡಿರುವ ಸಮಾಧಾನದ ಒಡಂಬಡಿಕೆಯಂತೆಯೇ, ನಿಶ್ಚಯವಾಗಿ ನಿಮಗೆ ಸಮಾಧಾನವನ್ನು ಕೊಡುವನು. ಹಳೆಯ ಒಡಂಬಡಿಕೆಯಲ್ಲಿ ಧರ್ಮಶಾಸ್ತ್ರ ಒಡಂಬಡಿಕೆಯನ್ನು ಮಾಡಿಕೊಂಡನು. ಹೊಸ ಒಡಂಬಡಿಕೆಯ ದೇವ ಜನರೊಂದಿಗೆ ಕಲ್ವಾರಿಯ ಒಡಂಬಡಿಕೆಯನ್ನು ಮಾಡಿರುವನು.

**ನೆನಪಿಗೆ : 'ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವದು' (ಫಿಲಿ 4:7).**

# ನೋಹನ ಕಾಲದಲ್ಲಿ!



**'ನೋಹನು ನಾವೆಯಲ್ಲಿ ಸೇರಿದ ದಿನದ ತನಕ ಜನರು ಊಟಮಾಡುತ್ತಿದ್ದರು, ಕುಡಿಯುತ್ತಿದ್ದರು, ಮದುವೆ ಮಾಡಿಕೊಳ್ಳುತ್ತಿದ್ದರು, ಮದುವೆ ಮಾಡಿಕೊಡುತ್ತಿದ್ದರು. ಆಗ ಜಲಪ್ರಳಯವು ಬಂದು ಎಲ್ಲರನ್ನು ನಾಶಮಾಡಿತು' (ಲೂಕ 17:27).**

ನೋಹನ ಚರಿತ್ರೆ ಒಂದು ಕಟ್ಟು ಕಥೆ ಅಲ್ಲ. ತೆನಾಲಿ ರಾಮನ ಕಥೆಯಂತೆ ಓದಿ ಮರೆತು ಹೋಗಲು ಸಾಧ್ಯವಿಲ್ಲ. ಅದು ಒಂದು ಪ್ರವಾದನೆಯಾಗಿರುವದರಿಂದ. ಯೇಸುಕ್ರಿಸ್ತನು ಜನರನ್ನು ಎಚ್ಚರಿಸುತ್ತಾ "ನೋಹನ ಕಾಲದಲ್ಲಿ ಸಂಭವಿಸಿದಂತೆ ಲೋಟನ ದಿವಸಗಳಲ್ಲಿ ನಡೆದ ಪ್ರಕಾರ ನಡೆಯುವದು, ಅವರು ಊಟ ಮಾಡುತ್ತಿದ್ದರು ಕುಡಿಯುತ್ತಿದ್ದರು, ಕೊಳ್ಳುತ್ತಿದ್ದರು, ಮಾರುತ್ತಿದ್ದರು, ನೆಡುತ್ತಿದ್ದರು, ಕಟ್ಟುತ್ತಿದ್ದರು. ಮನುಷ್ಯ ಕುಮಾರನು ಪ್ರತ್ಯಕ್ಷನಾಗುವ ದಿವಸದಲ್ಲಿಯೂ ಅದೇ ರೀತಿ ಸಂಭವಿಸುವದು" ಅಂದನು (ಲೂಕ 17:26,30).

ನೋಹನ ಚರಿತ್ರೆಯ ಮೂಲಕವಾಗಿ ಕರ್ತನು ನಮಗೆ ಮುನ್ನೆಚ್ಚರಿಕೆಯನ್ನು ನೀಡಿರುವನು. ಅದು ನಮ್ಮನ್ನು ನಾವೇ ನೋಹನನೊಂದಿಗೆ ಹೋಲಿಸಿ ನೋಡಲು, ಕಾಲಗಳನ್ನು ಪರೀಕ್ಷಿಸಿ ನೋಡಿ ತಿಳಿಯಲು ಸಹಾಯಿಸುವದು. ತೆರೆದಿರುವ ಬಾಗಿಲು ಮುಚ್ಚುವದರೊಳಗಾಗಿ ಕ್ರಿಸ್ತನೆಂಬ ನಾವೆಯೊಳಗೆ ಬಂದು ಸೇರಿರಿ. ಬುದ್ಧಿಯುಳ್ಳ ಕನ್ನಿಕೆಯರಂತೆ ಮದುವಣಿಗನ ಬಳಿ ಬಂದು ಸೇರಿರಿ. ಹಲವು ವರುಷಗಳ ಹಿಂದೆ ದೇವದಾಸ್ ಎಂಬ ದೇವ ಭಕ್ತರೊಬ್ಬರು, ನಮ್ಮ ಕಛೇರಿಗೆ ಬಂದರು. ಅವರ ಮಾತುಗಳನ್ನು ಕೇಳಲು, ಕಛೇರಿಯ ಸಿಬ್ಬಂಧಿಗಳೆಲ್ಲರೂ, ಕೂಡಿ ಬಂದರು. ಆ ಭಕ್ತರು ಹೇಳಿದರು ನೋಹನು ನಾವೆಯನ್ನು ನಿರ್ಮಿಸಲು ಎಷ್ಟೋ ಮಂದಿ ಬಡಗಿಗಳನ್ನು, ಮರಕಡಿಯುವವರನ್ನು ಕಮ್ಮಾರರನ್ನು ನೇಮಿಸಿಕೊಂಡಿದ್ದಿರಬಹುದು. ಅವರು ನಾವೆ ಕಟ್ಟಲು ಸಹಾಯಕರಾದರೇ ಹೊರತು, ನಾವೆಯೊಳಗೆ ಅವರ್‍ಯಾರೂ ಪ್ರವೇಶಿಸಲಿಲ್ಲ. ನೀವು ಕ್ರೈಸ್ತ ಸೇವಾಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವಿರಿ. ಈ ಸೇವೆಗೆ ನೀವು ಎಷ್ಟೇ ಸಹಾಯ ಮಾಡಿದಾಗ್ಯೂ ನೀವು ನಾವೆಯೊಳಗೆ ಕಾಣದೇ ಹೋದರೆ ನಿಮಗೆ ಏನು ಪ್ರಯೋಜನ? ಎಂದು ಕೇಳಿದರು. ಅವರ ಮಾತು ಎಲ್ಲರಲ್ಲಿಯೂ ಅರಿವು ಮೂಡಿಸಿತು.

ದೇವಮಕ್ಕಳೇ, ಇಂದು ನೀವು ದೇವ ಸೇವಾ ಕಾರ್ಯಗಳಲ್ಲಿ ತೊಡಗಿರ ಬಹುದು, ಸುವಾರ್ತಾ ಕಾರ್ಯಗಳಲ್ಲಿ ತೊಡಗಿರಬಹುದು. ತಪ್ಪದೆ ದೇವಾಲಯಕ್ಕೆ ಹೋಗುತ್ತಿರಬಹುದು. ತಪ್ಪದೆ ಕಾಣಿಕೆಗಳನ್ನು ನೀಡುತ್ತಿರಬಹುದು. ದೇವರ ಹೆಸರಿನಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿರಬಹುದು. ದೆವ್ವಗಳನ್ನು ಬಿಡಿಸಿರಬಹುದು, ಆತ್ಮಗಳನ್ನು ಆದಾಯ ಮಾಡಿರಬಹುದು. ಆದರೆ ನಿಮ್ಮ ವೈಯಕ್ತಿಕ ಜೀವಿತದಲ್ಲಿ ಕ್ರಿಸ್ತನಲ್ಲಿ ನೀವು ಇರುವಿರಾ? ಎಂಬುದು ಮುಖ್ಯ. ಒಂದು ವೇಳೆ ಇಲ್ಲದಿರುವದಾದರೆ ನೀವು ಮಾಡುವ ಕಾರ್ಯಗಳೆಲ್ಲಾ ವ್ಯರ್ಥ. ಕ್ರಿಸ್ತನ ಬರೋಣದಲ್ಲಿ, ಆತನು ನೀವು ಯಾರೆಂದು ನಾನು ಅರಿಯೆನು ಎಂದು ಹೇಳುವನು.

**ನೆನಪಿಗೆ : 'ಆದಕಾರಣ ಆ ದಿನವಾದರೂ ಗಳಿಗೆಯಾದರೂ ನಿಮಗೆ ಗೊತ್ತಿಲ್ಲವಾದದರಿದ ಎಚ್ಚರವಾಗಿರ್ರಿ' (ಮತ್ತಾ 25:13).**

ಏಪ್ರಿಲ್
21

# ಅರಾರಾಟ್ ಬೆಟ್ಟ!

ಬೆಳಿಗ್ಗೆ: 2ಸಮು 12,13
ಸಂಜೆ: ಲೂಕ 16

**'ಏಳನೆಯ ತಿಂಗಳಿನ ಹದಿನೇಳನೆಯ ದಿನದಲ್ಲಿ ನಾವೆಯು ಅರಾರಾಟ್ ಸೀಮೆಯ ಬೆಟ್ಟಗಳಲ್ಲಿ ನಿಂತಿತು' (ಆದಿ 8:4).**

ಸತ್ಯವೇದದಲ್ಲಿ ಹೇಳಲ್ಪಟ್ಟ ಮೊದಲನೆಯ ಬೆಟ್ಟ "ಅರಾರಾಟ್ ಬೆಟ್ಟ"ವಾಗಿದೆ. ಅರಾರಾಟ್ ಎಂದರೆ ಎತ್ತರವಾದ ಪರಿಶುದ್ಧವಾದ ಸ್ಥಳ. ಈಗ ಟರ್ಕಿದೇಶದ ಪಕ್ಕದಲ್ಲಿ "ಅರ್ಮೆನಿಯಾ" ದಲ್ಲಿ ಈ ಬೆಟ್ಟವಿರುವದು. ಇದರ ಎತ್ತರ ಸುಮಾರು ಏಳುಸಾವಿರ ಅಡಿಗಳು. ಜಲಪ್ರಳಯದ ನಂತರ, ನೋಹನೂ ಅವನ ಕುಟುಂಬದವರು ಅರಾರಾಟ್ ಬೆಟ್ಟದಲ್ಲಿ ಇಳಿದರು ದೇವರು ಅವರನ್ನು, ಎತ್ತರವಾದ ಸ್ಥಾನಕ್ಕೂ ಸೂರ್ಯನ ಬೆಳಕು ಅಧಿಕವಾಗಿ ಪ್ರಕಾಶಿಸುವ ಸ್ಥಳಕ್ಕೆ ತೆಗೆದುಕೊಂಡು ಹೋಗಿ ಇರಿಸಿದನು. ಅಲ್ಲಿ ಶುದ್ಧವಾದ ಗಾಳಿ ಸಿಗುವದು. ಅಲ್ಲಿ ಪೂರ್ಣವಾದ ಸಮಾಧಾನ ಶಾಂತತೆ ಇರುವದು.

ನೋಹನೂ ಅವನ ಕುಟುಂಬವೂ ಕಷ್ಟಪಟ್ಟು ಆ ಬೆಟ್ಟದ ಮೇಲೆ ಹತ್ತಲಿಲ್ಲ. ಅವರು ಮಾಡಿದ್ದೆಲ್ಲಾ, ಆ ನಾವೆಯೊಳಗೆ ಹತ್ತಿದ್ದು ಅಷ್ಟೇ ಮಳೆ ಸುರಿದಂತೆಲ್ಲಾ ಆ ನಾವೆ ತಾನಾಗಿಯೇ ಮೇಲಕ್ಕೆ ಎತ್ತಲ್ಪಡುತ್ತಾ ಹೋಯಿತು. ನೀವೂ ಕ್ರಿಸ್ತನೆಂಬ ನಾವೆಯೊಳಗೆ ಬನ್ನಿರಿ, ನೀವೂ ಸಹಾ ನಿಮ್ಮ ಆತ್ಮೀಕ ಜೀವಿತದಲ್ಲಿ ಮೇಲಕ್ಕೆ ಎತ್ತಲ್ಪಡುವಿರಿ. ಆಶೀರ್ವದಿಸಲ್ಪಡುವಿರಿ. ನೋಹನ ನಾವೆಯಲ್ಲಿ, ಚುಕ್ಕಾಣಿ ಇಲ್ಲ, ಇಂಜಿನ್ ಇಲ್ಲ, ಮನುಷ್ಯನ ಪ್ರಯಾಸವಿಲ್ಲ. ಸ್ವಂತ ಜ್ಞಾನದಿಂದಲೋ, ಯಾವ ರೀತಿಯಿಂದಲೋ, ಅದನ್ನು ಓಡಿಸಲು ಸಾಧ್ಯವಿಲ್ಲ. ಭೂಮಿಯ ಮೇಲೆ ಸುರಿದ ಮಳೆಯ ನೀರು ಅದನ್ನು ಮೇಲೆ ಮೇಲೆ ಎತ್ತಿ ಮುಂದೆ ಸಾಗಿಸಿತು. ಹಾಗೆಯೇ, ನೀವು ಪರಿಶುದ್ಧಾತ್ಮನಿಗೆ ನಿಮ್ಮನ್ನು ಪೂರ್ಣವಾಗಿ ಒಪ್ಪಿಸಿಕೊಡುವಾಗ, ಆತನೇ ನಿಮಗೆ ಚುಕ್ಕಾಣಿಯಾಗಿಯೂ, ಇಂಜಿನ್ನಾಗಿಯೂ ಇರುವನು. ಪ್ರಾರಂಭದಲ್ಲಿ ಹಿಮ್ಮಡಿಯಿಂದ, ಮೊಣಕಾಲಿನವರೆಗೆ, ನಂತರ ಸೊಂಟದವರೆಗೂ ನಂತರ ಈಜುವ ಆಳದವರೆಗೂ ನಿಮ್ಮನ್ನು ನಡೆಸಿ ನಿಮ್ಮನ್ನು ಉನ್ನತಕ್ಕೆ ಎತ್ತುತ್ತಲೇ ಇರುತ್ತಾನೆ. ನೀವು ಕೆಳಗಿನವರಾಗಿರದೆ. ಮೇಲಿನವರಾಗಿರುವಿರಿ.

ನೋಹನ ಕಾಲದಲ್ಲಿ ನಾಲ್ವತ್ತು ದಿನಗಳು ಮಳೆ ಸುರಿಯುತ್ತಲೇ ಇತ್ತು. "ನಾಲ್ವತ್ತು ಎಂಬ ಸಂಖ್ಯೆ ನ್ಯಾಯ ತೀರ್ಪನ್ನು ಸೂಚಿಸುವದು. ಸತ್ಯವೇದದಲ್ಲಿ ಒಟ್ಟು ನಾಲ್ವತ್ತು ದೊಡ್ಡ ನ್ಯಾಯ ತೀರ್ಪುಗಳಿರುವವು. ಪ್ರವಾದಿಯಾದ ಯೋನನು ನಿನೆವೆಗೆ ಹೋಗಿ ಪ್ರಸಂಗಿಸಿದಾಗ, ಅಲ್ಲಿನ ಜನರು ದೇವರ ಕಡೆಗೆತಿರುಗಿಕೊಳ್ಳಲು ನಾಲ್ವತ್ತು ದಿನಗಳು ಅವಕಾಶವನ್ನು ದೇವರು ನೀಡಿದನು. ಅವರು ಅದನ್ನು ಪ್ರಯೋಜನ ಪಡಿಸಿಕೊಂಡರು.

ದೇವಮಕ್ಕಳೇ, ನೋಹನ ಕಾಲದಲ್ಲಿ ದೊಡ್ಡ ಮಳೆಸುರಿದಂತೆ ಕರ್ತನ ಬರುವಿಕೆಗೆ ಮೊದಲು, ಪವಿತ್ರಾತ್ಮನ ಅಭಿಷೇಕ ದೇಶದಲ್ಲೆಲ್ಲಾ ಸುರಿಯಲ್ಪಡುವದು. ಆದ್ದರಿಂದ ಹಿಂಗಾರಿನ ಮಳೆಗಾಗಿ, ಕರ್ತನಲ್ಲಿ ಬೇಡಿಕೊಳ್ಳಿರಿ (ಜೆಕ 10:1). "ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು" (ಯೋವೇ 2:28) ಎಂಬುದು ಕರ್ತನ ವಾಗ್ದಾನ.

**ನೆನಪಿಗೆ : 'ಅಂತ್ಯಕಾಲದಲ್ಲಿ ಯೆಹೋವನ ಮಂದಿರದ ಬೆಟ್ಟವು ಗುಡ್ಡಬೆಟ್ಟಗಳಿಗಿಂತ ಉನ್ನತೋನ್ನತವಾಗಿ ಬೆಳೆದು ನೆಲೆಗೊಳ್ಳುವದು' (ಯೆಶಾ 2:2).**

**ಏಪ್ರಿಲ್ 22**

# ಕಾಗೆಯೂ, ಪಾರಿವಾಳವೂ!

ಬೆಳಿಗ್ಗೆ: 2ಸಮು 14,15
ಸಂಜೆ: ಲೂಕ 17:1–19

**'ನಾಲ್ವತ್ತು ದಿನಗಳಾದ ಮೇಲೆ ನೋಹನು ತಾನು ಮಾಡಿದ ನಾವೆಯ ಕಿಟಕಿಯನ್ನು ತೆರೆದು ಕಾಗೆಯನ್ನು ಹೊರಕ್ಕೆ ಬಿಟ್ಟನು. ಭೂಮಿಯ ಮೇಲಿದ್ದ ನೀರು ಒಣಗುವ ತನಕ ಆ ಕಾಗೆ ಹೋಗುತ್ತಾ ಬರುತ್ತಾ ಇತ್ತು' (ಆದಿ 8:6,7).**

ಏದೇನ್ ತೋಟದಲ್ಲಿ ಒಳಗೆ ಜೀವ ಉಂಟು ಜೀವ ವೃಕ್ಷವೂ ಇತ್ತು. ಮರಣ ಉಂಟು ಮಾಡುವ ಒಳ್ಳೆಯದರ ಕೆಟ್ಟದರ ಅರಿವು ಮೂಡಿಸುವ ವೃಕ್ಷವೂ ಇತ್ತು. ತುರಾಯಿ ಮರದಿಂದ ಮಾಡಿದ ನಾವೆಯೊಳಗೆ ಜೀವವಿತ್ತು. ಹೊರಗೆ ಮರಣವಿತ್ತು. ಒಂದೇ ನಾವೆಯಲ್ಲಿ ಎರಡು ವಿಧವಾದ ಪಕ್ಷಿಗಳಿದ್ದವು, ಒಂದು ಕಾಗೆ ಮತ್ತೊಂದು ಪಾರಿವಾಳ.

ಕಾಗೆ ಅಶುದ್ಧವಾದ ಪಕ್ಷಿ ಅದು ಅಸಹ್ಯವಸ್ತುಗಳನ್ನು ತಿನ್ನುವದು. ಆದರೆ ಪಾರಿವಾಳವೋ, ಶುದ್ಧವಾದ ಧಾನ್ಯವನ್ನು ತಿನ್ನುವದು. ಅದು ಪವಿತ್ರಾತ್ಮನಿಗೆ ಗುರುತಾಗಿರುವದು. ಭೂಮಿಯ ಮೇಲಿದ್ದ ನೀರು ಒಣಗಿ ಹೋಗಿದೆಯಾ? ಇಲ್ಲವಾ? ಎಂದು ತಿಳಿದುಕೊಳ್ಳಲು ನೋಹನು ತನ್ನ ನಾವೆಯಲ್ಲಿದ್ದ ಕಾಗೆಯನ್ನು ಹೊರಗೆ ಬಿಟ್ಟನು. ಅದು ಹೋಗುತ್ತಾ ಬರುತ್ತಾ ಇತ್ತು. ಕಾರಣ ನೀರಿನ ಮೇಲೆ ತೇಲಾಡುತ್ತಿದ್ದ ಹೆಣಗಳ ಕೊಳೆತ ಮಾಂಸವನ್ನು ತಿನ್ನುತ್ತಿದ್ದಿರಬಹುದು. ಆದರೆ ನಾವೆಯಿಂದ ಹೊರಟ ಪಾರಿವಾಳ ಪಾದಗಳನ್ನಿಟ್ಟು ವಿಶ್ರಮಿಸಲು ಸ್ಥಳವಿಲ್ಲದೇ ಇದ್ದದ್ದರಿಂದ ನಾವೆಗೆ ಹಿಂದಿರುಗಿ ಬಂದಿತು.

ಹಳೆಯ ಒಡಂಬಡಿಕೆಯ ಕಾಲದಲ್ಲಿ ಪರಲೋಕದ ಪಾರಿವಾಳವಾದ ಪವಿತ್ರಾತ್ಮನು, ತಾನು ನಿರಂತರವಾಗಿ ತಂಗಿ ವಿಶ್ರಾಂತಿ ಪಡೆಯುವಂಥ ಪರಿಶುದ್ಧ ಜನರು ಒಬ್ಬರಾದರೂ ಕಾಣಲು ಸಾಧ್ಯವಿಲ್ಲದ್ದಾಗಿತ್ತು. ಅವರು ತಮ್ಮ ಪಾಪಗಳಿಗಾಗಿ ಅರ್ಪಿಸಿದ ಪಶುಯಜ್ಞಗಳಿಂದ ಅವರನ್ನು ಪೂರ್ಣವಾಗಿ ಪರಿಶುದ್ಧರನ್ನಾಗಿಸಲು ಸಾಧ್ಯವಾಗಲಿಲ್ಲ. ಏಳು ದಿನದ ನಂತರ ಪಾರಿವಾಳವನ್ನು ಹೊರಗೆ ಬಿಟ್ಟಾಗ, ಅದು ಸಂಜೆಯಲ್ಲಿ ಹಿಂದಿರುಗಿ ಬರುವಾಗ ಅದರ ಬಾಯಲ್ಲಿ ಎಣ್ಣೆ ಮರದ ಹೊಸ ಚಿಗುರು ಇತ್ತು. ಅದನ್ನು ಕಂಡ ನೋಹನು ಭೂಮಿಯ ಮೇಲಿಂದ ನೀರು ಇಳಿದು ಹೋಯಿತೆಂದು ತಿಳಿದು ಕೊಂಡನು (ಆದಿ 8:11). ಆ ಎಣ್ಣೆ ಮರದ ಎಲೆ ಎಂಬುದು ಸಮಾಧಾನದ ಚಿಹ್ನೆ. ಸಮಾಧಾನದ ಪ್ರಭುವಾದ ಯೇಸುಕ್ರಿಸ್ತನ ಜನನದ ಕುರಿತಾದ ಸುವಾರ್ತೆ ಅದಾಗಿದೆ. ಪಾರಿವಾಳವನ್ನು ಪುನಃ ಹೊರಗೆ ಬಿಟ್ಟಾಗ ಅದು ಹಿಂದಿರುಗಿ ಬರಲಿಲ್ಲ. ಭೂಮಿಯಲ್ಲಿಯೇ ತಂಗಿ ಬಿಟ್ಟಿತು. ಅದರಂತೆಯೇ ಪಂಚಾಶತ್ತಮದ ದಿನದಂದು ಮೇಲುಪ್ಪರಿಗೆಯಲ್ಲಿ ಕಾದಿದ್ದು ಪ್ರಾರ್ಥಿಸಿದ, ಶಿಷ್ಯರ ಮೇಲೆ ಇಳಿದು ಬಂದ ಪವಿತ್ರಾತ್ಮನು ಈವರೆಗೂ ನಮ್ಮೊಂದಿಗೆ ಇರುವನು. ಆತನು ಹಳೆಯ ಒಡಂಬಡಿಕೆಯ ಕಾಲದಲ್ಲಿ ಬಂದು ಹೋಗುತ್ತಿದ್ದಂತೆ ಮಾಡದೆ. ಇಂದು ನಮ್ಮೊಂದಿಗೆ ನಿರಂತರವಾಗಿ ತಂಗಿರುವನು.

ದೇವಮಕ್ಕಳೇ, ಇಂದು ನಿಮ್ಮೊಂದಿಗೆ ನಿರಂತರವಾಗಿ ತಂಗಲು ಬಯಸುವ ಪವಿತ್ರಾತ್ಮನ ಸ್ವರಕ್ಕೆ ಕಿವಿಗೊಟ್ಟರೆ ಆಗ ಆತನು ಸದಾ ನಿಮ್ಮೊಂದಿಗಿರುವನು.

**ನೆನಪಿಗೆ : 'ಪೇತ್ರನು ಈ ಮಾತುಗಳನ್ನು ಇನ್ನೂ ಹೇಳುತ್ತಿರುವಾಗ ಅವನ ವಾಕ್ಯವನ್ನು ಕೇಳಿದವರೆಲ್ಲರ ಮೇಲೆ ಪವಿತ್ರಾತ್ಮ ವರವು ಇಳಿಯಿತು' (ಅ.ಕೃ 10:44).**

# ಒಂದು ದಿನ ಬರುವದು!

ಬೆಳಿಗ್ಗೆ: 2ಸಮು 16,17,18
ಸಂಜೆ: ಲೂಕ 17:20–36

**'ಆರುನೂರ ಒಂದನೆಯ ವರುಷದ ಮೊದಲನೆಯ ತಿಂಗಳಿನ ಮೊದನೆಯ ದಿನದಲ್ಲಿ ಭೂಮಿಯ ಮೇಲಿದ್ದ ನೀರು ಇಳಿದಿತ್ತು. ನೋಹನು ನಾವೆಯ ಗವಸಣಿಗೆಯನ್ನು ತೆಗೆದು ನೋಡಲಾಗಿ, ಆಹಾ, ಭೂಮಿಯು ಆರಿಹೋಗಿತ್ತು' (ಆದಿ 8:13).**

ಭೂಮಿಯಲ್ಲಿ ನೀರು ಹೆಚ್ಚುತ್ತಾ ಹೋದ ಕಾಲ ಒಂದು ಇತ್ತು. ಹಾಗೆಯೇ, ನೀರು ನಿಧಾನವಾಗಿ ಕಡಿಮೆ ಯಾಗುವ ಒಂದು ಕಾಲವೂ ಇತ್ತು. "ಪ್ರತಿಯೊಂದು ಕಾರ್ಯಕ್ಕೂ ಕಾಲವು ಕುಪ್ತವಾಗಿದೆ. ಆಕಾಶದ ಕೆಳಗೆ ನಡೆಯುವ ಒಂದೊಂದು ಕೆಲಸಕ್ಕೂ ತಕ್ಕ ಸಮಯ ಉಂಟು" (ಪ್ರಸಂಗಿ 3:1). ಹಾಗೆಯೇ ಕ್ರೈಸ್ತ ಜೀವಿತದಲ್ಲಿಯೂ ಸಹಾ ಶೋಧನೆಗಳ ಮೇಲೆ ಶೋಧನೆಗಳು ಬರುವ ಕಾಲವೂ ಇರುವದು. ನಂತರ ಅವುಗಳು ಯಾವವೂ ಇಲ್ಲದೇ ಹೋಗುವ ಕಾಲವೂ ಇರುವದು. ಇಂದು ನಿಮ್ಮ ಮುಂದೆ ಬೆಟ್ಟದಂತಿರುವ ಸಮಸ್ಯೆಗಳು ಮಂಜಿನಂತೆ ನೀಗಿ ಹೋಗುವ ಕಾಲವೂ ಉಂಟು, ಆದ್ದರಿಂದ ಕಳವಳಗೊಳ್ಳದಿರಿ. "ಒಂದು ಕಾಲ ಉಂಟು ನಿನ್ನ ನಿರೀಕ್ಷೆಯು ನಿರರ್ಥಕವಾಗದು" (ಜ್ಞಾನೋ 23:18).

ಕರ್ತನು ನೋಹನೊಡನೆ ಜಲಪ್ರಳಯದ ಕುರಿತು ತಿಳಿಸಿದನೇ ಹೊರತು, ನಂತರ ಏನು ಸಂಭವಿಸುವದು ಎಂಬುದರ ಕುರಿತು ಯಾವದನ್ನೂ ಹೇಳಲಿಲ್ಲ. ಇದು ನೋಹನ ನಂಬಿಕೆಯ ಪರೀಕ್ಷೆಯಾಗಿದ್ದಿರಬಹುದು. ನೋಹನು ಕರ್ತನನ್ನೇ ಆಶ್ರಯಿಸಿದನು. ಆಹಾರದ ಕೊರತೆಯಾಗಲಿ, ನೀರಿನ ಕೊರತೆಯಾಗಲಿ ನೋಹನಿಗೆ ಉಂಟಾಗಲಿಲ್ಲ. ಕರ್ತನು ಅದ್ಭುತವಾಗಿ ನೋಹನ ಕುಟುಂಬವನ್ನೂ ಮೃಗ ಜೀವಿಗಳನ್ನು ಪೋಷಿಸಿದನು, ಕಾಪಾಡಿದನು. "ಪ್ರಾಯದ ಸಿಂಹಗಳಾದರೋ ಹೊಟ್ಟೆಗಿಲ್ಲದೆ ಹಸಿದಾವು; ಯೆಹೋವನ ಸನ್ನಿಧಿಯಲ್ಲಿ ಬೇಡಿಕೊಳ್ಳುವವರಿಗೆ ಯಾವ ಮೇಲಿಗೂ ಕಡಿಮೆಯಿಲ್ಲ" (ಕೀರ್ತ 34:10). ಇಸ್ರಾಯೇಲ್ಯರು ನಾಲ್ವತ್ತು ವರುಷಗಳು ಅರಣ್ಯಮಾರ್ಗವಾಗಿ ನಡೆದರೂ, ಅವರಿಗೆ ಆಹಾರದ ಕೊರತೆಯಾಗಲಿ, ನೀರಿನ ಕೊರತೆಯಾಗಲಿ ಉಂಟಾಗಲಿಲ್ಲ. ಅಂದು ಮನ್ನವನ್ನೂ ಲಾವಕ್ಕಿಗಳನ್ನೂ ಬಂಡೆಯೊಳಗಿಂದ ನೀರನ್ನೂ ಕೊಟ್ಟ ಅದೇ ದೇವರು ಇಂದು ನಿಮ್ಮ ದೇವರೂ ಆಗಿರುವನು. ನಿಮ್ಮ ಎಲ್ಲಾ ಅಗತ್ಯತೆಗಳನ್ನು ಆತನು ಪೂರೈಸುವನು. "ನಾನು ನಂಬಿರುವಾತನನ್ನು ಬಲ್ಲೆನು. ಆತನು ನನ್ನ ವಶದಲ್ಲಿಟ್ಟಿರುವದನ್ನು ಆತನು ಆ ದಿನಕ್ಕಾಗಿ ಕಾಪಾಡುವದಕ್ಕೆ ಶಕ್ತನಾಗಿರುವನೆಂದು ದೃಢವಾಗಿ ನಂಬಿದ್ದೇನೆ" ಎಂದು ಜಯ ಘೋಷ ಮಾಡಿರಿ (2ತಿಮೊ 1:12).

ದೇವಮಕ್ಕಳೇ, ಇಂದು ನೀವು ನಾನಾ ರೀತಿಯ ಸಮಸ್ಯೆಗಳ ನಡುವೆ ನಡೆದು ಬರುತ್ತಿರಬಹುದು ಧೈರ್ಯಗೆಡದಿರಿ. ಕರ್ತನ ಕಡೆಗೆ ನಿಮ್ಮ ಕಣ್ಣುಗಳನ್ನೆತ್ತಿರಿ. ನಿಮ್ಮ ಇಂದಿನ ಕಷ್ಟಗಳೇ ನಿಮ್ಮ ಮುಂದಿನ ಗೆಲುವಿಗೆ ಮೆಟ್ಟಿಲಾಗಿರಲಿ ಕರ್ತನ ಸಮಯಕ್ಕಾಗಿ ತಾಳ್ಮೆಯಿಂದ ಕಾದಿರ್ರಿ. ಕರ್ತನು ನಿಶ್ಚಯವಾಗಿ ನಿಮಗೆ ಜಯವನ್ನು ನೀಡುವನು.

**ನೆನಪಿಗೆ : 'ಯೆಹೋವನನ್ನು ನಿರೀಕ್ಷಿಸಿಕೊಂಡಿರು; ದೃಢವಾಗಿರು; ನಿನ್ನ ಹೃದಯವು ಧೈರ್ಯದಿಂದಿರಲಿ; ಯೆಹೋವನನ್ನು ನಿರೀಕ್ಷಿಸಿಕೊಂಡೇ ಇರು' (ಕೀರ್ತ 27:14).**

ಏಪ್ರಿಲ್ 24

# ಸುಗಂಧ ವಾಸನೆ!

ಬೆಳಿಗ್ಗೆ: 2ಸಮು 19,20
ಸಂಜೆ: ಲೂಕ 18:1–17

**'ಅದರ ಸುವಾಸನೆಯು ಯೆಹೋವನಿಗೆ ಗಮಗಮಿಸಲು.....ಜೀವಿಗಳನ್ನೂ ಈಗ ಸಂಹರಿಸಿದಂತೆ ಇನ್ನು ಮೇಲೆ ಸಂಹರಿಸುವದಿಲ್ಲ' (ಆದಿ 8:21).**

ಜಲಪ್ರಳಯದ ಅಂತ್ಯದಲ್ಲಿ ಭೂಮಿಯ ಮೇಲೆ ನೀರು ಆರಿದ ನಂತರ ನೋಹನು ನಾವೆಯಿಂದ ಹೊರಗೆ ಬಂದಾಗ, ಅವನು ಮಾಡಿದ ಮೊದಲ ಕಾರ್ಯ ಕರ್ತನಿಗೆಂದು ಒಂದು ಯಜ್ಞವೇದಿಯನ್ನು ಕಟ್ಟಿ, ಯಜ್ಞವನ್ನರ್ಪಿಸಿ, ದೇವರನ್ನು ಆರಾಧಿಸಿದನು. ಯಜ್ಞವೇದಿಯಿಂದ ಏರಿದ ಸುವಾಸನೆಯು, ಲೋಕದ ಜನರ ಮೇಲಿದ್ದ ಕರ್ತನ ಕೋಪವನ್ನು ತಣಿಸಿತು. ಮಾತ್ರವಲ್ಲ ಮನು ಕುಲದೊಂದಿಗೆ ಒಡಂಬಡಿಕೆ ಮಾಡಿ ಮುಗಿಲುಬಿಲ್ಲನ್ನು ಆಕಾಶದಲ್ಲಿ ಇಟ್ಟನು. ಅದು ದೇವರಿಗೂ ಭೂಮಿಗೂ ಉಂಟಾದ ಒಡಂಬಡಿಕೆಗೆ ಗುರುತಾಗಿರುವದು. ಆ ಬಿಲ್ಲು ಮೇಘಗಳಲ್ಲಿ ಕಾಣಿಸುವಾಗೆಲ್ಲಾ ಇನ್ನು ಮೇಲೆ ನೀರಿನಿಂದ ಪ್ರಪಂಚವನ್ನು ನಾಶಮಾಡುವದಿಲ್ಲ ಎಂಬ ನನ್ನ ಒಡಂಬಡಿಕೆಯನ್ನು ಜ್ಞಾಪಕ ಮಾಡಿ ಕೊಳ್ಳುವೆನು ಅಂದನು (ಆದಿ 9:13–16).

ನಾವೆಲ್ಲರೂ, ಪಾಪಮಾಡಿ, ದೇವಮಹಿಮೆಯನ್ನು ಕಳೆದುಕೊಂಡು, ದೇವರಿಗೆ ವೈರಿಗಳಾದೆವು (ರೋಮಾ 5:10). ನೋಹನ ಕಾಲದಲ್ಲಿ ಬಂದಂಥ ಕೇಡು ನಮ್ಮ ಕಾಲದಲ್ಲಿ ಬರಬಾರದೆಂದು. ಯೇಸುಕ್ರಿಸ್ತನು ಕಲ್ವಾರಿ ಶಿಲುಬೆಯಲ್ಲಿ ತನ್ನನ್ನೇ ಯಜ್ಞವಾಗಿ ಅರ್ಪಿಸಿದನು. ನೋಹನ ಕಾಲದಲ್ಲಿ ಅರ್ಪಿಸಿದ ಯಜ್ಞದ ವಾಸನೆ ಕರ್ತನ ಕೋಪವನ್ನು ತಣಿಸಿದಂತೆ, ಕಲ್ವಾರಿಯಲ್ಲಿ ಕ್ರಿಸ್ತನು ಯಜ್ಞಾರ್ಪಣೆಯನ್ನು ಅಂಗೀಕರಿಸಿ ಕರ್ತನು ಯೇಸುಕ್ರಿಸ್ತನ ಮೂಲಕ ಮಾನವಕುಲಕ್ಕೆ ರಕ್ಷಣೆಯನ್ನು ಅನುಗ್ರಹಿಸಿರುವನು. ಪಾಪಮಾಡಿದವನು ಕರ್ತನಿಗೆ ಸುಗಂಧ ವಾಸನೆಯಾಗಿ ಮಾರ್ಪಡಬೇಕಾದರೆ ರಕ್ಷಕನಾದ ಯೇಸುಕ್ರಿಸ್ತನ ಕಡೆಗೆ ನೋಡಲೇಬೇಕು. ಮಾತ್ರವಲ್ಲ, ಯೇಸುಕ್ರಿಸ್ತನು ಹೇಗೆ ತನ್ನನ್ನು ದೇವರಿಗೆಂದು ಒಪ್ಪಿಸಿಕೊಟ್ಟನೋ ಹಾಗೆಯೇ ನೀವೂ ಸಹಾ ಸಂಪೂರ್ಣವಾಗಿ ನಿಮ್ಮನ್ನು ಕರ್ತನಿಗೆ ಒಪ್ಪಿಸಿಕೊಡಬೇಕು. "ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿರುವ ಸಜೀವಯಜ್ಞವಾಗಿ ಅರ್ಪಿಸಿರಿ" ಎಂದು ಸತ್ಯವೇದ ಹೇಳುತ್ತದೆ (ರೋಮಾ 12:1).

ದೇವಮಕ್ಕಳೇ, ನೀವು ಕ್ರಿಸ್ತನಿಗೆಂದು ಪ್ರತ್ಯೇಕಿಸಲ್ಪಟ್ಟ ಜನಾಂಗವಾಗಿರುವಿರಿ. ಈ ಲೋಕದ ಮಲಿನತ್ವಗಳಿಗೆ ದೂರವಾಗಿರ್ರಿ. "ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿ ಕೊಂಡವನಾಗಿದ್ದೇನೆ. ಇನ್ನು ಜೀವಿಸುವವನು ನಾನಲ್ಲ ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ ಈಗ ಶರೀರದಲ್ಲಿರುವ ನಾನು ಜೀವಿಸುವದು ಹೇಗಂದರೆ ದೇವ ಕುಮಾರನ ಮೇಲಣ ನಂಬಿಕೆಯಲ್ಲಿಯೇ ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು" (ಗಲಾತ್ಯ 2:20). ನನ್ನಲ್ಲಿ ಜೀವಿಸುವವನು 'ಕ್ರಿಸ್ತನೆ' ಸಂಪೂರ್ಣವಾಗಿ ನಿಮ್ಮನ್ನು ಕರ್ತನಿಗೆಂದು ಒಪ್ಪಿಸಿಕೊಡಿರಿ.

**ನೆನಪಪಿಗೆ : 'ಅದನ್ನೆಲ್ಲಾ ಯಜ್ಞವೇದಿಯ ಮೇಲೆ ಯೆಹೋವನಿಗೆ ಸರ್ವಾಂಗ ಹೋಮವಾಗಿ ಸಮರ್ಪಿಸಬೇಕು....ಸುಗಂಧ ಹೋಮವಾಗಿದೆ' (ವಿಮೋ 29:18).**

# ಬಿತ್ತನೆಯೂ ಕೊಯಿಲೂ!



**'ಭೂಮಿಯು ಇರುವ ತನಕ ಬಿತ್ತನೆಯೂ ಕೊಯಿಲೂ, ಚಳಿಯೂ ಸೆಕೆಯೂ, ಬೇಸಿಗೆಕಾಲವೂ, ಹಿಮಕಾಲವೂ, ಹಗಲೂ ಇರುಳೂ ಇವುಗಳ ಕ್ರಮ ತಪ್ಪುವದೇ ಇಲ್ಲ ಅಂದುಕೊಂಡನು' (ಆದಿ 8:22).**

ಬಿತ್ತನೆಯೂ, ಕೊಯಿಲೂ ತಪ್ಪುವದೇ ಇಲ್ಲ ಇದು ದೇವರ ನಿಯಮ ಮನುಷ್ಯನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯುವನು.ಇಸಾಕನು ಬೀಜವನ್ನು ಬಿತ್ತಿ ಅದೇ ವರ್ಷದಲ್ಲಿ ನೂರರಷ್ಟು ಬೆಳೆಯನ್ನು ಹೊಂದಿದನು (ಆದಿ 26:12).

ಈ ಕುರಿತು ದೇವರ ವಾಕ್ಯ ಹೀಗೆ ಹೇಳುತ್ತದೆ "ಅಧರ್ಮವನ್ನು ಉತ್ತು ಕೇಡನ್ನು ಬಿತ್ತುವವರು ಕೇಡನ್ನೇ ಕೊಯ್ಯುವರು" (ಯೋಬ 4:8). "ಯಾರು ಮನುಷ್ಯನ ರಕ್ತವನ್ನು ಸುರಿಸುತ್ತಾರೋ ಅವರ ರಕ್ತವನ್ನು ಮನುಷ್ಯರೇ ಸುರಿಸುವರು" (ಆದಿ 9:6). "ಅವನು ಅಗಿದು ಅಗಿದು ಗುಂಡಿಯನ್ನು ತೋಡಿ ಅದರೊಳಗೆ ತಾನೇ ಬಿದ್ದುಹೋದನಲ್ಲಾ (ಕೀರ್ತ 7:15). ತನ್ನ ಶರೀರಭಾವವನ್ನು ಕುರಿತು ಬಿತ್ತುವವನು ಆ ಭಾವದಿಂದ ನಾಶನವನ್ನು ಕೊಯ್ಯುತ್ತಾನೆ, ಆತ್ಮವನ್ನು ಕುರಿತು ಬಿತ್ತುವವನು ಆತ್ಮನಿಂದ ನಿತ್ಯಜೀವವನ್ನು ಕೊಯ್ಯುವನು (ಗಲಾ 6:8). ನೀವು ಯಾವಾಗಲೂ ಒಳ್ಳೆಯ ಬೀಜಗಳನ್ನೇ ಬಿತ್ತಿರಿ. "ನಿನ್ನ ಆಹಾರವನ್ನು ನೀರಿನ ಮೇಲೆ ಚೆಲ್ಲು, ಬಹು ದಿನದ ಮೇಲೆ ಅದು ನಿನಗೆ ಸಿಕ್ಕುವದು" (ಪ್ರಸ 11:1).

ಇನ್ನೊಂದು ಮುಖ್ಯವಾದ ಬೀಜ ಕಣ್ಣೀರಿನ ಬಿತ್ತನೆ. ದುಃಖಿಸುತ್ತಾ ಬೀಜವನ್ನು ತೆಗೆದುಕೊಂಡು ಹೋಗುವವನು ಹರ್ಷಿಸುತ್ತಾ ಸಿವುಡುಗಳನ್ನು ಹೊತ್ತುಕೊಂಡು ಬರುವನು. "ಅಳುತ್ತಾ ಬಿತ್ತುವವನು ಹಾಡುತ್ತಾ ಕೊಯ್ಯುವನು" (ಕೀರ್ತ 126:5,6). ಯೇಸುಕ್ರಿಸ್ತನು ಲಾಜರನ ಸಮಾಧಿಯ ಬಳಿ ಕಣ್ಣೀರು ಸುರಿಸಿದನು ಆ ಕಣ್ಣೀರಿನ ಬೀಜ, ಲಾಜರನನ್ನು ಜೀವಸಹಿತ ಎಬ್ಬಿಸಿತು (ಯೋಹಾ 11:35). ಕರ್ತನಿಗೆಂದು ಕೊಡುವ ಕಾಣಿಕೆಯೂ ಒಂದು ಬೀಜದಂತಿರುವದು. "ಸ್ವಲ್ಪವಾಗಿ ಬಿತ್ತುವವನು ಸ್ವಲ್ಪವಾಗಿ ಕೊಯ್ಯುವನು, ಹೆಚ್ಚಾಗಿ ಬಿತ್ತುವವನು ಹೆಚ್ಚಾಗಿ ಕೊಯ್ಯುವನು ಎಂದು ತಿಳುಕೊಳ್ಳಿರಿ ಪ್ರತಿಯೊಬ್ಬನು ತನ್ನ ತನ್ನ ಹೃದಯದಲ್ಲಿ ನಿರ್ಧರಿಸಿಕೊಂಡ ಪ್ರಕಾರವಾಗಿ ಕೊಡಲಿ. ದುಃಖದಿಂದಾಗಲಿ ಬಲಾತ್ಕಾರದಿಂದಾಗಲಿ ಯಾರೂ ಕೊಡಬಾರದು ಯಾಕಂದರೆ ಸಂತೋಷವಾಗಿ ಕೊಡುವವನ ಮೇಲೆ ದೇವರಿಗೆ ಪ್ರೀತಿಯಿದೆ" (2ಕೊರಿ 9:6,7).

ದೇವಮಕ್ಕಳೇ, ತಂದೆಯಾದ ದೇವರು ಕ್ರಿಸ್ತನನ್ನೇ ಬಿತ್ತಿದನು ಕ್ರಿಸ್ತನು ತನ್ನ ರಕ್ತವನ್ನು ಬಿತ್ತಿದನು. ಪವಿತ್ರಾತ್ಮನೇ ಅಭಿಷೇಕವನ್ನು ಬೀಜವಾಗಿ ಬಿತ್ತಿದನು. ಕರ್ತನು ನೀವು ಆತನ ಬರುವಿಕೆಯ ದಿನದಲ್ಲಿ ರೂಪಾಂತರಗೊಳ್ಳುವದಕ್ಕಾಗಿ, ಮಹಿಮೆಯ ಬೀಜಗಳನ್ನು ಬಿತ್ತಿರುವನು. ಎಲ್ಲರೂ ರಕ್ಷಣೆಯನ್ನು ಹೊಂದಿ ಪರಲೋಕ ರಾಜ್ಯದಲ್ಲಿ ಸೇರಬೇಕೆಂಬುದೇ ಕರ್ತನ ಚಿತ್ತವಾಗಿದೆ. ಆದ್ದರಿಂದ ನಾವು ಸುವಾರ್ತೆ ಎಂಬ ಬೀಜಗಳನ್ನು ಬಿತ್ತಿ ಕರ್ತನಿಗಾಗಿ ಆತ್ಮಗಳನ್ನು ಆದಾಯ ಮಾಡುವವರಾಗೋಣ.

**ನೆನಪಿಗೆ : 'ಸಮಾಧಾನಪಡಿಸುವವರು, ಸಮಾಧಾನವೆಂಬ ಬೀಜವನ್ನು ಬಿತ್ತಿ ನೀತಿಯೆಂಬ ಫಲವನ್ನು ಕೊಯ್ಯುವರು' (ಯಾಕೋಬ 3:18)**

ಏಪ್ರಿಲ್
26

# ಮುಗಿಲು ಬಿಲ್ಲು!

ಬೆಳಿಗ್ಗೆ: 2ಸಮು 23,24
ಸಂಜೆ: ಲೂಕ 19:1–27

**'ನಾನು ನಿಮ್ಮನ್ನೂ ನಿಮ್ಮ ಸಂಗಡ ಇರುವ ಸಮಸ್ತಜೀವರಾಶಿಗಳನ್ನೂ ಕುರಿತು ಎಲ್ಲಾ ತಲತಲಾಂತರಗಳಲ್ಲಿಯೂ ಮಾಡುವ ಈ ಪ್ರತಿಜ್ಞೆಗೆ ಮೇಘಗಳಲ್ಲಿ ನಾನಿಟ್ಟಿರುವ ಮುಗಿಲ್ಲುಬಿಲ್ಲೇ ಗುರುತಾಗಿರುವದು' (ಆದಿ 9:12).**

ಕರ್ತನ ಸೃಷ್ಟಿಯಲ್ಲಿ "ಮುಗಿಲು ಬಿಲ್ಲು" ಬಹು ಸುಂದರವಾದದ್ದು. ಅದರಲ್ಲಿ ಏಳು ಬಣ್ಣಗಳು ಒಂದಾಗಿ ಸೇರಿರುವದು. ಅದರ ಹಿಂದೆ ಒಂದು ಪಕ್ಕದಲ್ಲಿ ದೇವರ ನ್ಯಾಯತೀರ್ಪು, ಅನೇಕಾನೇಕ ಜನರ ಮರಣವು ಅಡಗಿರುವದು ಮತ್ತೊಂದು ಪಕ್ಕದಲ್ಲಿ ನೋಹನ ಕುಟುಂಬದವರ ಮೇಲೆ ಕರ್ತನು ಇಟ್ಟಿದ್ದ ಪ್ರೀತಿ, ಅಕ್ಕರೆ, ರಕ್ಷಣೆ, ಕೃಪೆಯೂ ಉಂಟು.

ಮುಗಿಲು ಬಿಲ್ಲನ್ನು ದೃಷ್ಟಿಸಿ ನೋಡಿ ಇನ್ನು ಮನುಷ್ಯರನ್ನು ಜಲಪ್ರಳಯದಿಂದ ನಾಶಗೊಳಿಸುವದಿಲ್ಲ ಎಂದು ಕರ್ತನು ಮಾಡಿದ ಒಡಂಬಡಿಕೆಯನ್ನು ಅದು ಜ್ಞಾಪಕಕ್ಕೆ ತರುವದು. ಹಾಗೆಯೇ, ಕರ್ತನು ನೋಹನ ಕಾಲ ಮೊದಲುಗೊಂಡು ಇದುವರೆಗೂ ಜಲಪ್ರಳಯದಿಂದ ಪ್ರಪಂಚವನ್ನು ನಾಶಪಡಿಸದೇ ಕಾಪಾಡುತ್ತಾ ಬಂದಿರುವನು ಆತನು ನಂಬಿಗಸ್ತನು "ದೇವರು ಮನುಷ್ಯನಂತೆ ಎರಡು ಮಾತಿನವನಲ್ಲ; ಮಾನವನಂತೆ ಮನಸ್ಸನ್ನು ಬೇರೆ ಮಾಡಿ ಕೊಳ್ಳುವವನಲ್ಲ (ಅರಣ್ಯ 23:19). ಆತನ ವಾಗ್ದಾನಗಳೆಲ್ಲಾ ಕ್ರಿಸ್ತನಲ್ಲಿ ನೆರವೇರುವದು.

ಕರ್ತನು ನೋಹನೊಂದಿಗೆ ಮುಗಿಲು ಬಿಲ್ಲನ್ನು ಕುರಿತು ಮಾತಾಡುವಾಗ ನಾನಿಟ್ಟಿರುವ ಬಿಲ್ಲು ಎಂದು ಹೇಳುತ್ತಾನೆ. 'ಬಿಲ್ಲು' ಎಂಬುದು, ಒಂದು ಯುದ್ಧಾಯುಧ. ಹಿಂದಿನ ಕಾಲದಲ್ಲಿ ಬಿಲ್ಲಿನ ಪಡೆಯನ್ನು ಇಟ್ಟಿರುತ್ತಿದ್ದರು ಇಲ್ಲಿ ಬಿಲ್ಲು ಯಾರ ಕಡೆಗೆ ಗುರಿ ಇಟ್ಟಿರುವದು? ಎಂದು ನೋಡುವಿರಾದರೆ, ಅದು ಪರಲೋಕವನ್ನು ದೃಷ್ಟಿಸುತ್ತಿರುವದು. ಆದಿಕಾಂಡ 9ನೇ ಅಧ್ಯಾಯಕ್ಕೆ ಬರುವಾಗ, ಅಲ್ಲಿ ದೇವರ ನ್ಯಾಯ ತೀರ್ಪನ್ನು, ಆತನ ನಿರಂತರವಾದ ಕೃಪೆ ಜಯಿಸಿತು. ಕೃಪೆಗೂ, ದಯೆಗೂ, ಒಡೆಯನಾದ ಯೇಸುಕ್ರಿಸ್ತನನ್ನು ದೃಷ್ಟಿಸುತ್ತಾ ಬಿಲ್ಲು ಗುರಿ ಇಟ್ಟಿರುವದು. ಮಾತ್ರವಲ್ಲ ಮನುಷ್ಯನ ಅಕ್ರಮಗಳು ದೇವರ ಕೋಪಾಗ್ನಿ ಕುರಿಮರಿಯಾದಾತನ ಮೇಲೆ ಬಂದಿತು ಯೇಸುಕ್ರಿಸ್ತನು ಮಾನವರೆಲ್ಲರ ಅಕ್ರಮಗಳನ್ನು, ದೋಷಗಳನ್ನು ತನ್ನ ಮೇಲೆ ಹೊತ್ತುಕೊಂಡು ಅವರ ಆತ್ಮಗಳ ರಕ್ಷಣಾರ್ಥವಾಗಿ ಕಲ್ವಾರಿ ಶಿಲುಬೆಯಲ್ಲಿ ಯಜ್ಞಾರ್ಪಿತನಾದನು.

ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು (ಯೋಹಾ 3:16). ಪ್ರಿಯರೇ ಇಂಥಹ ಪ್ರೀತಿಭರಿತನಾದ ಕ್ರಿಸ್ತೇಸುವನ್ನು ನಂಬುವಿರಾ? ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸುವಿರಾ?

**ನೆನಪಿಗೆ : 'ಹಿಂಸೆಯ ನ್ಯಾಯದಿಂದ ಕೊಲ್ಲಲ್ಪಟ್ಟನು, ಆಹಾ, ಇವನು ಜೀವಲೋಕದಿಂದ ಕೀಳಲ್ಪಟ್ಟಿದ್ದಾನೆ, ನಮ್ಮ ಜನಗಳ ದ್ರೋಹಗಳ ದೆಸೆಯಿಂದ ಈ ಪೆಟ್ಟು ಅವನ ಮೇಲೆ ಬಿತ್ತಲ್ಲಾ....' (ಯೆಶಾ 53:8).**

ಏಪ್ರಿಲ್ 27

# ಒಡಂಬಡಿಕೆಯ ದೇವರು!

ಬೆಳಿಗ್ಗೆ: 1ಅರಸು 1,2
ಸಂಜೆ: ಲೂಕ 19:28-48

**'ನಾನು ನಿಮ್ಮನ್ನೂ ನಿಮ್ಮ ಸಂತತಿಯವರನ್ನೂ ನಿಮ್ಮ ಕೂಡ ನಾವೆಯಿಂದ ಹೊರಟುಬಂದ ಪಶುಪಕ್ಷಿಮೃಗಾದಿ ಸಕಲ ಭೂಜಂತುಗಳನ್ನೂ ಕುರಿತು ಸ್ಥಿರಪ್ರತಿಜ್ಞೆ ಮಾಡುತ್ತೇನೆ' (ಆದಿ 9:9,10).**

ಪ್ರಪಂಚದಲ್ಲಿರುವ ಮನುಷ್ಯರೊಂದಿಗೆ, ದೇವಾದಿ ದೇವನು ಮಾಡಿದ ಮೊದಲ ಒಡಂಬಡಿಕೆ ಇದಾಗಿದೆ. ನೋಹನು ಅವನ ಕುಟುಂಬದವರೂ, ಕರ್ತನೊಂದಿಗೆ ಒಡಂಬಡಿಕೆ ಮಾಡಿಕೊಂಡರು. ಕರ್ತನು ಒಡಂಬಡಿಕೆಯನ್ನು ಕಾಯ್ದುಕೊಳ್ಳುವ ಸತ್ಯವಂತ ದೇವನಾಗಿರುವನು. ಆತನು ವಾಗ್ದಾನಗಳ ದೇವರು ನೀವು ಕರ್ತನ ಕೃಪೆಯನ್ನೂ, ವಾಗ್ದಾನಗಳನ್ನೂ, ಒಡಂಬಡಿಕೆಯನ್ನೂ ಕಾಪಾಡಿಕೊಂಡು ಬರುವಿರಾದರೆ, ದೇವರ ಮಹಿಮೆಯನ್ನು ಕಾಣುವಿರಿ.

ಮುಗಿಲುಬಿಲ್ಲು ಭೂಮಿಯಲ್ಲಿ ಮಾತ್ರವಲ್ಲ, ಪರಲೋಕದಲ್ಲಿಯೂ, ಒಡಂಬಡಿಕೆಯಾಗಿ ಕಾಣಲ್ಪಡುವದು. ಅಪೊ.ಯೋಹಾನನು, ಪತ್ಮೊಸ್ ದ್ವೀಪದಲ್ಲಿ ಪರಲೋಕದ ಸಿಂಹಾಸನವನ್ನು ನೋಡಿದನು. ಆ ದರ್ಶನವನ್ನು ಹೀಗೆ ವಿವರಿಸಿರುವನು "ಒಂದು ಸಿಂಹಾಸನವಿತ್ತು; ಸಿಂಹಾಸನದ ಮೇಲೆ ಒಬ್ಬನು ಕೂತಿದ್ದನು. ಕೂತಿದ್ದವನು ಕಣ್ಣಿಗೆ ಸೂರ್ಯಕಾಂತ ಪದ್ಮರಾಗ ಮಣಿಗಳಂತೆ ಕಾಣಿಸುತ್ತಿದ್ದನು. ಸಿಂಹಾಸನದ ಸುತ್ತಲು ಪಚ್ಚೆಯಂತೆ ತೋರುತ್ತಿದ್ದ ಮುಗಿಲುಬಿಲ್ಲು ಇತ್ತು" ಎಂದು (ಪ್ರಕ 4:2,3).

ಅಂದು ನೋಹನೊಂದಿಗೆ ಒಡಂಬಡಿಕೆ ಮಾಡಿಕೊಂಡವನು, ಈಗ ಆತನ ಮಗನಾದ ಯೇಸುಕ್ರಿಸ್ತನ ಮೂಲಕವಾಗಿ ನಮ್ಮೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವನು. ಆತನೇ ಲೋಕದ ಪಾಪಗಳನ್ನೂ, ಅಕ್ರಮಗಳನ್ನೂ, ಅದರಿಂದ ಬರುವ ನ್ಯಾಯತೀರ್ಪನ್ನು ಹೊತ್ತು ತೀರಿಸಿದ ದೇವಕುರಿಮರಿ. ಆತನ ಒಡಂಬಡಿಕೆ ಏನಾಗಿದೆ? ಬೆಟ್ಟಗಳು ಸ್ಥಳವನ್ನು ಬಿಟ್ಟು ಹೋದಾವು, ಗುಡ್ಡಗಳು ಕದಲಿಯಾವು, ಆದರೆ ನನ್ನ ಕೃಪೆಯು ನಿನ್ನನ್ನು ಬಿಟ್ಟು ಹೋಗದು, ಸಮಾಧಾನದ ನನ್ನ ಒಪ್ಪಂದವು ಕದಲದು ಎಂದು ನಿನ್ನನ್ನು ಕರುಣಿಸುವ ಯೆಹೋವನು ಅನ್ನುತ್ತಾನೆ" ಎಂಬುದೇ (ಯೆಶಾ 54:10). ಆದ್ದರಿಂದಲೇ ಅರಸನಾದ ದಾವೀದನು. "ನಿನ್ನ ಒಡಂಬಡಿಕೆಯನ್ನು ಲಕ್ಷ್ಯಕ್ಕೆ ತಂದುಕೋ. ದೇಶದ ಅಂಧಕಾರಸ್ಥಾನಗಳಲ್ಲಿ ಬಲಾತ್ಕಾರವು ತುಂಬಿ ವಾಸಿಸುತ್ತದಲ್ಲಾ" ಎಂದು ಸಹಾಯಕ್ಕಾಗಿ ಪ್ರಾರ್ಥಿಸುತ್ತಾನೆ (ಕೀರ್ತ 74:20).

ದೇವಮಕ್ಕಳೇ, ಒಡಂಬಡಿಕೆ ಎಂಬುದು ಇಬ್ಬರು ಸೇರಿ ಮಾಡಿಕೊಳ್ಳುವದಾಗಿದೆ. ಇನ್ನು ಜಲಪ್ರಳಯವನ್ನು ಬರಗೊಡಿಸುವದಿಲ್ಲ ಭೂಮಿಯನ್ನು ನಾಶಮಾಡುವದಿಲ್ಲ ಎಂದು ಕರ್ತನು ವಾಗ್ದಾನ ಮಾಡಿರುವಾಗ, ನೀವು ನಿಮ್ಮ ಕಡೆಯಿಂದ ಮಾಡಬೇಕಾದ ಒಡಂಬಡಿಕೆ ಉಂಟು "ನಾನೂ ನನ್ನ ಮನೆಯವರು ಯೆಹೋವನನ್ನೇ ಸೇವಿಸುವೆವು" ಎಂದು ಯೆಹೋಶುವನಂತೆ ಒಡಂಬಡಿಕೆ ಮಾಡಿಕೊಳ್ಳಿರಿ.

**ನೆನಪಿಗೆ :'ಭೂಮಂಡಲನಿವಾಸಿಗಳು ಮಿಡತೆಗಳಂತೆ ಸಣ್ಣಗೆ ಕಾಣಿಸುವಷ್ಟು ಉನ್ನತವಾದ ಆಕಾಶದಲ್ಲಿ ಆತನು ಆಸೀನನಾಗಿದ್ದಾನೆ; ಆಕಾಶಮಂಡಲವನ್ನು ನವರುಬಟ್ಟೆಯಂತೆ ಹರಡಿ ನಿವಾಸದ ಗುಡಾರದಂತೆ ಎತ್ತಿಕಟ್ಟಿದ್ದಾನೆ' (ಯೆಶಾ 40:22)**

ಏಪ್ರಿಲ್ 28

# ನಿಮ್ಮ ಬಗ್ಗೆ ಭಯ!

ಬೆಳಿಗ್ಗೆ: 1ಅರಸು 3,4,5
ಸಂಜೆ: ಲೂಕ 20:1–19

**'ಭೂಮಿಯ ಮೇಲಿರುವ ಎಲ್ಲಾ ಮೃಗಗಳೂ ಆಕಾಶದ ಎಲ್ಲಾ ಪಕ್ಷಿಗಳೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಗಳೂ ಸಮುದ್ರದ ಮೀನುಗಳೂ ನಿಮಗೆ ಬೆದರಿ ಅಂಜಿಕೊಳ್ಳುವವು' (ಆದಿ 9:2).**

ದೇವರು ನೋಹನಿಗೂ ಅವನ ಕುಟುಂಬಕ್ಕೂ ಕೊಟ್ಟ ವಾಗ್ದಾನಗಳನ್ನು ಇಂದು ನಿಮಗೂ ನೀಡಿರುವನು. ಭೂಮಿಯಲ್ಲಿ ನಡೆದಾಡುವದೆಲ್ಲವನ್ನೂ ನಿಮ್ಮ ಸ್ವಾಧೀನಕ್ಕೆ ಕೊಟ್ಟಿರುವನು. ನೀವು ಯಾವದೇ ಮೃಗಕ್ಕೂ ಭಯಪಡಬೇಕಾದ ಅವಶ್ಯಕತೆ ಇಲ್ಲ. ಆದರೆ ಅವುಗಳೇ ನಿಮ್ಮನ್ನು ನೋಡಿ ಭಯಪಡುವವು.

ದಾವೀದನು ಸಿಂಹವನ್ನೂ ಕರಡಿಯನ್ನೂ ಗೊಲಿಯಾತನನ್ನೂ, ಫಿಲಿಷ್ಟಿಯರನ್ನು ಎದುರಿಸಿ ನಿಂತ ರಹಸ್ಯವಾದರೂ ಏನು? ದಾವೀದನು ಹೇಳುತ್ತಾನೆ "ನಾನು ಯೆಹೋವನ ಸನ್ನಿಧಿಯಲ್ಲಿ ಬೇಡಿಕೊಳ್ಳಲು ಆತನು ಸದುತ್ತರವನ್ನು ಕೊಟ್ಟು ಎಲ್ಲಾ ಭೀತಿಯಿಂದ ನನ್ನನ್ನು ತಪ್ಪಿಸಿದನು" ಎಂದು (ಕೀರ್ತ 34:4). ಶಿಷ್ಟನು ಸಿಂಹದಂತೆ ಧೈರ್ಯದಿಂದಿರುವನು (ಜ್ಞಾನೋ 28:1). ಹಾವು ನಿಮ್ಮನ್ನು ನೋಡಿ ಬುಸುಗುಟ್ಟುವದೆಂದರೆ ನೀವು ಅದನ್ನು ಹೊಡೆಯುವಿರೆಂಬ ಭಯದಿಂದ ಬುಸುಗುಟ್ಟುವದು. ಮನುಷ್ಯನು ಆನೆ, ಸಿಂಹ ಕರಡಿ, ಹುಲಿಗಳನ್ನು ಪಳಗಿಸಿ, ತನ್ನ ಕಾರ್ಯಗಳಿಗಾಗಿ ಉಪಯೋಗಿಸಿಕೊಳ್ಳುವನು.

ಒಬ್ಬನು ಪವಿತ್ರಾತ್ಮನಿಂದ ತುಂಬಿರುವದಾದರೆ, ಆ ಬಲದಿಂದ ಮೃಗಗಳನ್ನು ಮಾತ್ರವಲ್ಲ ಅಶುದ್ಧಾತ್ಮಗಳನ್ನೂ ಓಡಿಸಲು ಸಾಧ್ಯ. ಹಾವುಗಳನ್ನೂ ಚೇಳುಗಳನ್ನೂ ತುಳಿಯುವ ಅಧಿಕಾರವನ್ನು ಕರ್ತನು ನಿಮಗೆ ಕೊಟ್ಟಿರುವನು. ಸಿಂಹಸರ್ಪಗಳ ಮೇಲೆ ನಡೆಯುವಿ, ಪ್ರಾಯದ ಸಿಂಹವನ್ನೂ ಘಟಸರ್ಪವನ್ನೂ ತುಳಿದುಬಿಡುವಿ" (ಕೀರ್ತ 91:13) ಎಂದು ದೇವರ ವಾಕ್ಯ ಹೇಳುತ್ತದೆ. ಸ್ವಾಭಾವಿಕವಾಗಿಯೇ ದೇವರು ಮನುಷ್ಯನಿಗೆ ಕೊಟ್ಟಿರುವ ಅಧಿಕಾರ,ಶಕ್ತಿ, ಆಳ್ವಿಕೆಯೊಂದಿಗೆ ಪವಿತ್ರಾತ್ಮನ ಶಕ್ತಿಯೂ ಸೇರಿ ಉಪಯೋಗಿಸಲ್ಪಡುವಾಗ, ಕರ್ತನಿಗಾಗಿ ಇನ್ನೂ ಮಹಿಮೆಯಾದ ಕಾರ್ಯಗಳನ್ನು ಮಾಡಲು ಸಾಧ್ಯ. "ಲೋಕದಲ್ಲಿರುವವನಿಗಿಂತ ನಿಮ್ಮೊಳಗಿರುವವನು ಹೆಚ್ಚಿನವನಾಗಿರುವನು' (1ಯೋಹಾ 4:4).

ದೇವಮಕ್ಕಳೇ, ಪವಿತ್ರಾತ್ಮನ ಅಭಿಷೇಕಕ್ಕಾಗಿ ಕರ್ತನಲ್ಲಿ ಪ್ರಾರ್ಥಿಸಿರಿ. ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಅಧಿಕಾರವುಳ್ಳ ಕರ್ತನು ನಮಗೆ ಸೈತಾನನನ್ನು ಎದುರಿಸಲಿ ಜಯದ ಜೀವಿತವನ್ನು ನಡೆಸಲು ಅಧಿಕಾರಗಳನ್ನು ಕೊಟ್ಟಿದ್ದಾನೆ. "ನೋಡಿರಿ, ಹಾವುಗಳನ್ನೂ ಚೇಳುಗಳನ್ನೂ ವೈರಿಯ ಸಮಸ್ತ ಬಲವನ್ನು ತುಳಿಯುವದಕ್ಕೆ ನಿಮಗೆ ಅಧಿಕಾರ ಕೊಟ್ಟಿದ್ದೇನೆ, ಯಾವುದೂ ನಿಮಗೆ ಕೇಡು ಮಾಡುವದೇ ಇಲ್ಲ" (ಲೂಕ 10:19) ರಲ್ಲಿ ಕರ್ತನು ಕೊಟ್ಟಿರುವ ಅಧಿಕಾರವನ್ನು ಉಪಯೋಗಿಸಿ. ಜಯದ ಜೀವಿತ ನಡೆಸಿರಿ.

**ನೆನಪಿಗೆ : 'ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸಭಾಷೆಗಳಿಂದ ಮಾತಾಡುವರು; ಹಾವುಗಳನ್ನು ಎತ್ತುವರು' (ಮಾರ್ಕ 16:17).**

# ಶಾಖಾಹಾರ!



**'ಭೂಮಿಯ ಮೇಲೆ ತಿರುಗುವ ಎಲ್ಲಾ ಜೀವಜಂತುಗಳೂ ನಿಮಗೆ ಆಹಾರವಾಗಿರುವವು. ನಾನು ನಿಮ್ಮ ಆಹಾರಕ್ಕೆ ಪೈರುಗಳನ್ನು ಕೊಟ್ಟಂತೆ ಇವುಗಳನ್ನೂ ಕೊಟ್ಟಿದ್ದೇನೆ' (ಆದಿ 9:3).**

ಕರ್ತನು, ಆದಾಮ ಹವ್ವಳನ್ನು ಸೃಷ್ಟಿಸಿದಾಗ, ಅವರಿಗೆ ಕಾಯಿಪಲ್ಯ, ಹಣ್ಣುಗಳನ್ನು ಆಹಾರವಾಗಿ ಕೊಟ್ಟನು. ಆದರೆ, ನೋಹನ ಕಾಲದ ನಂತರ ಮಾನವ ಕುಲಕ್ಕೆ ಶಾಖಾಹಾರ ಅಂದರೆ ಮಾಂಸದ ಊಟವನ್ನೂ ಸೇರಿಸಿ ಆಹಾರವಾಗಿ ಕೊಟ್ಟನು (ಆದಿ 9:3). ಮನುಷ್ಯನು ತನಗೆ ಇಷ್ಟವಾದ ಆಹಾರವನ್ನು ಬೇಕಾದಷ್ಟು ತಿನ್ನುವ ಕೃಪೆಯನ್ನು ನೀಡಿರುವನು.

ಒಮ್ಮೆ ಮೋಶೆಗೂ, ಆರೋನನಿಗೂ ವಿರೋಧವಾಗಿ ಇಸ್ರಾಯೇಲ್ಯರು ಗುಣುಗುಟ್ಟುತ್ತಾ ಈ ಅರಣ್ಯದಲ್ಲಿ ಯಾರು ನಮಗೆ ಮಾಂಸಾಹಾರವನ್ನು ಕೊಡುವರು? ಸಸ್ಯಹಾರ ತಿಂದು ಬೇಸರವಾಗಿದೆ ಎಂದು ಹೇಳಿದಾಗ. ಕರ್ತನು ಸಾಯಂಕಾಲದಲ್ಲಿ ಗಾಳಿ ಬೀಸುವಂತೆ ಮಾಡಲು ಇಸ್ರಾಯೇಲ್ಯರ ಪಾಳೆಯವನ್ನು ಲಾವಕ್ಕಿಗಳು ಬಂದು ಮುಚ್ಚಿಕೊಂಡವು ಅವರು ಹೊಟ್ಟೆತುಂಬಿ ವಾಕರಿಕೆ ಬರುವಷ್ಟು ಮಾಂಸಾಹಾರವನ್ನು ಊಟಮಾಡಿದರು.

ಎಲೀಯನನ್ನು ಕರ್ತನು ಮೂರು ರೀತಿಯಲ್ಲಿ ಪೋಷಿಸಿದನು. 1.ಕರ್ತನು ಕಾಗೆಗಳ ಮೂಲಕ ರೊಟ್ಟಿಯನ್ನೂ ಮಾಂಸವನ್ನು ಕಳುಹಿಸಿದನು (1ಅರ 17:6). 2.ಕರ್ತನು ಚಾರೆಪ್ತಾ ಊರಿನ ವಿಧವೆಯ ಮೂಲಕ ಪೋಷಿಸಿದನು ಕ್ಷಾಮ ತೀರುವವಗೆ ಅವಳ ಮಡಕೆಯಲ್ಲಿ ಹಿಟ್ಟು ತೀರಲಿಲ್ಲ, ಮೊಗೆಯಲ್ಲಿನ ಎಣ್ಣೆ ಮುಗಿದು ಹೋಗಲಿಲ್ಲ (1ಅರ 17:13,14). 3.ಕರ್ತನು ತನ್ನ ದೂತನನ್ನು ಕಳುಹಿಸಿ ಎಲೀಯನನ್ನು ಪೋಷಿಸಿದನು. ದೇವದೂತನು ಕೆಂಡದಲ್ಲಿ ಸುಟ್ಟ ರೊಟ್ಟಿಯನ್ನೂ, ಒಂದು ತಂಬಿಗೆ ನೀರನ್ನು ಕಳುಹಿಸಿದನು (1ಅರ 19:6).

ದೇವಮಕ್ಕಳೇ, ಕರ್ತನು ನಿಮ್ಮನ್ನೂ ಅದ್ಭುತವಾಗಿ ಪೋಷಿಸಿ ನಡೆಸುವನು. ಏನು ಊಟಮಾಡಬೇಕು. ಏನು ಕುಡಿಯಬೇಕು, ಏನು ಹೊದ್ದುಕೊಳ್ಳಬೇಕು ಎಂದು ಚಿಂತೆ ಮಾಡಬೇಡಿರಿ. ಇವೆಲ್ಲವುಗಳಿಗಾಗಿ ಅಜ್ಞಾನಿಗಳು ತವಕ ಪಡುತ್ತಾರೆ. ಇವೆಲ್ಲಾ ನಿಮಗೆ ಬೇಕಾಗಿದೆ ಎಂದು ಪರಲೋಕದಲ್ಲಿರುವ ನಿಮ್ಮ ತಂದೆಗೆ ತಿಳಿದದೆಯಷ್ಟೇ" ಎಂದು ಯೇಸುಕ್ರಿಸ್ತನು ಹೇಳಿರುವನು. ಆತನು ಈ ಭೂಮಿಯಲ್ಲಿದ್ದಾಗ ಐದು ರೊಟ್ಟಿ ಎರಡು ಮೀನಿನಿಂದ ಐದು ಸಾವಿರ ಜನರಿಗೆ ಉಣ್ಣ ಬಡಿಸಿದನು. ಆತನು ಪುನರುತ್ಥಾನ ಹೊಂದಿದ ಮೇಲೂ ತಿಬೇರಿಯ ಸಮುದ್ರದಂಡೆಯಲ್ಲಿ ಶಿಷ್ಯರನ್ನು ಪೋಷಿಸಿದನು. ಅವರು ದಡವನ್ನು ಮುಟ್ಟಿದಾಗ ಕೆಂಡಗಳನ್ನೂ ಅವುಗಳ ಮೇಲೆ ಇಟ್ಟಿದ್ದ ಮೀನುಗಳನ್ನು ರೊಟ್ಟಿ ಸಹಿತವಾಗಿ ಕಂಡರು' (ಯೋಹಾ 21:9).

**ನೆನಪಿಗೆ : 'ಪರಲೋಕದಿಂದ ಇಳಿದು ಬರುವ ಜೀವವುಳ್ಳ ರೊಟ್ಟಿಯು ನಾನೇ; ಈ ರೊಟ್ಟಿಯನ್ನು ಯಾವನಾದರೂ ತಿಂದರೆ ಅವನು ಸದಾಕಾಲ ....' (ಯೋಹಾ 6:51).**

# ದೀಕ್ಷಾಸ್ನಾನ!



**'ಆ ನಾವೆಯೊಳಗೆ ಕೆಲವರು ಅಂದರೆ ಎಂಟೇ ಜನರು ಸೇರಿ ನೀರಿನ ಮೂಲಕ ರಕ್ಷಣೆ ಹೊಂದಿದರು. ಆ ನೀರಿಗೆ ಅನುರೂಪವಾದ ದೀಕ್ಷಾಸ್ನಾನವು ಯೇಸುಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ' (1ಪೇತ್ರ 3:20,21).**

ಅಪೊ.ಪೇತ್ರನು ನೋಹನ ನಾವೆಯನ್ನು ದೀಕ್ಷಾಸ್ನಾನಕ್ಕೆ ಹೋಲಿಸಿರುವನು. ನೋಹನ ಚರಿತ್ರೆಯನ್ನು "ನಾವೆಗೆ ಮೊದಲು ನಾವೆಯನಂತರ" ಎಂದು ಎರಡು ಭಾಗವಾಗಿ ವಿಂಗಡಿಸಬಹುದು. ಜಲಪ್ರಳಯ ಬಂದು ಹೋದ ನಂತರ ಕರ್ತನು ಎಲ್ಲವನ್ನೂ ನೂತನಗೊಳಿಸಿದನು ಹಳೆಯದೆಲ್ಲಾ ನಾಶವಾಯಿತು.

ರಕ್ಷಣೆಯನ್ನು ನಾವು ಎರಡಾಗಿ ವಿಭಾಗಿಸುತ್ತೇವೆ. ರಕ್ಷಣೆ ಹೊಂದುವ ಮೊದಲು ಜೀವಿಸಿದ ಪಾಪ ಜೀವಿತ, ರಕ್ಷಣೆಯ ನಂತರ ಉಂಟಾದ ಪರಿಶುದ್ಧ ಜೀವಿತ. ಕ್ರೈಸ್ತ ಜೀವಿತದ ಅಸ್ತಿವಾರ ಉಪದೇಶಗಳಲ್ಲಿ ಒಂದು ದೀಕ್ಷಾಸ್ನಾನ, ಅದು ಕ್ರಿಸ್ತನೆಂಬ ನಾವೆಯೊಳಗೆ ರಕ್ಷಿಸಲ್ಪಡುವದರ ಕುರಿತಾಗಿದೆ. ನೋಹನ ದಿನಗಳಲ್ಲಿ ಇಡೀ ಪ್ರಪಂಚವು ಜಲಪ್ರಳಯದಲ್ಲಿ ಮುಳುಗಿ ಪಾಪಿಗಳು ನಾಶವಾಗಿ, ನೋಹನ ಕುಟುಂಬದವರು ನೂತನ ಸೃಷ್ಟಿಯಾಗಿ, ನೂತನ ಭೂಮಿಯಲ್ಲಿ ಬಂದು ಇಳಿದರು. ಅವರೊಂದಿಗೆ ಕರ್ತನು ಒಡಂಬಡಿಕೆ ಮಾಡಿಕೊಂಡನು. ಅದರಂತೆಯೇ ದೀಕ್ಷಾಸ್ನಾನವೂ ಯೇಸುಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ. ಅದು ಮೈಕೊಳೆಯನ್ನು ಹೋಗಲಾಡಿಸುವಂಥದಲ್ಲ, ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದ್ದೇ" (1ಪೇತ್ರ 3:21).

ಹೊಸ ಒಡಂಬಡಿಕೆಯ ಪ್ರಾರಂಭದಲ್ಲಿ ಸ್ನಾನಿಕನಾದ ಯೋಹಾನನು, ಪಶ್ಚಾತ್ತಾಪಪಟ್ಟು ದೇವರ ಬಳಿಗೆ ಬರುವವರಿಗೆ, ಪಾಪಕ್ಷಮಾಪಣೆಗಾಗಿ, ದೀಕ್ಷಾಸ್ನಾನ ಕೊಟ್ಟನು. ಅವನು ಕೊಟ್ಟ ದೀಕ್ಷಾಸ್ನಾನ, ಕ್ರಿಸ್ತನ ಪುನರುತ್ಥಾನದವರೆಗೂ ಸಾಕಾಗಿತ್ತು. ಆದರೆ ಕ್ರಿಸ್ತನ ನಂತರ, ನಾವು ಆತನಲ್ಲಿ ಇಟ್ಟಿರುವ ನಂಬಿಕೆಯು, ವಿಧೇಯತೆಯು ಮುಖ್ಯವಾದದ್ದಾಗಿರುವದು. ಈಗ ನಾವು ಕ್ರಿಸ್ತನ ಶ್ರಮಾ ಮರಣಗಳ ಮೂಲಕ ದೀಕ್ಷಾಸ್ನಾನ ಪಡೆಯುತ್ತೇವೆ. ನೀರಿನಲ್ಲಿ ನಿಲ್ಲುವಾಗ ಯೇಸುಕ್ರಿಸ್ತನು ನಮಗಾಗಿ ಶಿಲುಬೆಯಲ್ಲಿ ತನ್ನ ಪ್ರಾಣವನ್ನು ಕೊಟ್ಟಿರುವನು ಎಂದು ನಂಬುತ್ತೇವೆ.


ದೇವಮಕ್ಕಳೇ, ನೀರಿನಲ್ಲಿ ಮುಳುಗುವಾಗ, ನನಗಾಗಿ ಕ್ರಿಸ್ತನು ಹೂಣಲ್ಪಟ್ಟನು ಎಂದೂ, ನೀರಿನಿಂದ ಎದ್ದೇಳುವಾಗ, ಕ್ರಿಸ್ತನು ನನಗಾಗಿ ಸತ್ತು ಜೀವದಿಂದ ಎದ್ದನು ಎಂದೂ, ಆತನ ಪುನರುತ್ಥಾನದಿಂದ ಇನ್ನು ನಾನು ಜಯಭರಿತ ಜೀವಿತವನ್ನು ನಡೆಸುವೆನು ಎಂದು ಕರ್ತನೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವದಾಗಿದೆ. ಪ್ರಿಯರೇ, ದೀಕ್ಷಾಸ್ನಾನದ ಸತ್ಯಕ್ಕೆ ವಿಧೇಯರಾಗಿರುವಿರಾ?

**ನೆನಪಿಗೆ : 'ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು' (ಮಾರ್ಕ 16:16).**

# ನಿಮ್ಮ ಪ್ರಾರ್ಥನಾ ಜೀವಿತಕ್ಕೊಂದು ಬಲ

ಅಂತ್ಯದ ದಿನಗಳಲ್ಲಿ ಕರ್ತನು ಆಳವಾದ ಪ್ರಾರ್ಥನಾ ಜೀವಿತದಲ್ಲಿ ನೆಲೆಗೊಂಡವರನ್ನು, ಇನ್ನೂ ಅಧಿಕವಾಗಿ ಪ್ರಾರ್ಥಿಸುವಂತೆ ತನ್ನ ಆತ್ಮವನ್ನು ಸುರಿಸುವ ದಿನಗಳು ಈ ದಿನಗಳಾಗಿವೆ. ನೀವು ಪ್ರಾರ್ಥನೆಯ ಕುರಿತಾಗಿ ವಿಶೇಷ ಬಲ ಹಾಗೂ ಜ್ಞಾನವನ್ನು ಹೊಂದಿಕೊಳ್ಳಲು ನಿಮಗೊಂದು ಅವಕಾಶ. ಕೆಲವು ಪ್ರಾರ್ಥನಾ ಪುಸ್ತಕಗಳು ನಮ್ಮಲ್ಲಿ ಲಭ್ಯವಿದೆ.

Each Rs. 6/-



ಇವುಗಳ ಟಪಾಲು / ಕೋರಿಯರ್ ವೆಚ್ಚ ರೂ. 50/– Postal Charges Rs. 50/-

## ಇನ್ನು ಇತರ 260 ಸತ್ಯವೇದದ ಸಾರಂಶಗಳನ್ನೊಳಗೊಂಡ ಆತ್ಮೀಕ ಪುಸ್ತಕಗಳು ಲಭ್ಯವಿದೆ

# ಪುಸ್ತಕ ಮಿಷನರಿ ಸೇವೆಯಲ್ಲಿ ನಿಮ್ಮ ಪಾಲು

ಅನುದಿನದ ಆಹಾರ ಸಂಸ್ಥೆಯಿಂದ ಮುದ್ರಣಗೊಳಿಸಿದ ಪುಸ್ತಕಗಳು ಕರ್ನಾಟಕ ದಲ್ಲಿರುವ ಎಲ್ಲಾ ಜಾಗಗಳಿಗೆ ಮಿಷನರಿಗಳಾಗಿ ಹೋಗಿ ಯೇಸು ಕ್ರಿಸ್ತನ ನಾಮವನ್ನು ಘನಪಡಿಸುತ್ತಿದೆ. ಈ ಮಿಷನರಿ ಸೇವೆಗಾಗಿ ನಿಮ್ಮ ಪ್ರಾರ್ಥನೆ ಮತ್ತು ಉದಾರವಾದ ಕಾಣಿಕೆಯನ್ನು ಬಿತ್ತಿ ಈ ಸೇವೆಯನ್ನು ಪ್ರೋತ್ಸಾಹಿಸಿರಿ. ಅನೇಕ ಅಡೆತಡೆಗಳ ಮಧ್ಯದಲ್ಲಿ ಈ ಪುಸ್ತಕ ಮಿಷನರಿ ಸೇವೆಯನ್ನು ಮಾಡುವ ಕೃಪೆಯನ್ನು ಕರ್ತನು ಅನುಗ್ರಹಿಸಿದ್ದಾನೆ.

ಒಂದು ಪುಸ್ತಕ ಮುದ್ರಿಸಿ ಪ್ರಕಟಿಸಲು **15,000/–** ರೂಗಳು ಬೇಕಾಗಿರುತ್ತದೆ.
ಇದರಲ್ಲಿ ನಿಮಗೆ ಒಂದು ಸುಸಂದರ್ಭ; ಮೊತ್ತದ ವೆಚ್ಚದಲ್ಲಿ
**ನೀವು 10,000/– ರೂಗಳು ಕಾಣಿಕೆಯಾಗಿ ಕೊಡುವುದಾದರೆ**
ನಾವು ನಿಮ್ಮ ಹೆಸರಿನಲ್ಲಿ ಒಂದು ಪುಸ್ತಕವನ್ನು ಮುದ್ರಿಸಿ ಪ್ರಕಟಿಸುತ್ತೇವೆ.

Registered News Paper. RNI No. KARKAN/2000/1321
Postal Registration No. KA/BGGPO/2530/2018-2020
Licenced to post Without Pre-Payment, WPP No. 72,
Posted on 23rd & 24th of Every Month
at Bangalore PSO, Mysore Road, Bangalore - 560026

**ಈ ತಿಂಗಳ ಪುಸ್ತಕವು ನಿಮಗೆ ತಲುಪಿದೆ, ಅದಕ್ಕಾಗಿ ಕರ್ತನನ್ನು ಸ್ತುತಿಸಿರಿ. ಪ್ರತಿ ತಿಂಗಳೂ ಪುಸ್ತಕ ಸೇವೆ ನಿರ್ವಾಹಣೆಗಾಗಿ ನಾವು ಬಹು ದೊಡ್ಡ ಮೊತ್ತವನ್ನು ವಿನಿಯೋಗಿಸುತ್ತಿದ್ದೇವೆ. ಇದರ ನಿರ್ವಾಹಣೆಗಾಗಿ ನಮಗೆ ನಿಮ್ಮ ನೆರವು ಬಹಳ ಅಗತ್ಯವಾಗಿ ಬೇಕಾಗಿದೆ.**

## ನೀವು ವರ್ಷದ ಚಂದಾ ಹಣವನ್ನು ನವೀಕರಿಸಿರಿ...? ರೂ. 100/- ?????

ಈ ಮಾಸಿಕ ಸಂಚಿಕೆಗಳನ್ನು ನಿಮ್ಮ ಸಂಬಂಧಿಕರಿಗಾಗಲಿ, ನೆರೆಯವರಿಗಾಗಲಿ ಅಥವಾ ಸ್ನೇಹಿತರಿಗಾಗಲಿ ಪರಿಚಯಿಸಿ ಚಂದಾದಾರರಾಗುವಂತೆ ಪ್ರೇರೇಪಿಸಿ.

**ತಪ್ಪದೇ ದೇವರ ರಾಜ್ಯಕ್ಕಾಗಿ ನೆರವಿನ ಹಸ್ತವನ್ನು ನೀಡಿರಿ**

ಈ ಉನ್ನತ ಸೇವೆಗಾಗಿ ನಿಮ್ಮ ಪ್ರಾರ್ಥನೆ ಹಾಗೂ ಉದಾರವಾದ ಕಾಣಿಕೆಗಳನ್ನು ಬಿತ್ತಿ ಕರ್ತನಿಂದ ನೂತನ ಆಶೀರ್ವಾದಗಳನ್ನು ಹೊಂದಿಕೊಳ್ಳಿರಿ.

**ಅನುದಿನದ ಆಹಾರ ಸೇವೆಗೆ ನೀವು ಚಂದಾ ಅಥವಾ ಕಾಣಿಕೆಯನ್ನು ಕಳುಹಿಸಲು ಬಯಸುವುದಾದರೆ, ಎಂ.ಓ (MO) ಅಥವಾ ಕೆಳಗೆ ನೀಡಿರುವ ಬ್ಯಾಂಕ್ (Bank) ಅಕೌಂಟಿಗೆ ಪಾವತಿ ಮಾಡಬಹುದು.**

Account Name: ANUDHINADA AHARA
SBI Bank: 34706509264 IFSC Code: SBIN0005778

Anudhinada Ahara
24th, 'F' Cross, Egipura, Bangalore - 560 047
Ph: 080 - 2571 2448, 9986 571 571, 9341 96 8008
E-mail: goldenbibletext@gmail.com

Published on 15th of Every Month
Owned, Edited & Published by : Selvin Christopher George
Published from : 24th 'F' Cross, Ejipura, Viveknagar, Bangalore - 560 047